MOTION UNDER RULE 146.

Re. Society and Sleep rice in Price of essntntial Commodities in the State.

SRI T. R. SHAMMANNA.—I beg to move : " That the scarcity in essential commodities and steep rice in prices in recent moi ths of all commodities and the steps to be taken to combat the situation arising thereby be taken into consideration. "

MADAM SPEAKER.—Motion moved :

" that the scarcity in essential commodities and steep rice in prices in recent months of all commodities and the steps to be taken to combat the situation arising thereby be taken into consideration. "

† ಶ್ರೀ ಟಿ. ಆರ್ ಶಾಮಣ್ಣ.—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ನಮ್ಮ ದೇಶದಲ್ಲಿ ಹಾಗೂ ಮುಖ್ಯವಾಗಿ ನಮ್ಮ ರಾಜ್ಯದಲ್ಲಿರುವ ಜನತೆಗೆ ಕಳವಳವನ್ನು ಮತ್ತು ಸಂಕಷ್ಟವನ್ನು ಉಂಟುಮಾಡುತ್ತಿರುವ ಈ ಮುಖ್ಯವಾದ ಸಮಸ್ಯೆಗೆ ತಾವು ಪ್ರಾಧಾನ್ಯತೆ ಕೊಟ್ಟು ತಾವು ಇಲ್ಲಿ ದರ್ಜೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದಕ್ಕಾಗಿ ನಾನು ತಮಗೆ ಆಭಾರಿಯಾಗಿದ್ದೇನೆ. ಮಹಾರಾಷ್ಟ್ರ ಆಸೆಂಬ್ಲಿಯಲ್ಲಿ ದೊಡ್ಡ ಅಂಧೋಳನವಾದಂತೆ ನಮ್ಮಲ್ಲಿ ಸಹ ಅಗದಂತೆ ಈ ಒಂದು ದರ್ಜೆಗೆ ಅವಕಾಶ ಮಾಡಿಕೊಟ್ಟಿದ್ದೀರಿ ಈ ಒಂದು ಚರ್ಚೆಯಿಂದ ಜನರಿಗೆ ಏನಾದರೂ ಆನುಕೂಲವಾದರೆ ನನಗೂ ಸಹ ಸಂತೋಷವಾಗುತ್ತೆ ದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ನನಗೆ ೬೦ ವರ್ಷದ ಮೇಲಾಗಿದೆ. ನಾನು ಹುಡುಗನಾಗಿದ್ದಾಗ ಮೊದಲನೇ ಮಹಾಯುದ್ಧದ ಸ್ಥಿತಿಯನ್ನು ನೋಡಿದ್ದೇನೆ. ಎರಡನೇ ಮಹಾ ಯುದ್ಧವಾದಾಗ ಅದನ್ನು ಪೂರ್ಣವಾಗಿ ಪರಿಶೀಲನೆ ಮಾಡತಕ್ಕಂಥ ಅವಕಾಶ ನನಗೆ ಸಿಕ್ಕಿತ್ತು. ಹಾಗೂ ಅನೇಕ ಕಾಲಗಳಲ್ಲಿ ಬರಗಾಲ ಬಂದಿದ್ದನ್ನು ನಾನು ನೋಡಿದ್ದೇನೆ. ಅದರೆ ನನಗೆ ಅರಿವು ಬಂದ ಪ್ರಕಾರ ಕಳೆದ ೫೦ ವರ್ಷಗಳಲ್ಲಿ ಇಂತಹ ಒಂದು ದುಸ್ಥಿತಿ ಯಾವಾಗಲೂ ಬಂದಿರಲಿಲ್ಲ ಎಂದರೆ, ಈಗಿನ ಪರಿಸ್ಥಿತಿ ಯನ್ನು ತಿಳಿದುಕೊಂಡಿರ ತಕ್ಕಂಥ ಮಾನ್ಯ ಸಭಾ ಸದಸ್ಯರು ಸಹ ಒಪ್ಪುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ. ಜನಸಾಮಾನ್ಯರ ಕಷ್ಟ ಇಂದು ಹೇಳತೀರದಾಗಿದೆ. ಈ ಕಷ್ಟ ಬಂದಿರುವುದಕ್ಕೆ ಕಾರಣ ವೇನು ಎಂಬುದರ ಅರಿವು ನನಗೆ ಇದೆ. ಒಂದನೆಯದಾಗಿ ೩ ಸಲ ಪಾಕಿಸ್ತಾನದ ಜೊತೆಯಲ್ಲಿ ಯುದ್ಧವಾ ಯಿತು. ಚೈನಾದೇಶವು ಸಹ ನಮ್ಮ ದೇಶದ ಮೇಲೆ ಅಕ್ರಮಣ ಮಾಡಿತು.

ಶ್ರೀ ಕೋಣಂದೂರು ಲಿಂಗಪ್ಪ.—ಇತಂಹ ಗಹನವಾದ ವಿಷಯ ಇಲ್ಲಿ ಚರ್ಚೆಯಾಗುತ್ತಿರುವಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲ. ಆಹಾಧಾನ್ಯಗಳು ನಾಪತ್ತೆಯಾಗಿರುವಂತೆ ಆಹಾರದ ಮಂತ್ರಿಗಳು ಸಹ ನಾಪತ್ತೆಯಾಗಿದ್ದಾರೆ. ಇವರು ಕೇವಲ ಬಾಯಲ್ಲಿಯೇ ಮಳೆ ಸುರಿಸುತ್ತಾರೆ. ಮೊದಲು ಆಹಾರ ಇಲಾಖೆಯ ಮಂತ್ರಿಗಳು ತಾವು ಕರೆಸಬೇಕು.

ಅಧ್ಯಕ್ಷರು.—ಕೌನ್ಸಿಲ್‌ನಲ್ಲಿಯೂ ಸಹ ಇದೇ ವಿಷಯ ಚರ್ಚೆಯಾಗುತ್ತಿದೆ. ಇಷ್ಟರಲ್ಲಿಯೇ ಸಂಬಧ ಪಟ್ಟ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ಹೇಗೆ ?

ಅಧ್ಯಕ್ಷರು.—ನೆನ್ನೆ ದಿವಸ ನಡೆದ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಿತ್ತು. ಆ ಮನೆಯಲ್ಲಿಯೂ ಸಹ ಇದೇ ವಿಷಯ ಚರ್ಚೆಯಾಗುತ್ತಿರುವುದರಿಂದ ಇಲ್ಲಿ ಯಾವ ರೀತಿ ತೆಗೆದುಕೊಳ್ಳುವುದು ಎಂದು ಕೇಳಿದಕ್ಕೆ ಅವರು ಒಪ್ಪಲಿಲ್ಲ ; ಇಲ್ಲಿಯೂ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೆಲವು ಸದಸ್ಯರು ಹೇಳಿದರು. ಆದ್ದರಿಂದ ಈ ಪೊತ್ತು ಇದನ್ನು ತೆಗೆದು ಕೊಂಡಿದೆ. ಏಕಕಾಲದಲ್ಲಿ ಮಂತ್ರಿಗಳು ಎರಡು ಕಡೆ ಇರುವುದಕ್ಕೆ ಹೇಗೆ ಸಾಧ್ಯ ? ಈಗ ಇಲ್ಲಿರುವ ಮಂತ್ರಿಗಳು ನೋಟ್ ಮಾಡಿ ಕೊಳುತ್ತಾರೆ. ಸಂಬಂಧಪಟ್ಟ ಮಂತ್ರಿಗಳು ಬಂದಮೇಲೆ ಅವರಿಗೆ ಕೊಡುತ್ತಾರೆ.

ಶ್ರೀ ಟಿ. ಎಂ. ಮಂಜುನಾಥ.—ಇನ್ನೊಬ್ಬರ ಇಲಾಖೆಗೆ ಸಂಬಂಧಪಟ್ಟದ್ದನ್ನು ನಾವು ಗುರುತು ಹಾಕಿಕೊಳ್ಳುವುದಿಲ್ಲವೆಂದು ಬೇರೆ ಮಂತ್ರಿಗಳು ಹೇಳುತ್ತಾರೆ. ಆ ಈ ರೀತಿ ಹೇಳಿದ್ದನ್ನು ನಾನು ಕೇಳಿದ್ದೇನೆ

ಅಧ್ಯಕ್ಷರು.—ಈ ಮನೆಯಲ್ಲಿ ಆ ರೀತಿ ಯಾರೂ ಹೇಳಿಲ್ಲ ; ಮಾನ್ಯ ಸದಸ್ಯರಿಗೇನಾದರು ಪರ್ಸನಲ್ಲಾಗಿ ಆ ರೀತಿ ಹೇಳಿರಬಹುದು ಅಷ್ಟೇ; ಫಂಡ್ ಮಿನಿಸ್ಟರ್ ಇನ್ನೇನು ಬರುತ್ತಾರೆ ಎಂದು ಹೇಳಿದರೂ ಸಹ ಸಮಾಧಾನವಾಗದಿದ್ದರೆ ಹೇಗೆ ?

SRI K. H. RANGANATH.—Let the hon. member continue his speech. If he is very particular about the concered hon. Minister will come. In the meantime, I shall take note of the views of the hon-Member.

ಶ್ರೀ ಟಿ. ಆರ್. ಶಾಮಣ್ಣ.—ಬೆಲೆಗಳ ಹೆಚ್ಚುವರಿ ಬಗ್ಗೆ ಮತ್ತು ದಿನನಿತ್ಯವಸ್ತುಗಳು ಸಿಕ್ಕದಿರುವ ಈ ಬಗ್ಗೆ ನಾವು ಇಲ್ಲಿ ಮಾತನಾಡಿದಾಗ ಎಲ್ಲಾ ಇದು ಕೇಂದ್ರಕ್ಕೆ ಸಂಬಂಧಪಟ್ಟ ವಿಚಾರ ; ಇದರ ಬಗ್ಗೆ ರಾಜ್ಯಸರ್ಕಾರ ಏನೂ ಸಹಾಯ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನ ತಕ್ಕಂಥ ಸಬೂಬನ್ನು ಹೇಳುತ್ತಾರೆ. ಆದರೆ ಈ ರಾಜ್ಯ ಸರ್ಕಾರದ ಹೊಣೆಗಾರಿಕೆ ಇದರ ಬಗ್ಗೆ ಎಷ್ಟರಮಟ್ಟಿಗೆ ಎಂಬುದನು ನಾವು ನೋಡಬೇಕಾಗಿದೆ ಶ್ರೀಮತಿ ಇಂದಿರಾಗಾಂಧಿಯವರ ಕೃಪಾಕಟಾಕ್ಷದಿಂದ ಸ್ಥಾಪನೆಯಾದ ಈ ಸರ್ಕಾರ ತಮ್ಮ ಒಂದು ಪ್ರಭಾವವನ್ನು ಕೇಂದ್ರ ಸರ್ಕಾರದ ಮೇಲೆ ಭೀರಿ ಜನರಿಗೆ ಆಗುತ್ತಿರುವ ಕಷ್ಟನಷ್ಟಗಳನ್ನು ಮತ್ತು ಆ ಸಂಖವನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೇ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಅತಿಮುಖ್ಯವಾಗಿ ಹೇಳಬೇಕಾದರೆ, ನಮ್ಮ ಮಂತ್ರಿ ವರ್ಯರುಜನರಿಗೆ ಉಪಕಾರ ಮಾಡಬೇಕು ಎಂಬ ಮನೋಭಾವವನ್ನು ಹೊಂದಿದ್ದರೆ ಮತ್ತು ಸತ್ಯವಂತರಾಗಿದ್ದರೆ ಖಂಡಿತವಾಗಿಯೂ ಈ ರೀತಿಯ ರಾಜವೈಭವದಿಂದ ಜೀವನ ಮಾಡುತ್ತಿರಲಿಲ್ಲ. ಜನಸಾಮಾನ್ಯರು ಯಾವ ರೀತಿ ಕಷ್ಟ ಪಡುತ್ತಿದ್ದಾರೋ, ಹೇಗೆ ಜೀವನ ಮಾಡುತ್ತಿದ್ದಾರೋ, ಅದೇ ರೀತಿ ತಾವೂ ಸಹ ಜೀವನ ಮಾಡಬೇಕು ಎಂಬ ಮನೋಭಾವವನ್ನು ಇವರ ಹೊಂದಿದ್ದರೆ, ಈಗಿನ ಚೋಟಾ ಮಹಾರಾಜರಂತೆ, ಬಡಾ ಮಹಾರಾಜರಂತೆ ಜೀವನ ಮಾಡುತ್ತಿರಲಿಲ್ಲ ; ಜನಸಾಮಾನ್ಯರ ಜೊತೆಯಲ್ಲಿ ಬೆರೆತು ಇವರೂ ಸಹ ಜೀವನ ಮಾಡಿದ್ದರೆ ಅವರ ಕಷ್ಟದ ಅರಿವು ಇವರಿಗೆ ಅರ್ಥವಾಗುತ್ತಿತ್ತು ;

ಅವರು ಮಾಡತಕ್ಕಂಥ ರಾಜ ವೈಭವದ ಜೀವನದಿಂದ ಬಡಜನಗಳ ಕಷ್ಟ ಅರ್ಥವಾಗುತ್ತಾ ಇಲ್ಲ. ಆದುದರಿಂದ ಈ ರಾಜ್ಯದ ಪರಿಸ್ಥಿತಿ ಇಷ್ಟು ಕೇಡಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

9-30 A.M.

ಮೊದಲನೆಯದಾಗಿ ಹೇಳುವುದಾದರೆ ಈ ಸಾಮಾನಿನ ಬೆಲೆಗಳ ಏರಿಕೆಗೆ ಯಾವ ಪ್ರಶ್ನೆಯನ್ನು ಕೇಳಿದರೂ ಕೂಡ ಇದು ಕೇಂದ್ರ ಸರ್ಕಾರಕ್ಕೆ ಸೇರಿದ್ದು ಎನ್ನುವ ಉತ್ತರ ಕೊಡುತ್ತಾರೆ, ಎರಡನೆಯದಾಗಿ ಕಳ್ಳಮಾರ್ಕೆಟ್ಟಿನ ವರ್ತಕರ ಮೇಲಿನ ಹೊಣೆಗಾರಿಕೆಗೆ ಎಲ್ಲದಕ್ಕಿಂತ ಹೆಚ್ಚಾಗಿ ವಿರೋಧಪಕ್ಷದವರ ಗಲಾಟೆ ಮತ್ತು ವಿರೋಧಪಕ್ಷದವರು ಇದಕ್ಕೆ ಬೇಕಾದಂಥ ಕುಮ್ಮಕ್ಕು ಕೊಡದೇ ಇರತಕ್ಕಂಥಾದ್ದು ಎನ್ನುವ ಕಾರಣಗಳನ್ನು ಕೊಡುತ್ತಾರೆ, ಆದರೆ ಇದಕ್ಕೆ ನನ್ನ ಪ್ರಶ್ನೆಯಾದರೂ ಇಷ್ಟೆ. ಈ ಸರ್ಕಾರ ಅಧಿಕಾರಕ್ಕೆ ಬಂದು ೨ ೧/೨ ವರ್ಷವಾಯಿತು. ಮೊದಲನೆಯದಾಗಿ ಈ ಬೆಲೆಗಳ ಏರಿಕೆಗೆ ಮುಖ್ಯವಾದಂಥ ಕಾರಣ ಲಂಚಕೋರತನವನ್ನು ತಪ್ಪಿಸುವುದಕ್ಕೆ ಈ ಸರ್ಕಾರದ ಕೈಯಲ್ಲಿ ಏತಕ್ಕೆ ಸಾಧ್ಯವಾಗಲಿಲ್ಲ ಎನ್ನುವುದರ ಬಗ್ಗೆ ನಾನು ಪ್ರಶ್ನೆ ಮಾಡಬೇಕಾಗಿದೆ. ಮತ್ತು ಕಳ್ಳ ವ್ಯಾಪಾರದಲ್ಲಿ ಮತ್ತು ಕಪ್ಪು ಹಣದಲ್ಲಿ ವ್ಯಾಪಾರ ಮಾಡತಕ್ಕಂಥ ವರ್ತಕರನ್ನು ಎಷ್ಟು ಜನರನ್ನು ಹಿಡಿದು ಶಿಕ್ಷೆ ಮಾಡಿದ್ದೀರಾ? ಮತ್ತು ಅದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ? ಈ ಬಗ್ಗೆ ಸಾಕಾದಷ್ಟು ಅಂಕಿಅಂಶ ನಮಗೆ ಕೊಟ್ಟಿಲ್ಲ. ಈ ಬಗ್ಗೆ ನನಗೆ ಗೊತ್ತಿರುವ ಹಾಗೆ ವರ್ತಕರ ಮಣಿದು ತಮಗೆ ಬೇಕಾದಂಥ ಪಾರ್ಟಿಗೆ ಹಣ ಕೊಡಿಸುವುದಕ್ಕೋಸ್ಕರವಾಗಿಯೋ ಯಾವುದಕ್ಕಾದರೂ ಕೂಡ ಆ ವರ್ತಕರನ್ನು ಅನುಸರಿಸಬೇಕಾಗಿರುವುದರಿಂದ ಅವರ ಮೇಲೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಈ ಸರ್ಕಾರ ಪೂರ್ತಿಯಾಗಿ ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಎಲ್ಲಿಯವರೆಗೆ ಜನಗಳ ನೈತಿಕ ಮಟ್ಟ ಸರಿಯಾಗಿ ಮಾಡುವುದಿಲ್ಲವೋ, ಎಲ್ಲಿಯವರೆಗೆ ಕಳ್ಳಸಂತೆ ಮತ್ತು ಕಪು ಹಣವನ್ನು ನಿಲ್ಲಿಸುವುದಕ್ಕೆ ಸಾಧ್ಯಾವಾಗುವುದಿಲ್ಲವೋ ಅಲ್ಲಿಯವರೆಗೆ ಜನಗಳಿಗೆ ಸೌಕರ್ಯವನ್ನು ಕಲ್ಪಿಸುವುದಕ್ಕೆ ಈ ಸರ್ಕಾರದ ಕೈಯಲ್ಲಿ ಸಾಧ್ಯವಾಗುವುದಿಲ್ಲ

(ಶ್ರೀ ಟಿ. ಆರ್. ಶಾಮಣ್ಣ)

ಆದುದರಿಂದ ಈ ಸರ್ಕಾರ ಪೂರ್ಣವಾದ ಒಂದು ಜವಾಬ್ದಾರಿ ಹೊರಬೇಕೆ ಹೊರತು ವಿರೋಧಪಕ್ಷದವರ ಮೇಲಾಗಲಿ ಅಥವಾ ಕೇಂದ್ರ ಸರ್ಕಾರದ ಮೇಲಾಗಲಿ ಹೊರಿಸುವುದನ್ನು ಬಿಟ್ಟು ತಾವು ಸುಮ್ಮನೆ ಕೂತು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನಾನು ಒತ್ತಿ ಹೇಳಬೇಕಾಗಿದೆ.

ಇನ್ನು ಈ ವಿಚಾರದಲ್ಲಿ ಹೇಳಬೇಕಾದರೆ ಯಾವ ಸಾಮಾನುಗಳನ್ನು ತೆಗೆದುಕೊಂಡರೂ ಕೂಡ ಕಲಬೆರಕೆ ಇಲ್ಲದೇ ಇರುವ ಸಾಮಾನುಗಳು ಸಿಕ್ಕುತ್ತದೆಯೇ ಎನ್ನುವುದನ್ನು ನಾವು ಈವೊತ್ತಿನ ದಿವಸ ಯೋಚನೆ ಮಾಡಬೇಕಾಗಿದೆ. ಉದಾಹರಣೆಗೆ ಎಣ್ಣೆ ತೆಗೆದುಕೊಳ್ಳಿ, ಬೆಣ್ಣೆ ತೆಗೆದುಕೊಳ್ಳಿ, ಕಾಫಿಪುಡಿ ತೆಗೆದುಕೊಳ್ಳಿ, ಅಕ್ಕಿ ತೆಗೆದುಕೊಳ್ಳಿ ಬೇಳೆ ತೆಗೆದುಕೊಳ್ಳಿ ಅಲ್ಲದೆ ಪ್ರತಿನಿತ್ಯ ಉಪಯೋಗಿಸುವ ಯಾವ ಸಾಮಾನನ್ನೇ ತೆಗೆದುಕೊಳ್ಳಲಿ ಎಲ್ಲದರಲ್ಲೂ ಕಲಬೆರಕೆ ಸರಿಯಾದಂಥ ರೀತಿಯಲ್ಲಿ ಅಳತೆಯೂ ಕೂಡ ಸಿಕ್ಕುತ್ತಾ ಇಲ್ಲ. ಈ ಬಗ್ಗೆ ನನ್ನದೇ ಒಂದು ಉದಾಹರಣೆ ಹೇಳಬೇಕಾದರೆ ನಾನು ೩೦ ಮೈಲಿ ದೂರದಿಂದ ಬೆಂಗಳೂರಿಗೆ ಬಂದು ೪೦ ವರ್ಷಗಳಾಯಿತು ಆಗ ನನ್ನ ಜೀವನ ಶುರು ಮಾಡಿದಾಗ ನನ್ನ ವರಮಾನ ಕೇವಲ ೩೦ ರೂಪಾಯಿಗಳು ಇತ್ತು. ಈಗ ಸುಮಾರು ಅದರ ೫೦ ರಷ್ಟು ಹೆಚ್ಚಾಗಿರಬಹುದು. ಇಂಕಂಟ್ಯಾಕ್ಸ್ ಲೆಕ್ಕದ ಪ್ರಕಾರ ನನಗೆ ವರ್ಷ ಒಂದಕ್ಕೆ ೨೪ ಸಾವಿರ ರೂಪಾಯಿಗಳ ಸಂಪಾದನೆ ಇದ್ದರೂಕೂಡ ಹಿಂದೆ ನಾನು ೩೦ ರೂಪಾಯಿ ತೆಗೆದುಕೊಂಡು ಏನು ಸುಖವಾದ ಜೀವನ ಮಾಡುತ್ತಿದ್ದೆನೋ ಅಷ್ಟು ಉತ್ತಮವಾದ ಜೀವನ ಇಂದು ಆಗುತ್ತಾ ಇಲ್ಲ. ಈ ಬಗ್ಗೆ ಇನ್ನೂ ಹೇಳುವುದಾದರೆ ನನ್ನ ಕುಟುಂಬದಲ್ಲಿ ೮ ಜನ ಇದ್ದಾರೆ. ನಾನು ಹಾಲು ಒಂದಕ್ಕೆ ೨೦೦ ರೂಪಾಯಿ ಖರ್ಚು ಮಾಡುತ್ತಿದ್ದೇನೆ ಇನ್ನು ಬಾಕಿ ಸಾಮಾನಿನ ಬೆಲೆ ಎಷ್ಟಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತಿನ ದಿವಸ ೨೦೦ ರೂಪಾಯಿ ಸಂಪಾದನೆ ಮಾಡತಕ್ಕಂಥಾ ವ್ಯಕ್ತಿ ಯಾವರೀತಿ ತನ್ನ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿದರೆ ಅವನ ಜೀವನ ಬಹಳ ಕಷ್ಟತರವಾದುದು ಎಂದು ಹೇಳಬಯಸುತ್ತೇನೆ. ಈವೊತ್ತಿನ ಪರಿಸ್ಥಿತಿ ಅಂಥಾ ಕಷ್ಟಕ್ಕೆ ಬಂದಿರುವುದರಿಂದ ಸರ್ಕಾರ ತನ್ನ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ಸರ್ಕಾರ ಆಡಳಿತ ವಹಿಸಿಕೊಂಡ ಮೇಲೆ ಈ ಸರ್ಕಾರದ ಪೂರ್ಣ ಹೊಣೆಗಾರಿಕೆ, ಅತಿ ಮುಖ್ಯವಾದಂಥ ಹೊಣೆಗಾರಿಕೆ ಜನಗಳಿಗೆ ಬೇಕಾದಂಥ ಆಹಾರ, ಜನಗಳಿಗೆ ಬೇಕಾದಂಥ ವಸತಿ ಸೌಕರ್ಯ ಮತ್ತು ಜನಗಳಿಗೆ ಬೇಕಾದಂಥ ಬಟ್ಟೆ ಈ ಮೂರನ್ನು ಸರಿಯಾಗಿ ಒದಗಿಸತಕ್ಕಂಥಾ ಜವಾಬ್ದಾರಿ ಈ ಸರ್ಕಾರದ ಮೇಲೆ ಬಿದ್ದಿದೆ ಎಂದು ಹೇಳಿದರೆ ಎಲ್ಲರೂ ಒಪ್ಪಬೇಕಾದಂಥ ವಿಚಾರ. ಈ ೨½ ವರ್ಷದಿಂದ ಈ ಸರ್ಕಾರ ಇದನ್ನು ಎಷ್ಟರಮಟ್ಟಿಗೆ ಸುಧಾರಣೆ ಮಾಡಿದ್ದಾರೆ ಎಂದರೆ ಆಹಾರದ ಬೆಲೆ ಸುಮಾರು ಮೊದಲು ಏನು ಬೆಲೆ ಇತ್ತೋ ಅದರ ೨-೩ ರಷ್ಟು ಇನ್ನು ಕೆಲವು ಸಂದರ್ಭದಲ್ಲಿ ೪ ರಷ್ಟು ಹೆಚ್ಚಾಗಿರುವುದನ್ನು ಅನೇಕ ಸಂದರ್ಭದಲ್ಲಿ ನೋಡಿದ್ದೇನೆ. ಕೇಂದ್ರ ಸರ್ಕಾರದವರು ಮೊದಲು ಫೈನ್ ಕ್ಲಾತ್‌ಗೆ ಎಕ್ಸೈಜ್ ಡ್ಯೂಟಿಯನ್ನು ಏರಿಸುತ್ತಾ ಇದ್ದರು, ಈಗ ಇದ್ದಕ್ಕಿದ್ದ ಹಾಗೆ ಆರ್ಡಿನರಿ ಬಟ್ಟೆಗೂ ಕೂಡ ೩೦ ಪರ್ಸೆಂಟ್ ಅಷ್ಟನ್ನು ಏರಿಸಿದ್ದಾರೆ, ಅಲ್ಲದೆ ಮೊದಲು ಖಾದಿ ಬಟ್ಟೆಗೆ ರಿಯಾಯಿತಿ ಇದ್ದಿತು, ಈಗ ನಾವು ಹಾಕಿಕೊಳ್ಳ ತಕ್ಕಂಥ ಖಾದಿ ಬಟ್ಟೆಗೂ ಇರುವ ರಿಯಾಯಿತಿಯನ್ನು ತೆಗೆದು ಹಾಕಿದ್ದಾರೆ.

ಇನ್ನು ವಾಸದ ಮನೆಗಳ ವಿಚಾರ ಹೇಳುವುದಾದರೆ ಸಣ್ಣ ಗುಡಿಸಲುಗಳಲ್ಲಿ ವಾಸ ಮಾಡತಕ್ಕಂಥವರಿಗೆ ಪರವಾಯಿಲ್ಲ. ಆದರೆ ಬಡಮನೆತನದವರು, ದೊಡ್ಡ ಸಂಸಾರವನ್ನು ಇಟ್ಟುಕೊಂಡವರು ಸಣ್ಣ ರೂಮುಗಳನ್ನು ತೆಗೆದುಕೊಂಡು ಹೆಚ್ಚು ಬಾಡಿಗೆ ಕೊಡಬೇಕಾದಂಥ ಸಂದರ್ಭ ಬಂದಿದೆ. ಅನೇಕರು ಸಾಲಸೋಲಗಳನ್ನು ಮಾಡಿಕೊಂಡು ಬಹಳ ಕಷ್ಟದಲ್ಲಿದ್ದಾರೆ. ಆದುದರಿಂದ ನಾನು ಹೇಳುವುದು ಸಾಮಾನ್ಯ ಜನಗಳಿಗೆ ಬೇಕಾದಂಥ ಆಹಾರ ಮತ್ತು ಒಂದು ವಾಸದ ಮನೆ ಮತ್ತು ಉಡುವುದಕ್ಕೆ ಒಂದು ಬಟ್ಟೆ ಇವು ಮೂರೂ ಕೂಡ ಸರಿಯಾದಂಥ ಬೆಲೆಗೆ ಸಿಗದೇಹೋದರೆ ಯಾವ ಸರ್ಕಾರ ಇದ್ದರೆ ತಾನೇ ಏನು ಪ್ರಯೋಜನ ಎನ್ನುವುದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಕಳೆದ ವರ್ಷ ಒಂದು ರೂಪಾಯಿಗೆ ಒಂದು ಕಿಲೋ ಅಕ್ಕಿ ಸಿಗುವಂಥಾದ್ದು ಈವೊತ್ತಿನ ದಿವಸ ೨ ೧/೨-೩ ರೂಪಾಯಿ ಆಗಿದೆ. ರಾಗಿ ಬೆಲೆ ನೋಡಿದರೆ ಒಂದು ಕಿಲೋಗೆ ೧-೫೦, ೧-೬೦ ಪೈಸೆ ಆಗಿದೆ, ಒಂದು ಬಡ ಸಂಸಾರದಲ್ಲಿ ೬-೭ ಜನ ಇರತಕ್ಕಂಥಾವರು ಈ ಬೆಲೆಯನ್ನು ಕೊಟ್ಟು ಆಹಾರಧಾನ್ಯವನ್ನು ತೆಗೆದುಕೊಂಡು ಹೇಗೆ ಸಂಸಾರವನ್ನು ತೂಗಿಸಿಯಾರು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಬೇಳೆ ಬೆಲೆ ನೋಡಿದರೆ ಗಗನಕ್ಕೆ ಏರಿದೆ ಎಣ್ಣೆ ಬೆಲೆ ನೋಡಿದರೆ ಹಿಂದೆ ಎಣ್ಣೆಬೀಜ ಸಿಗದಂಥಾ ಕಾಲದಲ್ಲೂ ಕೂಡ ಎಣ್ಣೆ ಧಾರಣೆ ೮-೯ ರೂಪಾಯಿ ಮೇಲೆ ಇರಲಿಲ್ಲ. ಈವೊತ್ತಿನ ದಿವಸ ಅದೂ ಕೂಡಾ ಗಗನಕ್ಕೆ ಏರಿದೆ. ಇದಲ್ಲದೆ ಹಾಲು,

ತರಕಾರಿ ಪ್ರತಿನಿತ್ಯ ಬೇಕಾದಂಥ ಯಾವ ಸಾಮಾನುಗಳ ಬೆಲೆ ತೆಗೆದುಕೊಂಡರು ಗಗನಕ್ಕೆ ಏರುತ್ತಾ ಇದೆ ಯಲ್ಲಾ ಎನ್ನುವ ಶಂಕೆ ಜನರಲ್ಲಿ ಇದೆ ಮತ್ತು ಈ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಯಾವ ವ್ಯತ್ಯಾಸವನ್ನೂ ಮಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ನಾನು ಮೊದಲೇ ಹೇಳಿದ ಹಾಗೆ ಈ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಿಂದ ಸೃಷ್ಟಿಯಾದದ್ದು ಯುದ್ಧಕ್ಕೆ ಮುಂಚೆ ನಮ್ಮ ಭಾರತ ದೇಶದಲ್ಲಿ ೪೦೦ ಕೋಟಿ ರೂಪಾಯಿ ಹಣ ಬದಲಾವಣೆ ಯಲ್ಲಿ ಇತ್ತು. ಈವೊತ್ತಿನ ದಿವಸ ೬ ಸಾವಿರದಿಂದ ೭ ಸಾವಿರದವರೆಗೆ ನೋಟುಗಳು ಚಲಾವಣೆಯಲ್ಲಿವೆ. ಅದರಲ್ಲಿ ಕೋಟಾನುಕೋಟಿಗಳು ಎಷ್ಟು ಇದೆ ಎನ್ನುವುದು ಗೊತ್ತಿಲ್ಲ. ಆದುದರಿಂದ ಈ ಹಣದ ಚಲಾವಣೆ ಒಂದಕ್ಕೆ ೨೦ರಷ್ಟು ಏರಿಸಿದಂಥ ಜವಾಬ್ದಾರಿ ಮತ್ತು ಈ ಡಿಫಿಸಿಟ್ ಫೈನಾನ್ಸ್‌ಗೆ ಕಾರಣರಾದರು ಯಾರು ಎನ್ನುವುದನ್ನು ಸರ್ಕಾರದವರು ಮತ್ತು ಅಸೋಸಿಯೇಷನ್‌ನವರು ಈವೊತ್ತಿನ ದಿವಸ ಯೋಚನೆ ಮಾಡಬೇಕಾಗಿದೆ. ಈ ಸಾಮಾನಿನ ಬೆಲೆ ಯನ್ನು ಇಳಿಸಬೇಕಾದಂಥ ಪಕ್ಷದಲ್ಲಿ ಮೊದಲನೆಯದಾಗಿ ಹಣದುಬ್ಬರವನ್ನು ತಡೆಗಟ್ಟತಕ್ಕಂಥ ಪ್ರಭಾವ ಸರ್ಕಾರದಲ್ಲಿ ಇರಬೇಕಾಗಿತ್ತು. ಈ ಹಣದುಬ್ಬರದಿಂದ ಈ ರಾಜ್ಯದ ಆಡಳಿತವನ್ನು ನಡೆಸುವುದಕ್ಕಾಗುವು ದಿಲ್ಲ ಏತಕ್ಕೆಂದರೆ ಅತಿವೇಗದಲ್ಲಿ ಸಾಮಾನಿನ ಬೆಲೆ ಏರುವುದಕ್ಕೆ ಮುಖ್ಯವಾದ ಕಾರಣರು ಸರ್ಕಾರದವರು ಎನ್ನುವುದನ್ನು ಅವರು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ.

ಇನ್ನು ಎರಡನೆಯದಾಗಿ ಯಾವ ರಾಜ್ಯ ಸುಖೀರಾಜ್ಯವಾಗಬೇಕಾದರೆ ಉತ್ಪನ್ನ ಹೆಚ್ಚಾಗಬೇಕಾ ದಂಥಾದ್ದು ಅತಿ ಮುಖ್ಯ. ಉತ್ಪನ್ನ ಹೆಚ್ಚು ಮಾಡತಕ್ಕಂಥಾದ್ದರಲ್ಲಿ ನಾನಾ ಕಾರಣಗಳಿಂದ ಸರ್ಕಾರ ವಿಫುಲವಾಗಿದೆ ಎನ್ನುವುದನ್ನು ನಾನು ಹೇಳಬೇಕಾಗಿದೆ.

ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೆ ಪ್ರಕೃತಿಯ ವಿಕೋಪಕ್ಕೆ ರಾಜ್ಯ ಮತ್ತು ಭಾರತ ದೇಶ ಅನೇಕ ಸಂದರ್ಭಗಳಲ್ಲಿ ಕಷ್ಟಕ್ಕೆ ಸಿಕ್ಕಿರಬಹುದು. ಆದರೆ ನೆನ್ನೆ ಮತ್ತು ಮೊನ್ನೆಯಿಂದಲೂ ಈ ವಿಷಯ ವಾಗಿ ಚರ್ಚೆಯಾಗಿದೆ. ಕೆಲವುಸಾರಿ ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಸಿಕ್ಕಿದೆ. ನನ್ನ ಪ್ರಶ್ನೆಯಾದರೂ ಇಷ್ಟೆ ಮಾತೆತ್ತಿದರೆ ಬೆಲೆ ಏರಿಕೆ, ಸಾಮಾನುಗಳ ಅಭಾವ ಭಾರತದೇಶಕ್ಕೆ ಅಲ್ಲ ಇಡೀ ಪ್ರಪಂಚಕ್ಕೆ ಇರ ತಕ್ಕಂಥಾದ್ದು ಎಂದು ಹೇಳುತ್ತಾರೆ. ನಾನು ಇದರ ಬಗ್ಗೆ ಒಂದು ಪ್ರಶ್ನೆ ಕೇಳಬೇಕಾಗುತ್ತದೆ. ಯುದ್ಧ ದಿಂದ ಸರ್ವ ನಾಶ ಹೊಂದಿದಂತಹ ಜಪಾನ್ ಮತ್ತು ಜರ್ಮನಿ ದೇಶಗಳು ಏನು ಇವೆ ಅವು ಇವೊತ್ತಿನ ದಿವಸ ಅಲ್ಲಿನ ಜನರಿಗೆ ಎಷ್ಟು ಸುಖಬೇಕೋ ಅಷ್ಟು ಸುಖವಾಗಿ ಇರುವುದಕ್ಕೆ ಕಾರಣವಾದರೂ ಏನು? ಯುದ್ಧದಿಂದ ಜಾಸ್ತಿ ಪೆಟ್ಟು ಬೀಳದೆ ಇದ್ದರೂ ಸಹಿತ ನಮ್ಮ ದೇಶದ ಜನರಿಗೆ ಸುಖವಿಲ್ಲದೇ ಇರುವುದಕ್ಕೆ ಸರ್ಕಾರ ಕಾರಣವೇ? ಇದಕ್ಕೆ ಯಾರು ಹೊಣೆ? ಬೇರೆ ರಾಷ್ಟ್ರಗಳಿಗೆ ಹೋಲಿಸಿ ನೋಡಿದರೆ ಜರ್ಮನಿಯಲ್ಲಿ ಜನ ಬಹಳ ಸುಖವಾಗಿದ್ದಾರೆ ವೆಸ್ಟ್ ಜರ್ಮನಿ ಮತ್ತು ಈಸ್ಟ್ ಜರ್ಮನಿ ಯುದ್ಧದಿಂದ ಸಾಕಷ್ಟು ತೊಂದರೆ ಅನುಭವಿಸಿದ್ದರೂ ಕೂಡ ಇವೊತ್ತಿನ ದಿವಸ ಅಲ್ಲಿ ಜನರು ಸುಖವಾಗಿದ್ದಾರೆಂದರೆ ಅದಕ್ಕೆ ಕಾರಣ ವಾದರೂ ಏನು? ನಮ್ಮ ದೇಶ ಆ ರೀತಿ ಯಾವ ಯುದ್ಧದ ಹೊಡೆತದಿಂದ ಸಿಕ್ಕದಿದ್ದರೂ ಈ ರೀತಿ ಜನ ರಿಗೆ ಕಷ್ಟ ಬರಲು ಕಾರಣವೇನು? ಮೊನ್ನೆ ತಾನೇ ನಮ್ಮ ಸ್ನೇಹಿತರೊಬ್ಬರು ಫ್ರಾನ್ಸ್‌ಗೆ ಹೋಗಿ ಬಂದರು. ಅವರು ಹೇಳಿದರು ಅಲ್ಲಿನ ಜನರು ಯಾವ ರಾಜಕೀಯಕ್ಕೂ ಹೋಗದೆ ಅವರ ಜೀವನವಾಯಿತು ಅವ ರಾಯಿತು ಎಂದು ಹೇಳಿದರು. ಈ ಸಂದರ್ಭದಲ್ಲಿ ಒಂದು ವಿಚಾರ ಹೇಳುವುದಾದರೆ ಶ್ರೀಮತಿ ಇಂದಿರಾ ಗಾಂಧಿಯವರು ಎರಡು ಉತ್ತಮವಾದ ಕೆಲಸವನ್ನು ಉತ್ತಮವಾದ ರೀತಿಯಲ್ಲಿ ಮಾಡಿದ್ದಾರೆಂದು ಹೇಳ ಬಹುದು. ಅದು ಏನು ಎಂದರೆ ಒಂದು ಬಾಂಗ್ಲಾದೇಶದ ಯುದ್ಧದ ಸಮಯದಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಅವರ ಜೊತೆಯಲ್ಲಿ ಇರತಕ್ಕಂಥ ಜನ ಏನು ಇದ್ದಾರೆ ಇಂದಿರಾ ಗಾಳಿಯಲ್ಲಿ ತೂರಿ ಬಂದಂತ ಜನ ಅವರಿಂದ ನಮ್ಮ ದೇಶಕ್ಕೆ ಮತ್ತು ನಮ್ಮ ಜನಗಳಿಗೆ ಕಷ್ಟ ಹೆಚ್ಚಾಗುತ್ತಿದೆಯೆಂದು ಹೇಳಿ ದರೆ ತಪ್ಪಾಗಲಾರದು. ಇನ್ನು ಮುಂದಾದರೂ ಪರಿಸ್ಥಿತಿ ಉತ್ತಮವಾಗುತ್ತದೆ ಎನ್ನುವ ಹಾಗೆ ಕಾಣುತ್ತಿಲ್ಲ. ಮುಂದೆ ಜನರು ಸುಖಪಡುತ್ತಾರೆ ಎಂದು ಹೇಳುವ ಹಾಗೆ ಇಲ್ಲ. ಹಳ್ಳಿಗಾಡಿನ ಕಡೆಗೆ ಹೋದರೆ ಅಲ್ಲಿ ಜನರು ಹೇಳುತ್ತಾರೆ ಬ್ರಿಟೀಷರ ಕಾಲದಲ್ಲಿಯೇ ಕಾಲ ಎಷ್ಟೋ ಚೆನ್ನಾಗಿತ್ತು ಹೊಟ್ಟೆ ಬಟ್ಟೆಗೆ ಇಷ್ಟು ಅಭಾವ ಇರಲಿಲ್ಲ ನಾವು ಸುಖವಾಗಿ ಇದ್ದೆವು ಎಂದು ಹೇಳುತ್ತಾರೆ. ಇನ್ನು ವನಸ್ಪತಿ ವಿಚಾರವಾಗಿ ಹೇಳುವುದಾದರೆ ಅದು ಎಲ್ಲೆ ಹೋಯಿತೋ ಮಾಯವಾಗಿದೆ, ಜನರಿಗೆ ತುಪ್ಪ ಬೆಣ್ಣೆ ಬೇಡ ಕನಿಷ್ಟಪಕ್ಷ ಎಣ್ಣೆಯಾದರೂ ಬೇಡವೇ? ಸರ್ಕಾರದವರು ಸ್ವಲ್ಪ ಗೋಧಿ ಕೊಡುತ್ತಾರೆ ಅದಕ್ಕೆ ಉಪ ಯೋಗಿಸುವ ಎಣ್ಣೆ ಬೆಲೆ ಕೆಜಿಗೆ ೯ರೂ ೧೦ರೂ ೧೧ ರೂಪಾಯಿ ಇದ್ದರೆ ಜನರು ಹೇಗೆ ಜೀವನ ಮಾಡ ಬೇಕು ಎಂಬುದನ್ನು ಹೇಳಿ? ಮೊದಲು ಅಂಗಡಿಗಳಲ್ಲಿ ಬ್ರೆಡ್ ಸಿಕ್ಕುತ್ತಿತ್ತು. ಈಗ ಬ್ರೆಡ್ ಗಾತ್ರ ಚಿಕ್ಕ ದಾಯಿತು ಆದರು ಬೆಲೆ ಮಾತ್ರ ಜಾಸ್ತಿಯಾಯಿತು. ಅನೇಕ ಸಂದರ್ಭದಲ್ಲಿ ಅದು ಕೂಡ ಸಿಕ್ಕುವುದಿಲ್ಲ. ಅದಕ್ಕೂ ಕೂಡ ಅಭಾವ ಬಂದಿದೆ. ಇನ್ನು ಹೋಟೆಲ್‌ಗಳಲ್ಲಿ ಕಾಫಿ ಲೋಟಗಳು ಮೊದಲು ಇದ್ದುದಕ್ಕೆ ಅರ್ಧವಾಗಿ ರೇಟು ಒಂದಕ್ಕೆ ಎರಡಾಗಿದೆ. ಗಾತ್ರ ಮಾತ್ರ ಅರ್ಧಮಾಡಿದ್ದಾರೆ ರೇಟು ಮಾತ್ರ ಡಬ್ಬಲ್

(ಶ್ರೀ ಟಿ. ಆರ್. ಶಾಮಣ್ಣ)

ಮಾಡಿದ್ದಾರೆ. ಸಾಮಾನ್ಯವಾಗಿ ಕೆಲವು ಸಂದರ್ಭಗಳಲ್ಲಿ ಬ್ರೆಡ್ ಸಿಕ್ಕುವುದೇ ಇಲ್ಲ. ಈ ರೀತಿ ಪರಿಸ್ಥಿತಿ ಒದಗಿದರೆ . ಜನರು ಜೀವನ ಮಾಡಲು ಸಾಧ್ಯವೇ ಯೋಚನೆಮಾಡಿ. ಇದಕ್ಕೆ ಮುಖ್ಯ ಕಾರಣವಾದರೂ ಇಷ್ಟೆ. ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರ ಆರಂಭವಾದಾಗ ಮೊದಲು ಬಿಟ್ಟ ಬಾಣ ಯಾವುದು ಎಂದರೆ ಬ್ಯಾಂಕ್ ನ್ಯಾಷನಲೈಜೇಷನ್ ಅದರಲ್ಲಿ ಎಲ್ಲಾ ಬಡವರಿಗೂ ಬ್ಯಾಂಕುಗಳಿಂದ ಸಾಲ ಕೊಡುತ್ತೇವೆಂದು ಆಟೋರಿಕ್ಷಾ ಮತ್ತು ಟ್ಯಾಕ್ಸಿಯವರಿಗೆ ಹಾಗೂ ಬಡರೈತರಿಗೆ ಸಣ್ಣ ಕೈಗಾರಿಕೆಯವರಿಗೆ ಬೇಕಾಗುವಷ್ಟು ಹಣ ಒದಗಿಸಿ ಕೊಟ್ಟು ಸ್ವರ್ಗವನ್ನು ಭೂಮಿಗೆ ಇಳಿಸುತ್ತೇವೆಂದು ಹೇಳಿಕೊಂಡು ಬಂದರು. ಹಿಂದೆ ಇದ್ದ ಬ್ಯಾಂಕ್ ಬಡ್ಡಿದರವನ್ನು ಈಗ ಸುಮಾರು ೧೫ರಿಂದ ೧೮ ಪರ್ಸೆಂಟಿಗೆ ಏರಿಸಿದ್ದಾರೆ. ಈ ರೀತಿ ಬಡ್ಡಿಯನ್ನು ಕೊಟ್ಟು ಸಾಲ ತೆಗೆದುಕೊಂಡು ನ್ಯಾಯವಾದ ರೀತಿಯಲ್ಲಿ ವ್ಯಾಪಾರಮಾಡಿ ಬದುಕುವುದಕ್ಕೆ ಸಾಧ್ಯವೇ? ಅಲ್ಲಿ ಕೆಲಸಮಾಡತಕ್ಕ ನೌಕರರಿಗೆ ಅಂದರೆ ಕಸ ಗುಡಿಸುವವನಿಗೆ ಮತ್ತು ಗುಮಾಸ್ತರಿಗೆ ಸುಮಾರು ೨೦೦ ರೂಪಾಯಿಂದ ೪೦೦ ರೂಪಾಯಿಯವರೆಗೆ ಸಂಬಳ ಕೊಟ್ಟರೆ ಅಷ್ಟು ಸಂಪಾದನೆ ಬ್ಯಾಂಕಿಗೆ ಬರಬೇಕಾದರೆ ಬಡವನಮೇಲೆ ಬಡ್ಡಿಹಾಕಿ ವಸೂಲು ಮಾಡಿದರೆ ಇದು ಸಾಧ್ಯ. ಅಲ್ಲಿ ಯಾವುದೇ ಸಾಲ ಪಡೆಯಬೇಕಾದರೆ ಲಂಚ ಕೊಡದೆ ಯಾವ ಬ್ಯಾಂಕಿನಲ್ಲಿಯೂ ಸಾಲ ಸಿಕ್ಕುವುದಿಲ್ಲ. ಈ ರೀತಿ ಆದರೆ ಯಾವ ವ್ಯಾಪಾರವೇ ಆಗಲಿ, ಕೈಗಾರಿಕೆಯೇ ಆಗಲಿ, ವ್ಯವಸಾಯವೇ ಆಗಲಿ ಈ ಬಡ್ಡಿಯ ದರವನ್ನು ಕೊಟ್ಟು ಅವನು ಬದುಕಲು ಸಾಧ್ಯವೇ? ಎರಡನೆಯದಾಗಿ ಈಗಾಗಲೇ ನಾವು ನಾಲ್ಕನೇ ಪಂಚವಾರ್ಷಿಕಯೋಜನೆಗಳು ಮುಗಿದು ಐದನೇ ಪಂಚವಾರ್ಷಿಕ ಯೋಜನೆಯಲ್ಲಿದ್ದೇವೆ. ಸುಮಾರು ೬ ಕೋಟಿ ರೂಪಾಯಿ ಖರ್ಚಾಗಿದೆ ಇದರಿಂದ ಯಾವ ಸೌಕರ್ಯ ಜನರಿಗೆ ಸಿಕ್ಕಿದೆ? ಆಹಾರದ ಬೆಲೆ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ಸ್ಟೀಲ್ ಕಂಪನಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಯಿತೆ ವಿನಃ ಅದರಿಂದ ಯಾರಿಗೂ ಸುಖವಿಲ್ಲ. ೨೬ ಸಾವಿರ ಕೋಟಿರೂಪಾಯಿ ಖರ್ಚಾಯಿತೇ ಹೊರತು ಜನಗಳಿಗೆ ಏನು ಸುಖ ಸಿಕ್ಕಲಿಲ್ಲ. ಸಾಮಾನುಗಳ ಬಗ್ಗೆ ಅನೇಕ ವಿಚಾರಗಳು ಈ ಸಭೆಯಲ್ಲಿ ಚರ್ಚೆಮಾಡಿದ್ದೇವೆ. ಈ ಸರ್ಕಾರ ಬಂದಮೇಲೆ ವೀಸೆ ಲೆಕ್ಕ ಬಂತು, ರೂಪಾಯಿ ಆಣೆ ಲೆಕ್ಕ ಹೋಗಿ ನಯಾಪೈಸೆ ಲೆಕ್ಕ ತಂದಾಗ ಬೆಲೆ ಮಾತ್ರ ಜಾಸ್ತಿಯಾಯಿತೆ ಹೆಚ್ಚಿನ ದರ ಆಗಲೂ ಕಾರಣವಾಯಿತು. ಸಾಮಾನುಗಳ ಬೆಲೆ ಏರುವುದಕ್ಕ ಕಾರಣವಾಯಿತು. ಜನಗಳ ಹಿತದೃಷ್ಟಿಯಿಂದ ಯಾವುದನ್ನು ನೋಡುತ್ತಾ ಇಲ್ಲ. ಹಿಂದುಳಿದ ಜನರ ಗಮನವೇ ಇಲ್ಲ. ಯಾವುದೋ ಒಂದು ಸಬೂಬು ಹೇಳಿ ಜನಗಳನ್ನು ವಂಚಿಸಿಕೊಂಡು ಚುನಾವಣೆಯಲ್ಲಿ ಗೆದ್ದು ಬಂದರು. ಜನಗಳಿಗೆ ಯಾವ ರೀತಿಯಾದ ಒಳ್ಳೆಯ ಕೆಲಸಮಾಡಿದ್ದೇವೆಯೇ ಎಂಬು ಅವರಆತ್ಮ ಪರಿಶೀಲನೆಮಾಡಿನೋಡಲಿ. ಸರ್ಕಾರ ಬ್ಯಾಂಕ್ ನ್ಯಾಷನಲೈಷನ್ ಮಾಡಲಿ ಅದಕ್ಕೆ ನನ್ನ ವಿರೋಧವಿಲ್ಲ. ಆದರಿಂದ ಜನಗಳಿಗೆ ಸೌಕರ್ಯ ಒದಗಿದೆಯೇ? ಬರೀ ಸಮಾಜವಾದ ಘೋಷಣೆಯನ್ನು ಹೇಳಿಕೊಂಡು ಸಮಾಜವಾದ ಸೋಗು ಹಾಕಿಕೊಂಡು ಜನರನ್ನು ವಂಚಿಸುತ್ತಾರೆಂದು ಮತ್ತು ಜನರನ್ನು ಸಾಯಿಸುತ್ತಾ ಇದ್ದಾರೆ ಇದಕ್ಕೆ ಅನೇಕ ಕೋಟ್ಯಾಧೀಶ್ವರರ ಬೆಂಬಲವಿದೆಯೆಂದು ಸಹಕಾರ ಕೊಡುತ್ತಿದ್ದಾರೆಂದು ಹೇಳುತ್ತೇನೆ.

ಈಗ ನಡೆಯುತ್ತಾ ಇರತಕ್ಕ ಸಮಾಜವಾದಕ್ಕೆ ಅನೇಕ ಕೋಟ್ಯಾಧೀಶ್ವರರ ಬೆಂಬಲ ಇದೆ. ಆದ್ದರಿಂದ ನಾನು ಹಿಂದೆ ಹೇಳಿದ ಹಾಗೆ, ಇಂಥ ಅರೆಕೊರೆ ಸಮಾಜವಾದ ದೇಶಕ್ಕೆ ತಂದರೆ ಅದರಿಂದ ಸ್ವಲ್ಪವೂ ಅನುಕೂಲವಾಗುವುದಿಲ್ಲ. ರಷ್ಯಾ ಮತ್ತು ಚೈನಾಗಳ ಮಾದರಿ ಬಲವಾದಂಥ ಸಮಾಜವಾದವನ್ನು ತೆಗೆದುಕೊಂಡು ಬಂದರೆ ಜನಗಳಿಗೆ ಒಳ್ಳೆಯದಾಗುತ್ತದೆ ಇಲ್ಲದೆ ಹೋದ ಪಕ್ಷದಲ್ಲಿ ಸಮಾಜವಾದದ ಸೋಗನ್ನು ಹೇಳಿಕೊಂಡು ಜನರ ಕಣ್ಣಿಗೆ ಮಣ್ಣು ಎರಚತಕ್ಕ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ.

ಈ ಹಿಂದೆ ಹೋಲ್‌ಸೇಲ್ ಟ್ರೇಡನ್ನು ತರುತ್ತೇವೆಂದು ಘೋಷಣೆ ಮಾಡಿದರು, ಘೋಷಣೆ ಮಾಡಿದ ತಕ್ಷಣ ಬೆಲೆಗಳು ಗಗನಕ್ಕೆ ಏರಿದವು ಅದೇ ರೀತಿಯಲ್ಲಿ ಇವರು ಇಂಥ ಪ್ರಕಟಣೆಗಳನ್ನು ಮಾಡಿದಾಗಲೆಲ್ಲಾ ಬೆಲೆಗಳು ಎದ್ವತದ್ವ ಏರಿದವು. ಇದಕ್ಕೆ ಸರ್ಕಾರವೇ ಮುಖ್ಯವಾದಂಥ ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರತಿವರ್ಷವೂ ಕೂಡ ಕೇಂದ್ರಸರ್ಕಾರದವರು ತಮ್ಮ ಬಡ್ಜೆಟ್ಟಿನಲ್ಲಿ ೩೦೦ ೪೦೦ ಕೋಟಿ ರೂಪಾಯಿಗಳ ಹೊಸ ತೆರಿಗೆಯನ್ನು ಹಾಕುತ್ತಾ ಇರುವುದರಿಂದ ಸಾಮಾನುಗಳ ಬೆಲೆಗಳು ವಿಪರೀತವಾಗಿ ಏರುತ್ತಿವೆ. ಒಂದು ಕಡೆ ಕೇಂದ್ರಸರ್ಕಾರದವರ ಎಕ್ಸೈಸ್ ಡ್ಯೂಟಿಯನ್ನು ಹಾಕಿದರೆ, ಮತ್ತೊಂದು ಕಡೆ ರಾಜ್ಯಸರ್ಕಾರದವರ ಸೇಲ್ಸ್ ಟ್ಯಾಕ್ಸನ್ನು ಹಾಕಿದ ಮೇಲೆ ಸಾಮಾನಿನ ಬೆಲೆ ದಿನೇ ದಿನೇ ಏರುತ್ತಾ ಇದೆ. ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ಸೂಕ್ತವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಸರ್ಕಾರ ತೆರಿಗೆಗಳನ್ನು ಏರಿಸುತ್ತಾ ಬಂದರೆ ಮಹಮದ್ ಬಿನ್ ತೊಗಲಕ್‌ನ ಕಾಲದಲ್ಲಿ, ಜನಗಳ

ಯಾವರೀತಿಯಲ್ಲಿ ಕಷ್ಟಕ್ಕೆ ಸಿಕ್ಕಿ ಕಾಡಿಗೆ ಬರಬೇಕಾಯಿತೋ ಅದೇ ರೀತಿಯಲ್ಲಿ ಜನಗಳು ಈಗ ಊರನ್ನು ಬಿಟ್ಟು ಕಾಡಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ, ಎಂದು ಹೇಳಬೇಕಾಗಿದೆ. ಹೋಲ್‌ಸೇಲ್ ಟ್ರೇಡನ್ನು ತೆಗೆದುಕೊಂಡು ಬರುತ್ತೇವೆಂದು ಹೇಳಿದಮೇಲೆ ಆದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಬಡ ರೈತರನ್ನು ಉದ್ಧಾರ ಮಾಡುವುದಕ್ಕೆ ಮತ್ತು ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕೆ ಲ್ಯಾಂಡ್ ರಿಫಾರಮ್ಸ್ ಆಕ್ಟನ್ನು ಜಾರಿಗೆ ತೆಗೆದುಕೊಂಡು ಬರುತ್ತೇವೆಂದು ಹೇಳಿ, ೧೯೬೭ನೇ ಇಸವಿಯಿಂದಲೂ ಇದನ್ನು ಹೇಳಿಕೊಂಡು ಬಂದಿದ್ದಾರೆ. ಈಗ ಹಿಂದಿನ ಸರ್ಕಾರದವರು ಮಾಡಲಿಲ್ಲ, ಎನ್ನುವ ಕಾರಣವನ್ನು ಹೇಳುತ್ತಿದ್ದಾರೆ. ಲ್ಯಾಂಡ್ ರಿಫಾರಮ್ಸ್‌ನ್ನು ಜಾರಿಗೆ ತರುತ್ತೇವೆಂದು ಹೇಳಿದಮೇಲೆ: ಇಲ್ಲಿಯವರೆಗೆ ಲಕ್ಷಾಂತರ ಎಕರೆ ಲ್ಯಾಂಡ್ ರಿಫಾರಮ್ಸ್ ವ್ಯಾಪ್ತಿಯೊಳಗೆ ಬಾರದ ಹಾಗೆ ಕೆಲವರು ಮಾಡಿಕೊಂಡು, ಅತ್ತಕಡೆ ರೈತರಿಗೂ ಅನುಕೂಲವಾಗಲಿಲ್ಲ ಇತ್ತಕಡೆ ಆಹಾರದ ಉತ್ಪನ್ನವೂ ಹೆಚ್ಚಾಗಲಿಲ್ಲ. ಆದ್ದರಿಂದ ಸರ್ಕಾರ ತನ್ನ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಲ್ಯಾಂಡ್‌ರಿಫಾರಮ್ಸ್ ಪಾಲಿಸಿಯನ್ನು ತೆಗೆದುಕೊಂಡು ಬರುತ್ತೇವೆಂದು ತೀರ್ಮಾನವನ್ನು ತೆಗೆದುಕೊಂಡು ಉತ್ಪನ್ನವನ್ನು ಸರಿಯಾಗಿ ಮಾಡಿದ್ದರೆ ಪರಿಸ್ಥಿತಿ ಇಷ್ಟು ಹೊಲಸು ಆಗುತ್ತಾ ಇರಲಿಲ್ಲ ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ.

ಸಾಧಾರಣವಾಗಿ ಬೆಂಗಳೂರಿನಲ್ಲಿ ವರ್ತಕರು ನಾನು ನೋಡಿದ ಹಾಗೆ ಅನೇಕ ಹಿರಿಯರು ಇದ್ದಾರೆ. ಸ್ವಲ್ಪ ನ್ಯಾಯವಾಗಿ, ವ್ಯಾಪಾರ ಮಾಡತಕ್ಕ ಹಿರಿಯ ವ್ಯಾಪಾರಿಗಳು, ಹಿರಣ್ಣಯ್ಯ, ಸಜ್ಜನರಾವ್ ಇಂಥ ಹಳೆಯ ಅಂಗಡಿಗಳವರು, ಅವರು ತಮ್ಮ ವ್ಯಾಪಾರವನ್ನೇ ಮಾಡುವುದು ಬೇಡ ಎಂದು ಹೇಳುತ್ತಿದ್ದಾರೆ. ಹೊಸದಾಗಿ ಬಂದಿರತಕ್ಕ ಅನೇಕ ವ್ಯಾಪಾರಗಾರರು ಲಾಭ ಪಡೆಯುವುದಕ್ಕೋಸ್ಕರ ಬೆಲೆಗಳನ್ನು ಏರಿಸುವುದಕ್ಕೆ ಕಾರಣಕರ್ತರಾಗಿದ್ದಾರೆ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ಆದರೆ ಸರ್ಕಾರ ಹಣವನ್ನು ದೋಚುತ್ತಾ ಇರತಕ್ಕ ಕಪ್ಪು ಹಣವನ್ನು ಇಡುತ್ತಿರುವ ವರ್ತಕರು ಬೆಳೆಯುತ್ತಾ ಇರುವುದಕ್ಕೆ ಪೂರ್ಣ ಜವಾಬ್ದಾರಿಯನ್ನು ಹೊರಬೇಕು. ಇದನ್ನು ಬೇರೆಯವರ ಮೇಲೆ ಹಾಕುವುದು ಸರಿಯಲ್ಲ. ಈ ವಿಷಯದಲ್ಲಿ ಪೂರ್ತಿಯಾಗಿ ನಾವು ಸೋತಿದ್ದೇವೆ ಎನ್ನುವುದನ್ನು ಅವರು ಒಪ್ಪಿಕೊಳ್ಳಬೇಕು. ಖಂಡಿತವಾಗಿಯೂ ಇಂಥ ಒಂದು ಸಬೂಬು ಹೇಳಿಕೊಂಡು ಹೋಗುವುದು ಸರಿಯಲ್ಲ. ಬುಡದಿಂದ ಕೊನೆಯವರೆಗೂ, ಜವಾನದಿಂದ ಹಿಡಿದು, ಮಂತ್ರಿಯವರೆಗೂ ಎಲ್ಲಿಯವರೆಗೆ ಲಂಚಕೋರತನ ಇದೆಯೋ ಅಲ್ಲಿಯವರೆಗೆ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಬೆಲೆಗಳನ್ನು ಇಳಿಸುವುದಕ್ಕೂ ಸಾಧ್ಯವಿಲ್ಲ, ಜನಗಳು ಸುಖವಾಗಿರುವುದಕ್ಕೂ ಸಾಧ್ಯವಿಲ್ಲ ಎನ್ನುವುದು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಯಾವಾಗ ಮನೆಯ ಯಜಮಾನ ನ್ಯಾಯವಾದ ರೀತಿಯಲ್ಲಿ ನಡೆಯುತ್ತಾನೆಯೋ ಆಗ ಅವನ ಸಂಸಾರ ಮತ್ತು ಮಕ್ಕಳು ಸರಿಯಾಗಿ ಇರುತ್ತದೆ. ಮನೆಯ ಯಜಮಾನನೇ ದರೋಡೆ ಮಾಡುವುದಕ್ಕೆ ಶುರುಮಾಡಿದರೆ, ಸರ್ಕಾರ ನಡೆಸತಕ್ಕವರು ಲಂಚ ಹೊಡೆದ ಮೇಲೆ, ಬೇಕಾದವರಿಗೆ ಅಧಿಕಾರವನ್ನು ಉಪಯೋಗಿಸಿಕೊಂಡು ಇರತಕ್ಕ ಪರಿಸ್ಥಿತಿಯಲ್ಲಿ ಖಂಡಿತವಾಗಿಯೂ ಕೂಡ ಆಡಳಿತವನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ಘಂಟಘೋಷವಾಗಿ ಹೇಳಬಹುದು.

ಮೊದಲು ಸಾಧಾರಣವಾಗಿ, ವರ್ಷ ವರ್ಷ ಒಂದು ಬಡ್ಜೆಟ್ ಆಗುತ್ತಿತ್ತು. ಈಗ ಸರ್ಕಾರ ಮನಸ್ಸಿಗೆ ಬಂದ ಹಾಗೆ ಬಡ್ಜೆಟ್‌ಗಳನ್ನು ತಂದು ಜನರ ಮೇಲೆ ತೆರಿಗೆಗಳನ್ನು ಹಾಕಿ ಬೆಲೆಗಳನ್ನು ಏರಿಸುತ್ತಿದೆ. ಮೈಗೆ ಹಚ್ಚತಕ್ಕ ಸೋಪು ಪೇಟೆಯಲ್ಲಿ ಮಂಗಮಾಯವಾಗಿದೆ. ಅದೇ ರೀತಿಯಲ್ಲಿ ಪ್ರತಿಯೊಂದು ಬಡ್ಜೆಟ್ ಬರುವಾಗ ಕೂಡ ವರ್ತಕರು ಸಾಕಾದಷ್ಟು ಸಾಮಾನುಗಳನ್ನು ಹಿಂದೆ ಇಟ್ಟು ಬೆಲೆಗಳನ್ನು ಏರಿಸುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಒಂದು ಹೊಸ ಏರ್ಪಾಡನ್ನು ಮಾಡುವುದಕ್ಕೆ ಮುಂಚೆಯೇ ಸರಿಯಾದಂಥ ವ್ಯವಸ್ಥೆ ಮಾಡದೇ ಹೋದ ಪಕ್ಷದಲ್ಲಿ ಬೆಲೆಗಳನ್ನು ಹತೋಟಿಯಲ್ಲಿಡುವುದಕ್ಕೆ ಸಾಧ್ಯವಾಗುವುದಿಲ್ಲ. ತೆರಿಗೆಗಳನ್ನು ಪ್ರಕಟಿಸುವುದಕ್ಕೆ ಮುಂಚೆಯೇ ಯಾರ ಯಾರ ಹತ್ತಿರ ಎಷ್ಟೆಷ್ಟು ಸಾಮಾನುಗಳ ಸ್ಟಾಕು ಇದೆ ಎನ್ನುವುದನ್ನು ನೋಡಬೇಕು. ಜನಗಳ ದಿನನಿತ್ಯ ಬಳಕೆಯ ಸಾಮಾನುಗಳ ಬಗ್ಗೆ ಮಾತನಾಡುವುದಾದರೆ, ಸೌದೆ, ಒಂದು ಟನ್‌ಗೆ ೨೪೦ ರೂಪಾಯಿ ಇದ್ದದ್ದು ಇವತ್ತು ೨೫೦ ರೂಪಾಯಿ ಆಗಿದೆ. ಬಡವರು ಸೌದೆಯನ್ನು ಕೊಳ್ಳತಕ್ಕ ಸ್ಥಿತಿಯಲ್ಲಿದ್ದಾರೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದ್ದಲೂ ಸಹ ಹೋದ ವರ್ಷ ೧೨ ರೂಪಾಯಿಗೆ ಮೂಟೆ ಇದ್ದದ್ದು ಈ ವರ್ಷ ೨೨ ರೂಪಾಯಿ ಆಗಿದೆ. ಒಂದುಕಡೆ ಸೀಮೆಎಣ್ಣೆ ಸಿಕ್ಕುವುದಿಲ್ಲ, ಮತ್ತೊಂದು ಕಡೆ ಸೌದೆ, ಇಜ್ಜಲು ಸಿಕ್ಕುವುದಿಲ್ಲ. ಅನುಕೂಲಸ್ಥರು, ಗ್ಯಾಸ್, ಎಲೆಕ್ಟ್ರಿಕ್ ಸ್ಟೌವ್ ಇತ್ಯಾದಿಗಳನ್ನು ಉಪಯೋಗಿಸಿಕೊಂಡು ಜೀವನ ಮಾಡುತ್ತಾರೆ. ಬಡವರು ತಮಗೆ ಬೇಕಾದಂಥ ಆಹಾರವನ್ನು ಬೇಯಿಸಿಕೊಂಡು ತಿನ್ನುವುದಕ್ಕೂ ಎಷ್ಟು ಕಷ್ಟವಾಗುತ್ತಿದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ.

(ಶ್ರೀ ಟಿ. ಆರ್. ಶಾಮಣ್ಣ)

ಪ್ರತಿವರ್ಷವೂ ಕೂಡ ರೈಲ್ವೆ ಬಡ್ಜೆಟ್ಟಿನಲ್ಲಿ ಸಾಮಾನುಗಳ ಮೇಲೆ, ಪ್ರಯಾಣಿಕರ ಮೇಲೆ ರೈಲ್ವೆ ಚಾರ್ಜು ಜಾಸ್ತಿ ಮಾಡತಕ್ಕದ್ದು ನಡೆದುಕೊಂಡು ಬಂದಿದೆ, ರೋಡ್‌ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ನವರು ಪ್ರತಿವರ್ಷವೂ ಪ್ರಯಾಣಿಕರ ಮೇಲೆ ದರವನ್ನು ಹೆಚ್ಚು ಮಾಡುತ್ತಾ ಹೋಗುತ್ತಿದ್ದಾರೆ. ಆದರೆ ಅನೇಕ ಖಾಸಗಿ ಬಸ್ಸುಗಳವರು ದರವನ್ನು ಸರಿಯಾದ ರೀತಿಯಲ್ಲಿ ಇಟ್ಟು, ಹೆಚ್ಚು ಸಂಪಾದನೆ ಮಾಡುತ್ತಿದ್ದಾರೆ. ದರವನ್ನು ಹೆಚ್ಚು ಮಾಡುವುದರಿಂದ ಸರ್ಕಾರದ ಸಂಪಾದನೆಯೂ ಕಡಿಮೆಯಾಗಿ, ಅವರ ಬಸ್ಸುಗಳು ಖಾಲಿಯಾಗಿ ಹೋಗತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ನಾನು ಮೊನ್ನೆ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸಿನಲ್ಲಿ ಪ್ರಯಾಣ ಮಾಡಿದಾಗ, ಬಸ್ಸಿನಲ್ಲಿ ಮಲಗಿಕೊಂಡು ಹೋಗುವಷ್ಟು ಸ್ಥಳಾವಕಾಶ ಇತ್ತು. ಈ ರೀತಿ ಪ್ರಯಾಣಿಕರ ಮೇಲೆ ವಿಪರೀತವಾಗಿ ತೆರಿಗೆಗಳನ್ನು ಹಾಕಿ, ಬಸ್ ಮಾರ್ಗಗಳನ್ನು ನ್ಯಾಷನಲೈಸ್ ಮಾಡಿ, ಕೋಟ್ಯಾಂತರ ರೂಪಾಯಿಗಳನ್ನು ಸಂಪಾದನೆ ಮಾಡತಕ್ಕ ಅವಕಾಶ ಇದ್ದರೂ ಕೂಡ ಸರ್ಕಾರಕ್ಕೆ ಸರಿಯಾದ ಆದಾಯ ಬರುತ್ತಿಲ್ಲ ಎನ್ನುವ ಮಾತನ್ನು ಹೇಳ ಬೇಕಾಗಿದೆ.

ಇತ್ತೀಚೆಗೆ, ಪೇಪರ್ ಬೆಲೆಯೂ ಜಾಸ್ತಿಯಾಗಿದೆ. ಭದ್ರಾವತಿ, ದಾಂಡೇಲಿ ಪೇಪರ್ ಒಂದು ಕ್ವಯರ್‌ಗೆ ಒಂದೂವರೆ ರೂಪಾಯಿ ಕೊಟ್ಟರು ಸಿಕ್ಕದೆ ಇರತಕ್ಕ ಕಾಲ ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ಬಡ ಮಕ್ಕಳು ಪೇಪರ್ ಕೊಂಡು ಹೇಗೆ ವಿದ್ಯಾಭ್ಯಾಸ ಮಾಡಬೇಕು. ದಾಂಡೇಲಿ ಪೇಪರ್ ಮಿಲ್ಲಿನವರು ನಮ್ಮ ನೈಸರ್ಗಿಕ ವಸ್ತುಗಳನ್ನು ತೆಗೆದುಕೊಂಡು ಪೇಪರ್ ಅನ್ನು ಬೇರೆ ರಾಜ್ಯಕ್ಕೆ ಕಳುಹಿಸತಕ್ಕ ಪದ್ಧತಿ ಏಕೆ? ಪೇಪರ್ ಕ್ಷಾಮ ಯಾವ ರೀತಿ ಬಂತು ಎನ್ನುವುದನ್ನು ನಾವು ಯೋಚನೆ ಮಾಡಬೇಕು, ಒಂದು ಕಡೆ ಅರಣ್ಯವನ್ನು ನಾಶ ಮಾಡತಕ್ಕ ಪರಿಸ್ಥಿತಿ ಬಂದರೂ ಇನ್ನೊಂದು ಕಡೆ ಸೌದೆ ಇಲ್ಲ, ಪೇಪರ್ ಇಲ್ಲ, ಬೆಂಕಿ ಪಟ್ಟಣ ಇಲ್ಲ. ಬಿರ್ಲಾ ಕಂಪನಿಯವರು ಕಡಿಮೆ ದರದಲ್ಲಿ ಯೂಕಲಿಪ್ಟಸ್ ಕಾಡನ್ನು ಕೊಯ್ದು ಕಾಡನ್ನು ನಾಶ ಮಾಡತಕ್ಕ ಪರಿಸ್ಥಿತಿಯನ್ನು ತಂದಿದ್ದಾರೆ.

10-A.M

ಆದುದರಿಂದ ಈ ಸರಕಾರ ನಿಜವಾಗಿಯೂ ಸಮಾಜವಾದಿ ಸರಕಾರವಾಗಿದ್ದರೆ ಜನರ ಹಿತದೃಷ್ಟಿ ಯಿಂದ ಮುಖ್ಯವಾಗಿ ಅವರಿಗೆ ಬೇಕಾದ ವಸ್ತುಗಳನ್ನೇಕೆ ತಯಾರಿಸಿ ಹಂಚುತ್ತಿಲ್ಲವೆಂದು ಕೇಳಬೇಕಾಗಿದೆ. ನಾನು ಮಾಂಸಾಹಾರಿಯಲ್ಲದಿದ್ದರೂ ಅದರ ಬೆಲೆ ಒಂದಕ್ಕೆ ನಾಲ್ಕರಷ್ಟಾಗಿದೆಯೆಂದು ತಿಳಿದುಕೊಂಡಿ ದ್ದೇನೆ. ಮೀನಿನ ಬೆಲೆಯೂ ಹೆಚ್ಚಾಗಿದೆ, ಕುರಿಯ ಬೆಲೆ ೩೦೦ ರೂಪಾಯಿನಿಂದ ೩೫೦ ರೂಪಾಯಿಗಳ ವರೆಗೆ ಎಂದು ಹೇಳುವರು. ಹಿಂದೆ ೧೫ ರೂಪಾಯಿಗಳಿಗೆ ಸಿಕ್ಕುತ್ತಿತ್ತು. ಮಾಂಸದ ಬೆಲೆ ೧೦—೧೨ ರೂಪಾಯಿಗಳಾಗಿದೆಯೆಂದು ಹೇಳುವರು. ಒಂದು ರೂಪಾಯಿಗೆ ಸಿಕ್ಕುತ್ತಿದ್ದ ಕೋಳಿಯ ಬೆಲೆ ಇಂದು ೧೫—೨೦ ರೂಪಾಯಿಯಾಗಿದೆ. ಇದರಿಂದ ಮಾಂಸ ತಿನ್ನುವವರಿಗೆ ಕಷ್ಟವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಹಾಲಿನ ವಿಚಾರ ನೋಡಿದರೆ ಹೋದ ವರ್ಷ ಒಂದು ರೂಪಾಯಿಗೆ ದೊರೆಯು ತ್ತಿದ್ದುದಕ್ಕೆ ಇಂದು ಒಂದೂಮುಕ್ಕಾಲು ತೆರಬೇಕಾಗಿದೆ. ಮನೆಯ ಮುಂದೆ ಕೊಳ್ಳಲು ಎರಡೂವರೆ ರೂಪಾಯಿ ಕೊಡಬೇಕು. ದನಗಳ ವಿಚಾರ ಕೇಳಿದರೆ ಅವನ್ನು ಮಾರುವುದು ಒಳ್ಳೆಯದು, ಸಾಕುವುದು ಕಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ೧೪ರೂಪಾಯಿಗೆ ಸಿಕ್ಕುತ್ತಿದ್ದ ಬೂಸಾಕ್ಕೆ ಇಂದು ೬೫—೭೦ ರೂಪಾಯಿ ಬೆಲೆಯಾಗಿದೆ, ೧೮—೨೦ ರೂಪಾಯಿಗಳಿಗೆ ಸಿಕ್ಕುತ್ತಿದ್ದ ಹಿಂಡಿಗೆ ಇಂದು ೮೫ ರೂಪಾಯಿ ತರಬೇಕಾಗಿದೆ. ಈ ರೀತಿ ಹಿಂಡಿ, ಕೊಟ್ಟು ಮುಂತಾದವುಗಳ ಬೆಲೆ ಜಾಸ್ತಿಯಾಗಿ ದನಗಳನ್ನು ಸಾಕು ವುದು ಕಷ್ಟವಾಗಿದೆ. ಮೊದಲು ಹಾಲಿಗೆ ನೀರು ಬೆರಸುತ್ತಿದ್ದರು, ಇಂದು ನೀರಿಗೆ ಹಾಲು ಬೆರಸಬೇಕಾದ ಪರಿಸ್ಥಿತಿಯಿದೆ. ಜನತೆಗೆ ಮಾಂಸ ತಿನ್ನುವುದು ಕಷ್ಟವಾಗಿದೆ. ಹಾಲು ದೊರೆಯುವುದು ಕಷ್ಟವಾಗಿದೆ. ಸಾಧಾರಣವಾಗಿ ಬಜೆಟ್ ಬಂದರೆ ತಕ್ಷಣ ಸಾಮಾನುಗಳ ಬೆಲೆ ಏರುವುದು. ತೆಂಗಿನಕಾಯಿ ಹಿಂದೆ ೬ ಕಾಸಿಗೆ ಸಿಕ್ಕುತ್ತಿತ್ತು, ನಂಜನಗೂಡು, ಗುಂಡಲ ಪೇಟೆ, ಚಾಮರಾಜ ನಗರ ಮುಂತಾದ ಕಡೆಗಳಲ್ಲಿ ೬ ಕಾಸಿಗೆ ಒಂದು ಎಳನೀರು ಸಿಕ್ಕುತ್ತಿತ್ತು. ಈಗ ಒಂದು ರೂಪಾಯಿ ಮೇಲೆ ತೆರಬೇಕಾಗಿದೆ, ಒಳ್ಳೆಯ ತೆಂಗಿನಕಾಯಿಗೆ ೨ ರೂಪಾಯಿ ಕೊಡಬೇಕಾಗಿದೆ. ಹೀಗಾದರೆ ಜನರು ಇದನ್ನು ಉಪಯೋಗ ಮಾಡು ವುದು ಹೇಗೆ ? ಎಷ್ಟು ಜನ ಈ ಬೆಲೆ ಕೊಟ್ಟು ಕೊಳ್ಳಲು ಸಾಧ್ಯ ? ಕೊಬರಿ ಬೆಲೆ ೧೫ ರೂಪಾಯಿ ಯಾಗಿದೆ. ಜನರು ಓಟು ಕೊಟ್ಟು ಮೋಸ ಹೋಗಿದ್ದಾರೆ. ಏರಿರುವ ಬೆಲೆಗಳನ್ನು ತಡೆಗಟ್ಟದಿದ್ದರೆ ಜನರು ಉದ್ಧಾರವಾಗುವುದಿಲ್ಲ. ಜನರ ಆರ್ಥಿಕ ಸ್ಥಿತಿ ಉತ್ತಮವಾಗುತ್ತಿಲ್ಲ. ಈಗ ಮನೆಗಳ ವಿಚಾರ ನೋಡಿದರೆ ನಾನು ಕಂಟ್ರಾಕ್ಟ್ ಮಾಡುತ್ತಿದ್ದಾಗ ಒಂದು ಚದರಕ್ಕೆ ೬೫೧ರಿಂದ ೮೫೦ ರೂಪಾಯಿ

ಆಗುತ್ತಿತ್ತು. ಅದರ ಪ್ರಕಾರ ಅನೇಕ ಮನೆಗಳನ್ನು ಕಟ್ಟಿಸಿದೆ. ಈ ದಿವಸ ಒಂದು ಚದರಕ್ಕೆ ೫ ಸಾವಿರ ರೂಪಾಯಿ ಖರ್ಚು ಮಾಡಬೇಕು. ಅನೇಕರು ಇಂದು ಕಪ್ಪು ಹಣ ಉಪಯೋಗಿಸಿ ದೊಡ್ಡ ದೊಡ್ಡ ಮಹಲುಗಳನ್ನು ಕಟ್ಟುವರು. ಒಂದು ಕಡೆ ಪೆಲೇಷಿಯಲ್ ಕಟ್ಟಡಗಳನ್ನು ಕಟ್ಟಲು ಕಬ್ಬಿಣ, ಸಿಮೆಂಟು ಬೇಕಾದಷ್ಟು ದೊರೆಯುವುದು, ಆದರೆ ಬಡವರಿಗೆ ಸಿಕ್ಕುವುದಿಲ್ಲ, ಹೀಗಾಗಿ ಬಡಜನರು ಮನೆ ಕಟ್ಟಲು ಬಹಳ ಕಷ್ಟಪಡುತ್ತಿದ್ದಾರೆ ಲಕ್ಷಾಧೀಶರು ದೊಡ್ಡ ಅರಮನೆ ಕಟ್ಟಲು ಬೇಕಾದ ಸಾಮಾನುಗಳು ಹೇಗೆ ದೊರೆಯುವುವು, ಬಡವರಿಗೇಕೆ ಸಿಕ್ಕುವುದಿಲ್ಲ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಜನವರಿಯಲ್ಲಿ ಸಿಮೆಂಟಿಗೆ ಅಪ್ಲಿಕೇಷನ್ ಹಾಕಿರುವವರಿಗೆ ಇನ್ನೂ ಸಿಕ್ಕಿಲ್ಲ, ಅದೇ ದೊಡ್ಡವರು ೩ ದಿವಸಗಳಲ್ಲಿ ಪರ್ಮಿಟ್ ತರುವರು. ಏಕೆ ಹೀಗಿದೆ ಎಂದು ಯೋಚಿಸಬೇಕು. ೨ ವರ್ಷಗಳ ಕೆಳಗೆ ಮೈಲ್ಡ್ ಸ್ಟೀಲು ೮೦೦ ರೂಪಾಯಿಗಳನ್ನು ಕೊಟ್ಟರೆ ದೊರೆಯುತ್ತಿತ್ತು, ಆದಕ್ಕೆ ಇಂದು ೩ ಸಾವಿರ ರೂಪಾಯಾಗಿದೆ. ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟ ಭಿಲಾಯ್ ಮತ್ತು ಹಿಂದೂಸ್ಥಾನ್ ಸ್ಟೀಲ್ ಕಂಪೆನಿಗಳಿಂದ ಒದಗಿಸುವ ಸ್ಟೀಲಿಗೂ ಭದ್ರಾವತಿಯಿಂದ ಒದಗಿಸುವುದಕ್ಕೂ ೫೦೦—೬೦೦ ರೂಪಾಯಿಗಳಷ್ಟು ವ್ಯತ್ಯಾಸವಿದೆ. ಕೇಂದ್ರ ಸರಕಾರ ೧೬೦೦ ರೂಪಾಯಿಗಳಿಗೆ ಕೊಡುವುದಕ್ಕೆ ರಾಜ್ಯ ಸರಕಾರ ೨ ಸಾವಿರ ಚಿಲ್ಲರೆ ರೂಪಾಯಿ ತಗೆದುಕೊಳ್ಳುತ್ತಿದೆ. ಈ ರೀತಿ ಮಾಡುವುದು ಸರಿಯೇ ಎಂದು ಯೋಚನೆ ಮಾಡಬೇಕು. ಕೇಂದ್ರ ಸರಕಾರಕ್ಕೆ ಇದನ್ನು ಹೇಳುವುದಿಲ್ಲ. ಅನೇಕ ಹೆಸರುಗಳಲ್ಲಿ ಬೇಕಾದವರಿಗೆ ಸಿಮೆಂಟಿನ ಡೀಲರ್‌ಷಿಪ್ ಕೊಟ್ಟಿದ್ದೀರಿ. ಈ ರೀತಿ ಒಂದು ಕಡೆ ಸಾಹುಕಾರರನ್ನು ಸಾಕಬೇಕು, ಪಕ್ಷದವರನ್ನು ಸಾಕಬೇಕು. ಹೀಗಾಗಿ ಆಡಳಿತ ಕುಸಿದಿದೆ, ಜನಜೀವನ ಕಷ್ಟವಾಗಿದೆ. ಇದರ ಜೊತೆಗೆ ಮನೆ ಬಾಡಿಗೆ ಏರುತ್ತಿದೆ. ನನಗೆ ೨—೩ ಮನೆಗಳಿವೆ. ನಾನು ಅವನ್ನು ನೂರು ರೂಪಾಯಿ ಬಾಡಿಗೆಗೆ ಕೊಟ್ಟಿದ್ದರೆ ಎದುರು ಮನೆಯನ್ನು ನನ್ನ ಮನೆಯಷ್ಟೇ ಇರುವುದನ್ನು ೨೫೦ ರೂಪಾಯಿ ಬಾಡಿಗೆಗೆ ಕೊಟ್ಟಿದ್ದಾರೆ. ಹೀಗಾಗಿ ಅನೇಕರು ಕಷ್ಟಪಡುತ್ತಿದ್ದಾರೆ. ಪಟ್ಟಣಗಳಲ್ಲಾದರೆ ಹಣ ಕೊಟ್ಟರೆ ಸಾಮಾನಾದರೂ ಸಿಗುವುದು, ಅದೇ ಹಳ್ಳಿಗಳಲ್ಲಿ ನೋಡಿದರೆ ಬೇಕಾದ್ದು ದೊರೆಯದೆ ಅಲ್ಲಿನವರಿಗೆ ಅನುಕೂಲವಿಲ್ಲದೆ ಅವರು ಗಾಳಿ ನೀರನ್ನು ಕುಡಿದುಕೊಂಡು ಜೀವನ ಮಾಡಬೇಕಾದ ಪರಿಸ್ಥಿತಿಯಿದೆ. ಎಷ್ಟೋ ಹಳ್ಳಿಗಳಲ್ಲಿ ಆಹಾರ ಪದಾರ್ಥಗಳು ಸರಿಯಾಗಿ ದೊರೆಯುತ್ತಿಲ್ಲ, ಅದೇ ಪಟ್ಟಣಗಳಲ್ಲಿ ರೇಷನ್ ಕೊಡುವರು. ಹಳ್ಳಿಯವರನ್ನು ಹೇಳುವವರು ಕೇಳುವವರು ಯಾರು ಎಂದು ಪ್ರಶ್ನೆ ಮಾಡಬೇಕಾಗಿದೆ. ಜನರಿಗೆ ಸಾರವಾದ ಸರಿಯಾದ ಆಹಾರ ಸಿಕ್ಕುತ್ತಿಲ್ಲ, ಇದರಿಂದ ಕಾಯಿಲೆ ಹೆಚ್ಚಾಗಿದೆ. ಔಷಧಿ ಅಂಗಡಿಗಳಿಗೆ ಹೋದರೆ ಒಂದಕ್ಕೆ ನಾಲ್ಕರಷ್ಟು ಬೆಲೆ ಔಷಧಿಗಳಿಗೆ ಕೊಡಬೇಕಾಗಿದೆ. ಮುಖ್ಯವಾದ ಔಷಧಿಗಳು ಸಿಕ್ಕುತ್ತಿಲ್ಲ, ಇದಕ್ಕೆ ಕಾರಣ ಕೊಡಬೇಕು. ಸರಕಾರ ರಾಷ್ಟ್ರೀಕರಣ ಮಾಡಿ ಕಾರ್ಖಾನೆಗಳನ್ನು ಔಷಧಿಗಳನ್ನು ತಯಾರಿಸಿ ಜನರಿಗೆ ಒದಗಿಸುವುದಕ್ಕಾಗುವುದಿಲ್ಲವೇ ? ಅನೇಕ ಔಷಧಿಗಳೇನು ದೊರೆಯುವುವು ಅವು ಕೃತಕವಾದುವು ಮತ್ತು ಮೋಸ ಇದರಲ್ಲಿದೆ ಎಂದು ಹೇಳುವರು. ಆದುದರಿಂದ ಸರಕಾರದವರೇಕೆ ತಾವೇ ತಯಾರಿಸಿ ಕೊಡಲು ಯೋಜನೆ ಮಾಡಿಲ್ಲ ಎಂದು ಪ್ರಶ್ನೆ ಮಾಡಬೇಕಾಗಿದೆ.

ಈಗ ಪ್ರಕೃತಿಯ ವಿಕೋಪದಿಂದ ಪವರ್ ಕಡಮೆಯಾ ಅನೇಕ ಕಡೆ ತೊಂದರೆಯಾಗಿದೆ, ಪ್ರಕೃತಿಗೆ ವಿರೋಧವಾಗಿ ಏನೂ ಮಾಡುವಂತಿಲ್ಲ. ಅನೇಕ ಸಾರಿ ಮಳೆಯಿಲ್ಲದೆ, ಹೆಚ್ಚು ಮಳೆಯಾಗಿ, ಪವರ್ ಷಟ ಡೌನ್ ಆಗಿ ತೊಂದರೆಯಾದಾಗ ಸರಿಯಾದ ರೀತಿಯಲ್ಲಿ ಸರಕಾರ ಹೇಳಿದರೆ ನಾವು ಸಹಕರಿಸುತ್ತೇವೆ. ಆದರೆ ಸರಕಾರ ಎಲ್ಲಾ ಕಷ್ಟವೂ ವಿರೋಧ ಪಕ್ಷದಿಂದ ಬರುತ್ತದೆ ಎಂದರೆ ಅದು ನಿಲ್ಲುವುದಿಲ್ಲ. ಎರಡನೆಯದಾಗಿ ನೋಟ್ ಛಾಪ ಮಾಡಿದರೆ ೬—೭ ಸಾವಿರ ಕೋಟಿ ಪಡೆಯಬಹುದು, ಅದರಿಂದ ಅನುಕೂಲವೆಂದು ಹೇಳುವುದು ಅದರಿಂದ ಸಾಲ ಹೆಚ್ಚಿಸುವುದು ಅಂತರ ಕಡಮೆ ಮಾಡುವುದು ಸರಿಯಲ್ಲ. ಹಣದುಬ್ಬರವಿರುವವರೆಗೆ ಬೆಲೆ ಇಳಿಯುವುದಿಲ್ಲವೆಂದು ಕೇಂದ್ರ ಸರಕಾರವೇ ಹೇಳಿದೆ. ಮತ್ತು ಈ ನೌಕರ ವರ್ಗದವರಿಗೆ ಒಂದು ಕಡೆ ಡಿ.ಎ. ಜಾಸ್ತಿ ಮಾಡಿದರೆ ಇನ್ನೊಂದು ಕಡೆಯಲ್ಲಿ ಸರ್ಕಾರದವರು ಜನರ ಮೇಲೆ ತೆರಿಗೆಗಳನ್ನು ಹೆಚ್ಚಿಸುವುದು. ಹೀಗೆ ಮಾಡಿದರೆ ಈ ಬೆಲೆಗಳು ಇಳಿಯುವುದಕ್ಕೆ ಅವಕಾಶವೆಲ್ಲಿದೆ ? ಒಂದು ಕಡೆ ಡಿ.ಎ. ಕೊಡುವುದು ಇನ್ನೊಂದು ಕಡೆ ಟ್ಯಾಕ್ಸ್ ಹೆಚ್ಚಿಸುವುದು ಹೀಗೆ ಹೋಗುತ್ತಿದ್ದರೆ ಇದಕ್ಕೆ ಕೊನೆಮೊದಲು ಎಲ್ಲಿದೆ ? ಟ್ಯಾಕ್ಸನ್ನು ಹೆಚ್ಚುಮಾಡಿ ಡಿ.ಎ. ಕೊಟ್ಟರೆ ಅದರಿಂದೇನೂ ಅವರಿಗೆ ಪ್ರಯೋಜನವಾಗುವುದಿಲ್ಲ. ಅದಕ್ಕಾಗಿ ನಾನು ದೇಶದಲ್ಲಿ ಹೆಚ್ಚು ಹೆಚ್ಚು ಉತ್ಪನ್ನ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಿ ಹೇಳುತ್ತಿದ್ದೇನೆ. ಹಾಗೆ ಉತ್ಪನ್ನ ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಜನ ಸಂಖ್ಯೆಯನ್ನಾದರೂ ಕಡಮೆ ಮಾಡಬೇಕು. ಅದೂ ಕೂಡ ಸಾಧ್ಯವಾಗುತ್ತಿಲ್ಲ. ವರ್ಷಂಪ್ರತಿ ಈ ಬಡತನದ ರಾಷ್ಟ್ರದಲ್ಲಿ ೧೦—೧೨ ಪರ್ಸೆಂಟ್ ಜನಸಂಖ್ಯೆ ಹೆಚ್ಚುತ್ತಿದೆ. ಆದರೆ ಅದಕ್ಕೆ ತಕ್ಕಂತೆ ಉತ್ಪನ್ನ ಮಾತ್ರ ಹೆಚ್ಚುತ್ತಿಲ್ಲ. ಅಂದಾಗ ರಾಷ್ಟ್ರದಲ್ಲಿ ಬಡತನ ನಿವಾರಣೆ ಮಾಡುವುದಿನ್ನೆಲ್ಲಿಂದ ಬಂತು ? ಒಟ್ಟಿನಲ್ಲಿ ಉತ್ಪಾದನೆಯನ್ನು ಹೆಚ್ಚಿಸತಕ್ಕ ಕಡೆಗೆ ನಮ್ಮೆಲ್ಲರ ಗಮನ ಹರಿಯಬೇಕು. ಜೊತೆಗೆ ಮಂತ್ರಿಗಳು ನಡೆಸುತ್ತಿರುವ ಆ ವೈಭವದ ಜೀವನವನ್ನು

(ಶ್ರೀ ಟಿ. ಆರ್. ಶಾಮಣ್ಣ)

ಕೈಬಿಟ್ಟು ಅವರು ಸರಳ ಜೀವನ ನಡೆಸಬೇಕು. ಅವರು ಪ್ರವಾಸ ಮಾಡುವುದನ್ನು ಕೈಬಿಡಬೇಕು. ಮೊನೆ ಒಂದೇ ದಿನ ಒಂದು ಕಡೆಯಲ್ಲಿ ಅಂದರೆ ಆ ಹುಬ್ಬಳ್ಳಿಯಲ್ಲೊ ಏನೋ ಒಂದು ಸಮಾರಂಭದಲ್ಲಿ ೭—೮ ಜನ ಮಂತ್ರಿಗಳು ಸೇರಿದ್ದರು. ಹೀಗಾದರೆ ರಾಜ್ಯದ ಹಣದ ಅಡಚಣೆ ಯಾವತ್ತೂ ತಪ್ಪುವುದಿಲ್ಲ. ಆದರೆ ಈ ಅಧಿಕಾರ ಯಾರಿಗೂ ಶಾಶ್ವತವಲ್ಲ. ಈ ದಿವಸ ಮಂತ್ರಿಗಳಾಗಿ ಮೆರೆದರೆ ನಾಳೆ ಈ ಕೆಲಸ ಹೋದ ಮೇಲೆ ರಸ್ತೆಯಲ್ಲಿ ಹೋಗುತ್ತಿದ್ದರೆ ಕೇಳತಕವರಿರುವುದಿಲ್ಲ. ಆದ್ದರಿಂದ ವೈಭವದ ಜೀವನ ಸರಿಯಲ್ಲ. ಇದನ್ನು ಕೈಬಿಡಬೇಕೆಂದು ಹೇಳುತ್ತೇನೆ. ಸರ್ಕಾರದಲ್ಲಿ ಆಡಳಿತದ ವೆಚ್ಚವನ್ನು ಕಡಮೆ ಮಾಡಬೇಕು.*

ಶ್ರೀ ಟಿ. ಆರ್. ಶಾಮಣ್ಣ. —ಇನ್ನು ನಾನು ಹೇಳಬೇಕೆಂದಿರುವುದು ನಮ್ಮ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಈ ಕಾರ್ಖಾನೆಗಳಲ್ಲಿ ಉತ್ಪನ್ನ ಜಾಸ್ತಿಯಾಗಬೇಕು. ಹಾಗೆ ದೇಶದಲ್ಲಿ ಆಹಾರ ಉತ್ಪನ್ನವು ಕೂಡ ಜಾಸ್ತಿಯಾಗಬೇಕು. ಅದಕ್ಕೆ ಸರ್ಕಾರ ರೈತನಿಗೆ ಅಗತ್ಯವಾಗಿ ಬೇಕಾದ ಗೊಬ್ಬರ ಇತ್ಯಾದಿಯನ್ನು ಸಾಕಷ್ಟು ಸರಬರಾಯಿ ಮಾಡಬೇಕು. ಆದರೆ ಸರ್ಕಾರ ಅದನ್ನು ಮಾಡುತ್ತಿಲ್ಲ. ಇಲ್ಲಿಯವರೆಗೆ ನಮ್ಮ ರೈತರು ಈ ರಾಸಾಯನಿಕ ಗೊಬ್ಬರಗಳನ್ನು ನಂಬಿಕೊಂಡು ಅತ್ತ ಅವರು ಹಿಂದಿನಿಂದಲೂ ತಯಾರಿಸುತ್ತಿದ್ದ ಹಸುರೆಲೆಗೊಬ್ಬರ ಮತ್ತು ಜಾನುವಾರುಗಳ ಗೊಬ್ಬರ ಇತ್ಯಾದಿಗಳನ್ನು ಮಾಡದೆಅಶ್ರದ್ಧೆ ಮಾಡಿ ಈಗ ತೊಂದರೆಗೆ ಸಿಕ್ಕಿಬಿದ್ದಿದ್ದಾರೆ. ಆದರೆ ಇದರಲ್ಲಿ ಸರ್ಕಾರದ ಹೊಣೆಯಿಲ್ಲ ಅನ್ನುವಂತಿಲ್ಲ. ಇಲ್ಲಿ ಕಷ್ಟದಿಂದ ಜೀವನ ಮಾಡಿ ಅದರ ಅನುಭವ ಗಳಿಸಿರತಕ್ಕ ಸದಸ್ಯರು ಅನೇಕರಿದ್ದಾರೆ. ಆದುದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾದ್ದು ಅನಗತ್ಯ. ಆದರೆ ಸರ್ಕಾರವನ್ನು ಟೀಕೆ ಮಾಡಿ ಅದರ ಬಗ್ಗೆ ಸರಿಯಾದ ಸಲಹೆಗಳನ್ನು ಮಾಡದಿದ್ದರೆ ಅದು ಸರಿಯಾದ್ದಲ್ಲ. ಅದಕ್ಕಾಗಿ ನಾನು ಸೂಚಿಸತಕ್ಕ ಸಲಹೆಗಳೆಂದರೆ—(೧) ಸರ್ಕಾರವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಸುವುದು ಮತ್ತು ತೆರಿಗೆಗಳನ್ನು ಹಾಕುವುದನ್ನು ಕಡಮೆ ಮಾಡುವುದು : (೨) ೧೯೪೭ರಿಂದ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ನಂತರ ಇಲ್ಲಿಯವರೆಗೆ ಅಂದರೆ ೧೯೭೪ರ ವರೆಗೆ ಯಾರು ಯಾರು ಎಷ್ಟೆಷ್ಟು ಸಂಪಾದನೆ ಮಾಡಿದ್ದಾರೆಂಬ ಬಗ್ಗೆ ಸರಿಯಾದ ಅಂಕೀ ಅಂಶಗಳನ್ನು ಎಲ್ಲರಿಂದಲೂ ಪಡೆಯಬೇಕು. ಹಾಗೆ ಸರಿಯಾದ ಅಂಕೀ ಅಂಶಗಳನ್ನು ಕೊಡದೆ ಮುಚ್ಚಿ ಹಾಕತಕ್ಕವರ ಆಸ್ತಿಯೇನಿದೆ ಅದನ್ನು ಸಂಪೂರ್ಣವಾಗಿ ಸರ್ಕಾರಕ್ಕೆ ವಶಪಡಿಸಿಕೊಳ್ಳುವುದು, ಇದಕ್ಕೆ ಕಾರಣವೇನೆಂದರೆ ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ಅನೇಕರು ಭಿಕಾರಿಗಳಾಗಿದ್ದವರು ಈ ದಿವಸ ಲಕ್ಷಾಧಿಪತಿಗಳಾಗಿದ್ದಾರೆ ಇದಕ್ಕೆ ಸೂಕ್ತವಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಅನುಕೂಲವಾಗುವಂತೆ ರಾಜ್ಯಾಂಗವನ್ನು ತಿದ್ದುಪಡಿ ಮಾಡುವುದು. ಇನ್ನು (೩)ನೇಯದಾಗಿ ವರ್ತಕ ವೃತ್ತಿಯಲ್ಲಿ ಅನ್ಯಾಯದಿಂದ ಕಳ್ಳಸಂತೆಯಲ್ಲಿ ಅಕ್ರಮವಾಗಿ ಹಣವನ್ನು ಗಳಿಸಿರತಕ್ಕ ಜನರನ್ನು ಪತ್ತೆ ಹಚ್ಚಿ ಅವರನ್ನು ಮಾರುಕಟ್ಟೆಯಲ್ಲಿ ಬಹಿರಂಗವಾಗಿ ಮೆರವಣಿಗೆ ಮಾಡಿ ಅವರಿಗೆ ಹಾರ್ಸ್‌ವಿಪ್ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಇದಕ್ಕೆ ಸೂಕ್ತವಾದ ಕಾನೂನು ಆಗಬೇಕು. ಆದರೆ ಸರ್ಕಾರಕ್ಕೆ ಈ ಕಳ್ಳಸಂತೆ ಕೋರರನ್ನು ತಡೆಗಟ್ಟುವುದಕ್ಕೆ ಇರತಕ್ಕ ಒಂದು ತೊಂದರೆ ಎಂದರೆ ಸರ್ಕಾರದವರು ಅವರ ಹತ್ತಿರ ಹೋಗಿ ಪಾರ್ಟಿಗೆ ಫಂಡನ್ನು ಎತ್ತುವುದರಿಂದ ಅದನ್ನು ನಿಲ್ಲಿಸಲು ಸ್ವಲ್ಪ ತೊಂದರೆಯಾಗಿದೆ. ಅಂಥ ಜನರಿಂದ ಫಂಡನ್ನು ಎತ್ತದೆ ಅವರ ಬಗ್ಗೆ ನಿರ್ಧಿಷ್ಟವಾಗಿ ಕಾರ್ಯಕ್ರಮ ಕೈಗೊಳ್ಳಬೇಕು. ಇನ್ನು (೪) ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಾಮಾನುಗಳ ಧಾರಣೆವಾಸಿಗಳು ಹೆಚ್ಚುವಂತೆ ತೆರಿಗೆಗಳನ್ನು ಹಾಕಬಾರದು. ಈ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸರ್ಕಾರದವರು ದೇಶದಲ್ಲಿ ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ಏನೇ ಪ್ರಯತ್ನ ಮಾಡಲಿ ಅದಕ್ಕೆ ವಿರೋಧ ಪಕ್ಷಗಳು ಅಡ್ಡಬರುವುದಿಲ್ಲ. ರೈತರು ದೇಶದಲ್ಲಿ ಹೆಚ್ಚು ಉತ್ಪನ್ನ ಮಾಡಲು ಅವರಿಗೆ ಇನ್‌ಸೆಂಟಿವ್ ಮೂಡುವುದಕ್ಕೆ ಅವಕಾಶ ಮಾಡಿ ಅವರಿಗೆ ಗೊಬ್ಬರ ವಗೈರೆಗಳನ್ನು ಹೆಚ್ಚಿಗೆ ಕೊಡಬೇಕು. ಆದರ ಜೊತೆಗೆ ನಾನು ಮೊದಲೇ ಹೇಳಿದ ಹಾಗೆ ಫ್ಯಾಮಿಲಿ ಪ್ಲಾನಿಂಗ್ ವಿಷಯವಾಗಿ ಅನೇಕ ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ನನ್ನ ಅನುಭವದಲ್ಲಿ ಹೇಳುವುದಾದರೆ ಈಗ ಪ್ರೊಡಕ್ಷನ್ ಹೆಚ್ಚಾಗಬೇಕು, ಆದರೆ ಪಾಪುಲೇಷನ್ ಕಡಿಮೆ ಮಾಡುವುದಕ್ಕೆ ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳಬೇಕು. ಜನಸಂಖ್ಯೆಯನ್ನು ಹೆಚ್ಚಿಗೆ ತಡೆಯುಹಿಡಿಯುವುದಕ್ಕೆ ಎಲ್ಲ ರೀತಿಯಲ್ಲಿಯೂ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಲಂಚದ ಹಾವಳಿಯನ್ನು ತಾವು ತಪ್ಪಿಸುವುದಕ್ಕೆ ಪೂರ್ಣವಾಗಿ ವಿಫಲಗೊಂಡಿದ್ದೀರಿ. ಎಲ್ಲಿಯವರೆಗೆ ಜನಗಳಲ್ಲಿ ಈ ಒಂದು ಮನೋಭಾವ ಹೋಗುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ಆಡಳಿತ ಸರಿಹೋಗುವುದಿಲ್ಲ. ಜನಗಳೂ ಸಹ ಸುಖವಾಗಿ ಇರುವುದಿಲ್ಲ. ನೀವು ಪಾರ್ಟಿಯ ಹಿತದೃಷ್ಟಿಯನ್ನು

---

*Matter expunged as ordered by the chair.

ಬಿಟ್ಟು ಲಂಚಕೋರರನ್ನು ಬಲಿ ಹಾಕಬೇಕು. ಇದರ ಬಗ್ಗೆ ಸಾಕಷ್ಟು ಕ್ರಮ ತೆಗೆದುಕೊಳ್ಳಿ. ಎಲ್ಲ ಇಲಾಖೆಗಳಲ್ಲಿಯೂ ಇದರ ಒಂದು ಹಾವಳಿಯನ್ನು ತಪ್ಪಿಸುವ ಹಾಗೆ ಕಾರ್ಯಾಚರಣೆ ಮಾಡಬೇಕು ಎಲ್ಲಕ್ಕಿಂತಲೂ ಮುಖ್ಯವಾಗಿ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ತಮ್ಮ ಸರಳಜೀವನದಿಂದ ಹೆಚ್ಚು ಜನರನ್ನು ಆಕರ್ಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ಹೆಚ್ಚಿಗೆ ಸರಳ ಜೀವನ ಮಾಡುವುದನ್ನು ಅನುಸರಿಸಬೇಕು. ನಿಮ್ಮ ಎಸ್ಟಾಬ್ಲಿಷ ಮೆಂಟ್ ವಗೈರೆಗಳನ್ನು ಕಡಿಮೆ ಮಾಡ ಬೇಕು, ರಾಜವೈಭವಗಳನ್ನೂ ಸಹ ನೀವು ಕಡಿಮೆ ಮಾಡಬೇಕು. ನೀವು ಸುಮ್ಮನೆ ವಿಶೇಷವಾಗಿ ಸುತ್ತಾಡುವುದನ್ನು ಕಡಿಮೆ ಮಾಡಬೇಕು. ಲೆಕ್ಕಕ್ಕೆ ನೋಡಿದರೆ ಮಂತ್ರಿಗಳ ಸಂಖ್ಯೆ ಬೇಕಾದಷ್ಟು ಇದೆಯೆನ್ನುತ್ತಾರೆ. ಆದರೆ ಅವರು ಆಫೀಸಿನಲ್ಲಿ ಕೂತು ಕೆಲಸ ಮಾಡುವುದಂತೂ ಬಹಳ ಕಡಿಮೆಯಾಗಿದೆ. ಏಕೆಂದರೆ ವಿಶೇಷವಾಗಿ ಟೂರ್‌ಗಳಲ್ಲಿಯೇ ಇವರು ಇರುತ್ತಾರೆ. ಯಾವ ಗಳೂ ನೀವು ದೇಶದ ಹಿತದೃಷ್ಟಿ ಯನ್ನು ಜಾಸ್ತಿಮಾಡಿ, ಪಾರ್ಟಿ ಹಿತದೃಷ್ಟಿಯನ್ನು ಕಡಿಮೆ ಮಾಡಬೇಕು. ಈಗ ಆಹಾರ ಪದಾರ್ಥಗಳ ಬೆಲೆಗಳ ಹಾಹಾಕಾರ ಹೆಚ್ಚಾಗಿ ಬೆಳೆದಿದೆ. ಬಹಳ ದಿವಸಗಳಿಂದಲೂ ಈ ರೀತಿ ಕರ್ನಾಟಕದ ಜನರು ತೊಂದರೆ ಪಡುತ್ತಿರುವ ಪರಿಸ್ಥಿತಿ ಇದೆ. ಈ ಒಂದು ತೊಂದರೆಯನ್ನು ಬಗೆಹರಿಸಬೇಕಾದರೆ ನಾವು ನೀವೂ ಒಟ್ಟಿಗೆ ಕಲೆತು ಕೆಲಸ ಮಾಡಬೇಕು. ಖಂಡಿತವಾಗಿ ಪ್ರತಿಯೊಬ್ಬ ಮಂತ್ರಿಯೂ ನಾನು ಮಂತ್ರಿಯಲ್ಲ, ಜನರ ಸೇವಕ ಎನ್ನುವ ಮನೋಭಾವನೆಯನ್ನೂ ಇಟ್ಟುಕೊಂಡು ಕೆಲಸ ಮಾಡ ಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ.—ಇಲ್ಲದಿದ್ದರೆ ಜನ ದಂಗೆ ಏಳುತ್ತಾರೆ. ಅಂಥಾದನ್ನು ನೋಡಿ ಕೊಳ್ಳುವುದಕ್ಕೂ ಈಗ ಇಂದಿರಾ ಗಾಂಧಿ ಬ್ರಿಗ್ರೇಡ್ ಎಂದು ಬಹಳ ಜನರು ಇದ್ದಾರೆ.

ಶ್ರೀ ಟಿ.ಆರ್. ಶಾಮಣ್ಣ.—ಅವರು ಈಗ ಏನು ಮಾಡಿದ್ದಾರೆಂದರೆ ಬ್ರಾಂದಿ, ಹೆಂಡ ಕುಡಿಯು ವವರ ಸಂಖ್ಯೆಯನ್ನು ಜಾಸ್ತಿಯಾಗಿ ಬೆಳೆಸಿದ್ದಾರೆ. ಜೂಜಿನ ಕಟ್ಟೆಗಳನ್ನು ಬೇಕಾದಷ್ಟು ಬೆಳೆಸಿದ್ದಾರೆ. ನಾವು ಪದೇ ಪದೇ ಭಾಷಣಗಳನ್ನು ಈ ಸಭೆಯಲ್ಲಿ ಮಾಡುತ್ತಲೇ ಇದ್ದೇವೆ. ಆದರೂ ಸಾಕಷ್ಟು ಪ್ರಯೋಜನವಾಗಲಿಲ್ಲ. ಜನಗಳ ಕಷ್ಟಗಳನ್ನು ಆದಷ್ಟು ಜಾಗ್ರತೆಯಾಗಿ ಪರಿಹರಿಸಿ ಎಂದು ಅಸೆಂಬ್ಲಿ ಯಲ್ಲಿ ನಾನು ಮತ್ತು ನನ್ನ ಸ್ನೇಹಿತರು ನಾನಾ ರೀತಿಯಲ್ಲಿ ಈಗಾಗಲೇ ಭಾಷಣಗಳನ್ನು ಮಾಡಿದ್ದೇವೆ. ಅವುಗಳ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿಲ್ಲ. ನೀವು ಮಂತ್ರಿಗಳಾಗಿದ್ದಾಗ ಇಂತಿಂಥ ಒಳ್ಳೆಯ ಕೆಲಸಗಳು ಆಗಿವೆ ಎಂಬುದಾಗಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕು. ಅಂತಹ ನಿಮ್ಮ ಒಳ್ಳೆಯ ಕೆಲಸಗಳಿಗೆ ನಮ್ಮ ಪೂರ್ಣ ಬೆಂಬಲ ಇದೆಯೆಂದು ಹೇಳಿ ನನಗೆ ಇಷ್ಟು ಹೊತ್ತು ಇಲ್ಲಿ ಮಾತ ನಾಡುವುದಕ್ಕೆ ಅವಕಾಶವನ್ನು ಮಾನ್ಯ ಅಧ್ಯಕ್ಷರು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ).—ಮಾನ್ಯ ಅಧ್ಯಕ್ಷಣಿಯವರೇ, ಈಗತಾನೆ ಮಾನ್ಯ ಶ್ರೀ ಶಾಮಣ್ಣನವರು ಅಗತ್ಯವಸ್ತುಗಳ ಅಭಾವ, ಹಾಗೂ ಬೆಲೆಯೇರಿಕೆಯ ಬಗ್ಗೆ ಅವರದೇ ಆದ ಭಾಷೆಯಲ್ಲಿ ಮಾತನಾಡಿ, ಕೆಲವಾರು ವಿಷಯಗಳನ್ನು ಈ ಸದನದ ಮುಂದೆ ಇಟ್ಟಿದ್ದಾರೆ. ಆದರೆ ನಾವು ನಿಷ್ಪಕ್ಷಪಾತವಾಗಿ ಹಾಗೂ ಕೂಲಂಕಷವಾಗಿ ನೋಡಿದ್ದಾದರೆ, ಈ ಒಂದು ಸಮಸ್ಯೆಗೆ ಯಾರು ಕಾರಣರು, ಅದು ಇವತ್ತು ಆಯಿತೇ, ನಿನ್ನೆ ಆಯಿತೇ ಎಂಬುದಾಗಿ ನೋಡಬೇಕಾಗುತ್ತದೆ. ಅವರಿಗೆ ನ್ಯಾಷನಲ್ ಮತ್ತು ಇಂಟರ್ ನ್ಯಾಷನಲ್ ಪ್ರಾಬ್ಲಮ್ಸ್ ಇವು ಎಂಬುದು ಚೆನ್ನಾಗಿ ಗೊತ್ತಿರಬೇಕು. ಆಹಾರ ಅಭಾವ ಎನ್ನುವುದು ಕೇವಲ ನಮ್ಮ ಇಂಡಿಯಾ ದೇಶದಲ್ಲಿ ಒಂದರಲ್ಲಿಯೇ ಅಲ್ಲ. ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಇದು ಇದ್ದೇ ಇದೆ. ಆದರೆ ಇದಕ್ಕೆ ಕಾರಣಗಳು ಅನೇಕವಿವೆ. ಅದರಲ್ಲಿ ಬಂಗ್ಲಾ ದೇಶದ ಸಮಸ್ಯೆಯೂ ಒಂದು ಆಯಿತು. ಅವರೇ ಅದನ್ನು ಅನೇಕ ಸಾರಿ ಒಪ್ಪಿದ್ದಾರೆ. ಇದರಿಂದ ನಮ್ಮ ದೇಶದಲ್ಲಿ ಒಂದು ಕೋಟಿ ಜನರಿಗೆ ಆಹಾರವನ್ನು ಕೊಡುವ ಸಂದರ್ಭ ಬಂತು : ಆಗಲೇ ಭಾರತ ಮತ್ತು ಪಾಕೀಸ್ಥಾನ ಯುದ್ಧ ಬೇರೆ ಆಯಿತು. ಆಗ ನಮ್ಮಲ್ಲಿದ್ದಂಥ ದಿನಸಿಯೆಲ್ಲವೂ ಖರ್ಚಾಗಿ ಹೋಯಿತು. ಅದನ್ನು ಅವರು ಮರೆತುಹೋಗಿದ್ದಾರೆಂದು ಕಾಣುತ್ತದೆ ಕೆಲವು ವರ್ಷಗಳಿಂದ ನಮಗೆ ಮಳೆ ಬೆಳೆಗಳು ಸಾಕಷ್ಟು ನಮ್ಮ ದೇಶದಲ್ಲಿ ಆಗಿಲ್ಲ. ಇನ್ನು ಅನೇಕ ಕಾರಣಗಳಿಂದ ದುರದೃಷ್ಟವಶಾತ್ ನಮ್ಮ ಸರ್ಕಾರದವರು ಹೋದ ವರ್ಷ ಸುಮಾರು ೬೩ ಕೋಟಿ ರೂಪಾಯಿಗಳನ್ನು ಕ್ಷಾಮ ನಿವಾರಣೆ ಗಾಗಿಯೇ ಖರ್ಚು ಮಾಡಬೇಕಾಯಿತು. ಆದ್ದರಿಂದ ನಮಗೆ ಸಾರ್ವಜನಿಕರ ಬೆಂಬಲ ಹೆಚ್ಚಾಗಿ ದೊರೆಯುವ ಅವಶ್ಯಕತೆ ಅಗತ್ಯವಾಯಿತು, ಸರ್ಕಾರದ ಮತ್ತು ಸಾರ್ವಜನಿಕರ ಬೆಂಬಲವೂ ನಮಗೆ ಸಾಕಷ್ಟು ಬಂದಿದ್ದರಿಂದ, ನಮ್ಮ ಈ ಸಂಸ್ಥಾನದಲ್ಲಿ ಈಗಿನ ಒಂದು ಆಹಾರದ ಅಭಾವ ಏನಿದೆ ಅದನ್ನು ಹಿಡಿಗಟ್ಟಲು ನಾನಾ ಕಾರ್ಯಕ್ರಮಗಳನ್ನು ತಕ್ಕಮಟ್ಟಿಗೆ ಸರ್ಕಾರ ಕೈಗೊಳ್ಳಲು ಸಹಾಯವಾಯಿತು.

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಮೊಟ್ಟಮೊದಲನೆಯದಾಗಿ ಫುಡ್ ಪ್ರಾಬ್ಲಂ ಎಂಬುದನ್ನು ''ಸಾಲ್ವ್'' (solve) ಮಾಡಬೇಕಾದಂತಹ ಪ್ರತಿಯೊಬ್ಬರಿಗೂ ಸೇರಿ ಜವಾಬ್ದಾರಿ ಆಗಿದೆ ; ಪ್ರತಿಯೊಬ್ಬ ಮನುಷ್ಯನಿಗೂ ಬಹಳ ಮುಖ್ಯವಾಗಿ ಬೇಕಾದುದು, ಆಹಾರ, ವಸತಿ ಮತ್ತು ಬಟ್ಟೆ. ಇದಕ್ಕಾಗಿ ಪ್ರತಿಯೊಬ್ಬರೂ ಹಗಲಿರುಳೂ ದುಡಿಯ ಬೇಕಾಗುತ್ತದೆ. ನಮ್ಮ ಸರ್ಕಾರದವರು ಪ್ರಪ್ರಥಮವಾಗಿ ಈಗಾಗಲೆ Radical ಲ್ಯಾಂಡ್ ರಿಫಾ ರಮ್ಸ್ ತಂದಿದ್ದಾರೆ. ನಾವು ಯಾವುದೇ ಕಾರ್ಯ ಮಾಡಿದರೂ ಮುಖ್ಯವಾಗಿ ನಮ್ಮ ದೇಶದಲ್ಲಿ ಪ್ರೊಡಕ್ಷನ್ ಜಾಸ್ತಿಯಾಗಬೇಕು ; ಅದನ್ನೇ ಸರಿಯಾದ ರೀತಿಯಲ್ಲಿ ಡಿಸ್ಟ್ರಿಬ್ಯೂಷನ್ ಸಹಿ ಹಾಕಬೇಕು. ಪ್ರೊಕ್ಯೂರ್ ಮೆಂಟ್ ಮಾಡುವವರು ಮುಖ್ಯವಾಗಿ ಯಾರು ಎಂಬುದನ್ನು ನಿಗದಿ ಮಾಡುವುದೇ ಬಹಳ ಕಷ್ಟವಾಗಿದೆ. ಏಕೆಂದರೆ, ಈಗಿನ ಪರಿಸ್ಥಿತಿಯಲ್ಲಿ ಅಂದರೆ ಅರ್ಬನೈಜೇಷನ್ ರೂರಲೈಜೇಷನ್, ಇಂಡಸ್ಟ್ರಿಯ ಲೈಜೇಷನ್‌ಗಳಲ್ಲಿ ಬೆಳವಣಿಗೆಯೇ ಜಾಸ್ತಿಯಾಗುತ್ತಿದೆ, ಜಮೀನುಗಳು ಮೊದಲು ಇದ್ದಹಾಗೆಯೇ ಈಗಲೂ ಅನೇಕ ಕಡೆಗಳಲ್ಲಿವೆ. ಜಮೀನು ಮಾಡತಕ್ಕ ಜನರು ಮಾತ್ರ ಇತ್ತೀಚೆಗೆ ಬಹಳವಾಗಿ ಮುಂದೆ ಬರುತ್ತಿಲ್ಲ. ವ್ಯವಸಾಯ ಮಾಡುವ ಜನಾಂಗ ಕಮ್ಮಿ ಆಗುತ್ತಿದ್ದಾರೆ ಆಹಾರವನ್ನು ಹೆಚ್ಚಿಗೆ ಜಮೀನುಗಳಲ್ಲಿ ಬೆಳೆಯಬೇಕೆಂದರೆ, ಜನಗಳು ಸಾಕಷ್ಟು ಮುಂದೆ ಮುಂದೆ ಬರುತ್ತಾ ಇಲ್ಲ. ಅವರಿಗೆ ಏನು ಮನೋಭಾವ ಉಂಟಾಗಿದೆಯೆಂದರೆ, ಯಾವುದಾದರೂ ಒಂದು ಫ್ಯಾಕ್ಟರಿಯಲ್ಲಿ ಕೆಲಸ ಸಿಕ್ಕಿದರೆ ಸಾಕು ಅಥವಾ ಯಾವುದಾದರೂ ಒಂದು ಉದ್ಯೋಗವನ್ನು ಪಟ್ಟಣದಲ್ಲಿ ಕಲ್ಪಿಸಿಕೊಂಡರೆ ಸಾಕು ಎಂಬುದಾಗಿ ಹೇಳುವ ಸನ್ನಿವೇಶ ಈಗ ಒದಗಿಬರುತ್ತಿದೆ. ಇದು ಆಗಬಾರದು. ಜಮೀನು ಮಾಡು ವವರು ತಂತಮ್ಮ ಜಮೀನುಗಳಲ್ಲಿ ಕೆಲಸ ಮಾಡಿ ಹೆಚ್ಚಿಗೆ ಉತ್ಪಾದನೆ ಮಾಡುವ ಕಡೆಗೆ ಹೆಚ್ಚು ಗಮನವನ್ನು ಹರಿಸಬೇಕು. ಸರ್ಕಾರದವರು ಸಹ ಅವರಿಗೆ ಸಕಲ ಸೌಲಭ್ಯ ಗಳನ್ನೂ ಸಕಾಲಕ್ಕೆ ಸರಿಯಾಗಿ ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕು. ಫಾರಂಗಳಲ್ಲಿ ಕೆಲಸ ಮಾಡು ವವರು ಜನ ಈಗ ಕಡಿಮೆಯಾಗಿರುವುದರಿಂದಲೇ ಬೆಳೆಯು ಉತ್ಪಾದನೆ ಕಡಿಮೆಯಾಗಿದೆ. ಫರ್ಟಿಲೈಜರ್ಸ್ ಬಗ್ಗೆ ಬಹಳವಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದರು. ತಮಗೆ ಗೊತ್ತಿರುವ ಹಾಗೆ ಹಸಿರು ಗೊಬ್ಬರದ ಉಪಯೋಗವನ್ನು ನಮ್ಮ ರೈತರು ಹೆಚ್ಚಿಗೆ ಪಡೆಯಬೇಕಾದರೆ ನಾವು ಹಸಿರು ಗೊಬ್ಬರವನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಬೇಕು.

ಅಧ್ಯಕ್ಷರು.—ತಾವು ಬೆಂಗಳೂರಿನಲ್ಲಿ ಕುಳಿತು ಇದರ ಬಗ್ಗೆ ಬಹಳ ಅನುಭವವನ್ನು ಪಡೆದು ಕೊಂಡಿದ್ದೀರಿ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನಾನು ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಓಡಾಡಿದ್ದೇನೆ. ಮತ್ತು ನನ್ನ ಜೀವಮಾನ ಅಲ್ಲಿಯೇ ಕಳೆದಿದ್ದೇನೆ. ಹಸಿರು ಗೊಬ್ಬರ ಮತ್ತು ಫರ್ಟಿಲೈಜೆರ್ಸ್ ಬಹಳ ಅವಶ್ಯಕವೆಂದು ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ಆದರೆ ತಯಾರಕರು ಮಾತ್ರ ಕಡಿಮೆ ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಫರ್ಟಿಲೈಜರ್ಸ್ ರೈತರಿಗೆ ಬಹಳ ಅವಶ್ಯಕತೆ ಇದೆಯೆಂದು ಹೇಳುತ್ತಾ ಅವುಗಳ ಬೆಲೆಯನ್ನು ನೀವೇ ಈಗ ಜಾಸ್ತಿ ಮಾಡುತ್ತಿದ್ದರೆ ಹೇಗೆ ?

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಒಟ್ಟಿನಲ್ಲಿ ಹೇಳುವುದಾದರೆ ಕ್ರಾಂತಿ ಅಥವಾ ರಿವಲೂ ಷನ್ಸನ್ನು ಇವಲ್ಯೂಷನ್ಸ್ Revoltion through Evolution ಮೂಲಕವೇ ಆಗಬೇಕು. ಇಷ್ಟು ಆಹಾರ ಸಮಸ್ಯೆಯ ವಿಚಾರವಾಯಿತು.

ಇನ್ನು ಆಹಾರ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಹಿಂದೆ ಪ್ರತಿಯೊಬ್ಬರಿಗೂ ಸ್ಟ್ಯಾಚುಟರಿ ರೇಷನಿಂಗ್ ಮೂಲಕ ಇದನ್ನು ವಿತರಣೆ ಮಾಡುವ ಜವಾಬ್ದಾರಿ ಇತ್ತು, ಆದರೆ ಇದರಿಂದ ವೀಕರ್ ಸೆಕ್ಷನ್ಸ್‌ಗೆ ತೊಂದರೆಯಾದುದರಿಂದ, ಇದನ್ನೂ ಕೂಡ ಇನ್‌ಫಾರ್ಮಲ್ ರೇಷನಿಂಗ್ ಇಡಬೇಕಾಗಿ ಬಂತು. ಆದರೆ ವರ್ತಕರಲ್ಲಿ ಹೆಚ್ಚಿಗೆ ಲಾಭದೃಷ್ಟಿ ಇದ್ದುದರಿಂದ ಅದಕ್ಕೆ ಒಂದು ರೆಮ್ಯೂನರೇಟಿವ್ ಪ್ರೈಸ್ ಇಟ್ಟಿದ್ದಾರೆ. ಈಗ ರೈತರಿಗೆ ಅದಕ್ಕೆ ಎಂದೂ ಕಾಣದ ಬೆಲೆಯನ್ನು ಕೊಟ್ಟು ತೆಗೆದುಕೊಳ್ಳ ಬೇಕೆಂದು ಹೇಳುತ್ತಿದ್ದಾರೆ. ೧೫೦ ರೂಪಾಯಿಗಳಿಂದ ೨೦೦ ರೂಪಾಯಿಗಳವರೆಗೆ ದಿನಸಿ ಬೆಲೆಯೂಗಿದೆ. ಹೆಚ್ಚು ಬೆಲೆಯನ್ನು ಕೊಟ್ಟು ಫರ್ಟಿಲೈಜರ್ಸ್ ತೆಗೆದುಕೊಳ್ಳುವುದಕ್ಕೆ ಮಧ್ಯಮವರ್ಗದವರಿಗೆ ಆಗುತ್ತಾ ಇಲ್ಲ. ಕೆಲವು ಜನ ವರ್ತಕರು ಮೂರು ತಿಂಗಳುಗಳ ಕಾಲ ಅವನ್ನು ಸ್ಟಾಕ್ ಇಟ್ಟು ಮತ್ತೆ ಬೆಲೆ ಗಳನ್ನು ಏರಿಸುತ್ತಾ ಇದ್ದುದರಿಂದ, ಅವುಗಳ ಬೆಲೆಯನ್ನೂ ಸಹ ಒಂದು ಕಂಟ್ರೋಲ್ ರೇಟಿನಲ್ಲಿ ನಿಗದಿ

ಮಾಡಲು ನಮ್ಮ ಸರ್ಕಾರದವರು ಪ್ರಯತ್ನ ಮಾಡಿದ್ದಾರೆ, ಹಿಂದಿಗಿಂತಲೂ ಸೌದೆ, ಸೀಮೆಯೆಣ್ಣೆ, ಎಲೆಕ್ಟ್ರಿಸಿಟಿ—ಇವುಗಳನ್ನು ಜನರು ಹೆಚ್ಚಿಗೆ ಉಪಯೋಗಿಸುತ್ತಿದ್ದರು ಆದರೆ ಈಗ ಅವುಗಳ ಬೆಲೆ ಬಹಳ ಜಾಸ್ತಿಯಾಗುತ್ತಾ ಇರುವುದರಿಂದ ಅದನ್ನು ಕೊಳ್ಳುವುದಕ್ಕೆ ಮಧ್ಯಮ ವರ್ಗದ ಜನರಿಗೆ ಬಹಳ ವಾಗಿ ಕಷ್ಟವಾಗುತ್ತಿದೆ. ಈ ವಿಚಾರವನ್ನು ನಾನು ಅನೇಕ ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ. ಮಾನ್ಯ ಅರಣ್ಯ ಮಂತ್ರಿಗಳೂ ಸಹ ನಮ್ಮಲ್ಲಿರತಕ್ಕ ಕಾಡಿನ ಸಂಪತ್ತು ಬಹಳ ಕಡಿಮೆಯಾಗಿದೆಯೆಂದು ಅನೇಕ ಸಾರಿ ಇಲ್ಲಿ ಒತ್ತಿ ಹೇಳಿದ್ದಾರೆ. ಎಲ್ಲರಿಗೂ ಜಮೀನು ಕೊಡುವ ಉದ್ದೇಶದಿಂದ, ಖಂಡಿತವಾಗಿಯೂ ಅಫಾರ್‌ಸ್ಟೇಷನ್ ಸ್ಕೀಮನ್ನು ನಿಲ್ಲಿಸಬಾರದು, ಒಂದು ಅಂಗುಲ ಜಮೀನನ್ನು ಫಾರೆಸ್ಟ್ ಇಲಾಖೆಯವರು ಇನ್ನು ಮುಂದೆ ಯಾರಿಗೂ ಬಿಟ್ಟು ಕೊಡಬಾರದು, ಅವರು, ಸರ್ಕಾರದವರೆ ಆಗಲಿ ಅಥವಾ ಸಾರ್ವಜನಿಕರೇ ಆಗಲಿ ;ನಮ್ಮ ಅರಣ್ಯ ಸಂಪತ್ತು ಈಗ ಇರುವುದು ಕೇವಲ ೧೪% ಗಳು ಮಾತ್ರ ಆದರೆ ರಾಷ್ಟ್ರದ ಮಟ್ಟದಲ್ಲಿ ಸುಮಾರು ಅರಣ್ಯ ಸಂಪತ್ತು ೨೩ % ಇದೆ ಆದುದರಿಂದ ಪ್ರಕೃತಿ ದತ್ತವಾದ ನಮ್ಮ ಕಾಡುಗಳನ್ನು ಹಾಗೆಯೇ ಉಳಿಸಿಕೊಂಡು ಬರುವುದು ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿ ಆಗಿದೆ, ಎಂದು ಒತ್ತಿ ಹೇಳುತ್ತೇನೆ.

ಶ್ರೀ ಕೆ. ಹೆಚ್ ಹನುಮೇಗೌಡ.—ಈಗ ಅದಕ್ಕೆ ಯಾರು ಹೊಣೆ, ಅದನ್ನು ಯಾರು ಮಾಡಬೇಕು ಎಂಬುದನ್ನು ದಯಮಾಡಿ ಹೇಳಿ.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು —ಈಗ ೫ನೇ ಪಂಚವಾರ್ಷಿಕ ಯೋಜನೆಗಳಿಗೆ ಸುಮಾರು ೨೫ ಸಾವಿರ ಕೋಟಿ ರೂಪಾಯಿಗಳನ್ನು ನಮ್ಮ ಭಾರತ ಸರ್ಕಾರದವರು ಖರ್ಚು ಮಾಡಿದ್ದಾರೆ. ಆ ದುಡ್ಡು ಎಲ್ಲವೂ ಎಲ್ಲಿ ಹೋಗಿದೆ ? ರಾಮಯ್ಯ, ತಿಮ್ಮಯ್ಯ, ಬೊಮ್ಮಯ್ಯ ಇವರುಗಳಿಗೆ ಹೋಗಿದೆ. ಎಲ್ಲಿಯವರೆಗೆ ನಮ್ಮ ಜನಗಳಲ್ಲಿ (National Character and Basic Honesty) ನ್ಯಾಷನಲ್ ಕ್ಯಾರೆಕ್ಟರ್ ಮತ್ತು ಪ್ರಾಮಾಣಿಕತೆ ಬರುವುದಿಲ್ಲವೋ ಅಲ್ಲಿಯವರೆಗೂ ನಮ್ಮ ದೇಶ ಮುಂದೆ ಖಂಡಿತ ಬರುವುದಿಲ್ಲ. ಜಪಾನಿಗೆ ಹೋಗಿ ನೋಡಿದರೆ ಅಲ್ಲಿನ ಜನಗಳ ರಾಷ್ಟ್ರೀಯ ಭಾವನೆ ಮತ್ತು ಪ್ರಾಮಾಣಿಕತೆ ಯಾವರೀತಿ ಇದೆಯೆಂಬುವನ್ನು ನೋಡಿ, ಇಂಗ್ಲೆಂಡ್ ಮತ್ತು ಅಮೇರಿಕಾಕ್ಕೆ ಹೋಗಿ ಅಲ್ಲಿನ ಜನಗಳ ರಾಷ್ಟ್ರೀಯ ಭಾವನೆ ಮತ್ತು ಪ್ರಾಮಾಣಿಕತೆ ಯಾವರೀತಿ ಇದೆಯೆಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಇಲ್ಲಿ ನಮ್ಮ ದೇಶದ ಜನಗಳ ನೈತಿಕ ಮಟ್ಟ ಅಧೋಗತಿಗೆ ಹೋಗಿದೆ. ಮತ್ತೆ ಕೆಳ ಮಟ್ಟದ್ದಾಗಿದೆ.

10-30 A.M.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಮ್ಮ ದೇಶದ ಜನಗಳ ನೈತಿಕ ಮಟ್ಟ ಅಧೋಗತಿಗೆ ಹೋಗುವುದಕ್ಕೆ ಕಾರಣವೇನು ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಅದಕ್ಕೆ ಮಾನ್ಯ ಸದಸ್ಯರೇ ಕಾರಣ. ಪಂಚವಾರ್ಷಿಕ ಯೋಜನೆಯ ಬಗ್ಗೆ ಸರ್ಕಾರದವರು ೨೫ ಸಾವಿರ ಕೋಟಿ ರೂಪಾಯಿಗಳನ್ನೇನು ಖರ್ಚು ಮಾಡಿದಾರೆ ಅದೆಲ್ಲವು ಕೂಡ ಬ್ಲಾಕ್‌ಮಾರ್ಕೆಟಿಯರ್ಸ್, ಸ್ಮಗ್ಲರ್ಸ್, ಹೋರ್ಡರ್ಸ್ ಇತ್ಯಾದಿಯವರ ಕೈ ಸೇರಿದೆ. ಅಂಥವರಿಗೆ ಯಾರೂ ಎನ್‌ಕರೇಜ್‌ಮೆಂಟ್ ಮಾಡಬಾರದು.

ಶ್ರೀ ಕೆ. ಎಚ್. ಹನುಮೇಗೌಡ.—ಅವರೆಲ್ಲರೂ ತಮ್ಮ ಕೃಪಾಕಟಾಕ್ಷದಲ್ಲೇ ಬೆಳೆದದ್ದು.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಕಾಳಸಂತೆಕೋರರು, ಸ್ಮಗ್ಲರ್ಸ್ ಮತ್ತು ಹೋರ್ಡರ್ಸ್‌ಗಳ ಹೆಸರುಗಳನ್ನು ಪಬ್ಲಿಷ್ ಮಾಡಬೇಕು. ಪಂಜಾಬಿನ ಶ್ರೀ ಪ್ರತಾಪ್‌ಸಿಂಗ್ ಕೈರಾನ್ ಮಾಡಿದ ಹಾಗೆ ಅಂತಹವರನ್ನು ಬೀದಿಗಳಲ್ಲಿ ಮೆರವಣಿಗೆ ಮಾಡಬೇಕು. ಅಲ್ಲದೆ ಕಠಿಣ ಶಿಕ್ಷೆಯನ್ನೇ ವಿಧಿಸಬೇಕು ಎಂದು ಸಲಹೆ ಮಾಡುತ್ತೇನೆ.

ಈಗ ಮಾನ್ಯ ವಿರೋಧಪಕ್ಷದ ಮಾನ್ಯ ಸದಸ್ಯರು ಸ್ಪ್ಯೂರಿಯಸ್ ಮೆಡಿಸಿನ್ ತಯಾರಿಕೆಯ ಬಗ್ಗೆ ಹೇಳಿದ್ದಾರೆ. ಆ ರೀತಿ ಕೆಟ್ಟ ಔಷಧಿಯನ್ನು ತಯಾರು ಮಾಡಿ ಎಂದು ಕಂಪನಿಯವರಿಗೆ ಶ್ರೀಮಂತಿ ಇಂದಿರಾಗಾಂಧಿಯವರು ಹೇಳಿದ್ದಾರೆಯೇ ? ಆದ್ದರಿಂದ ಎಲ್ಲಿಯವರೆಗೆ ನಮ್ಮ ದೇಶದ ಜನಗಳ ನೈತಿಕ ಮಟ್ಟ ಸರಿಹೋಗುವುದಿಲ್ಲ ಅಲ್ಲಿಯವರೆಗೆ ನಮ್ಮ ದೇಶ ಮುಂದೆ ಬರುವುದಿಲ್ಲ. ಈ ದೃಷ್ಟಿಯಿಂದ ಒಬ್ಬರನ್ನೊಬ್ಬರು ಟೀಕೆ ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಬೂಸಾ ಸರಿಯಾಗಿ ಸಿಕ್ಕುತ್ತಾ ಇಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದು ಬೇರೆ ಗೋಧಿ ಕೇಂದ್ರದ ಕಡೆಯಿಂದ ೨೫ ಸಾವಿರ ಟನ್ ಬರುವುದಕ್ಕೆ ಬದಲಾಗಿ ಈಗ ಕೇವಲ ೫ ಸಾವಿರ ಟನ್ ಬಂದರೆ ಅದನ್ನು ಹೇಗೆ ಹಂಚಬೇಕು ? ಗೋಧಿಯನ್ನು ನಮ್ಮ ಸಂಸ್ಥಾನದಲ್ಲಿ ಹೆಚ್ಚು ಬೆಳೆ

(ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು)

ಯಂತ್ತಿಲ್ಲ. ಆದ್ದರಿಂದ ಅದು ಪಂಜಾಬಿನಿಂದಲೋ ಹರಿಯಾನದಿಂದಲೋ ನಮ್ಮ ದೇಶಕ್ಕೆ ಬರಬೇಕು. ಬೂಸಾ ಕಡಿಮೆ ಕೊಡುತ್ತಿದ್ದಾರೆ ಎಂದು ಹೇಳಿದರೆ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬೇರೆ ದೇಶದಿಂದ ಬಂದದ್ದನ್ನು ಸರಿಯಾಗಿ ಹಂಚುವುದು ನಮ್ಮ ಸರ್ಕಾರದ ಜವಾಬ್ದಾರಿ. ಈಗ ಜಾನುವಾರುಗಳ ಸಂಖ್ಯೆ ಜಾಸ್ತಿಯಾಗಿದೆ. ಗೋಮಾಳಗಳ ಪ್ರದೇಶ ಕಡಿಮೆಯಾಗುತ್ತದೆ. ಏತಕ್ಕೆಂದರೆ ಬಡವರಿಗೆ ಸರ್ಕಾರದವರು ಜಮೀನು ಹಂಚುತ್ತಿದ್ದಾರೆ. ಹೀಗಿರುವಾಗ ಹೆಚ್ಚು ಹುಲ್ಲು ಹುಲ್ಲುಗಾವಲುಗಳಲ್ಲಿ ಹೇಗೆ ಸಿಕ್ಕುತ್ತದೆ. ಹುಲ್ಲಿನ ಅಭಾವ ಸಹಜ.

ಸೀಮೆ ಎಣ್ಣೆ ನಮ್ಮ ದೇಶದಲ್ಲಿ ಎಲ್ಲೋ ಸ್ವಲ್ಪ ಉತ್ಪತ್ತಿಯಾಗುತ್ತದೆ. ಇದು ಬೇರೆ ದೇಶದಿಂದ ನಮ್ಮ ದೇಶಕ್ಕೆ ಬರಬೇಕು ಇದು ನಮ್ಮ ದೇಶದ ಪ್ರಶ್ನೆ ಅಲ್ಲ. ಅಂತರರಾಷ್ಟ್ರೀಯ ಪ್ರಶ್ನೆ. ಬರುವ ಕೋಟಾವನ್ನು ಕಡಿಮೆ ಮಾಡಿರುವಾಗ ಸರ್ಕಾರದವರು ಇದನ್ನು ಹೇಗೆ ಸರಿಪಡಿಸಬೇಕು ? ಬರತಕ್ಕದ್ದನ್ನು ಸರಿಯಾಗಿ ಹಂಚುವುದು ಸರ್ಕಾರದ ಜವಾಬ್ದಾರಿ. ಆದ್ದರಿಂದ ಜನಗಳಿಗೆ ಸೀಮೆಎಣ್ಣೆಯನ್ನು ಹಂಚುವುದನ್ನು ಸರಿಮಾಡಬೇಕು. ಹಿಂದಿನ ಕಾಲದಲ್ಲಿ ಎಣ್ಣೆಬೀಜಗಳನ್ನು ಬೆಳೆದುಕೊಂಡು ಅದರಲ್ಲಿ ಎಣ್ಣೆಯನ್ನು ತೆಗೆಸಿ ಅದರಲ್ಲಿ ದೀಪವನ್ನು ಹಚ್ಚಿಕೊಂಡು ಮನೆಗಳಲ್ಲಿ ಸಂಸಾರವನ್ನು ನಡೆಸುತ್ತಿದ್ದರು. ಅಡಿಗೆ ಮಾಡುವುದಕ್ಕೆ ಸೌದೆಯನ್ನು ಉಪಯೋಗಿಸುತ್ತಿದ್ದರು. ಇವೊತ್ತು ಏನಾಗಿದೆ ಎಂದರೆ ಪಟ್ಟಣ ಹಾಗೂ ಹಳ್ಳಿಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ಸಹ ಅಡಿಗೆ ಮಾಡುವುದಕ್ಕೆ ಸೀಮೆಎಣ್ಣೆ ಸ್ಟೌವ್ ಉಪಯೋಗಿಸುತ್ತಿದ್ದಾರೆ. ಇದರಿಂದ ಹೆಚ್ಚು ಸೀಮೆಎಣ್ಣೆ ನಮಗೆ ಬೇಕಾಗಿದೆ. ಸೀಮೆಎಣ್ಣೆ ಮದ್ರಾಸಿನಿಂದ ಬರಬೇಕು. ಅವರು ಯಾವರೀತಿ ಸಪ್ಲೈ ಮಾಡುತ್ತಾರೆಯೋ ಆ ಪ್ರಕಾರ ನಾವು ಅದನ್ನು ಇಲ್ಲಿ ಜನಗಳಿಗೆ ಹಂಚಬೇಕು. ಇವೊತ್ತು ಬೆಂಗಳೂರಿನ ಜನಸಂಖ್ಯೆ ೨೦ ಲಕ್ಷ ಆಗಿದೆ. ಮೊದಲು ಎಲ್ಲೋ ಒಂದೆರಡು ಲಕ್ಷ ಪ್ರಜಾಸಂಖ್ಯೆ ಇತ್ತು ಈಗ ೨೦ ಲಕ್ಷಕ್ಕೂ ಮೀರಿ ಜನಗಳಿಗೆ ಸೀಮೆ ಎಣ್ಣೆಯನ್ನು ಹಂಚತಕ್ಕ ಕೆಲಸ ಬಹಳ ಕಷ್ಟಕರವಾದುದು. ಇದರ ಜೊತೆಗೆ ಬೆಂಗಳೂರು ನಗರಕ್ಕೆ ಗ್ರಾಮಾಂತರ ಪ್ರದೇಶಗಳಿಂದ ಪ್ರತಿನಿತ್ಯ ವಲಸೆ ಬರುತ್ತಿದ್ದಾರೆ, ಇವರೆಲ್ಲರಿಗೂ ಬೆಂಗಳೂರು ನಗರದಲ್ಲಿ ಸೌಲಭ್ಯವನ್ನು ಒದಗಿಸಬೇಕು. ಈ ದೃಷ್ಟಿಯಿಂದ ಜನಸಂಖ್ಯೆ ಜಾಸ್ತಿಯಾಗಿದೆ. ಸೀಮೆ ಎಣ್ಣೆ ಸಪ್ಲೈ ಕಡಿಮೆಯಾಗಿದೆ. ನಮ್ಮ ರಾಜ್ಯಕ್ಕೆ ಕೊಡತಕ್ಕ ಕೋಟಾವನ್ನೇ ಕಡಿಮೆ ಮಾಡಿದ್ದಾರೆ. ನಮ್ಮ ರಾಜ್ಯಕ್ಕೆ ಎಷ್ಟು ಕೋಟಾ ಬರುತ್ತದೆ. ಅದನ್ನು ಸರಿಯಾಗಿ ಹಂಚತಕ್ಕ ಜವಾಬ್ದಾರಿಯನ್ನು ಸರ್ಕಾರದವರು ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಸೀಮೆ ಎಣ್ಣೆ ಅಭಾವಕ್ಕೆ ನಾವು ಕಾರಣವಲ್ಲ.

ಆಹಾರ ಧಾನ್ಯದ ಬಗ್ಗೆ ಹೇಳುವುದಾದರೆ ಸರ್ಕಾರದವರು ಆದಷ್ಟು ಆಹಾರ ಧಾನ್ಯಗಳನ್ನು ಜನಗಳಿಗೆ ಕಡಿಮೆ ಬೆಲೆಯಲ್ಲಿ ಕೊಡಬೇಕೆಂಬುದು ಸರ್ಕಾರದ ಮುಖ್ಯ ನಿಲುವು. ಅದಕ್ಕಾಗಿ ಸರ್ಕಾರದ ಜೊತೆಯಲ್ಲಿ ನಾವೆಲ್ಲರೂ ಹಗಲಿರುಳು ದುಡಿಯುತ್ತಿದ್ದೇವೆ. ಮತ್ತು ಆದಷ್ಟು ಜನಗಳಿಗೆ ಕಡಿಮೆ ಬೆಲೆಯಲ್ಲಿ ಸರ್ಕಾರದವರು ಆಹಾರ ಧಾನ್ಯಗಳನ್ನು ಒದಗಿಸುತ್ತಿದ್ದಾರೆ ಸಾರ್ವಜನಿಕರ ದೃಷ್ಟಿಯಿಂದ ಎಷ್ಟು ಸಹಾಯ ಮತ್ತು ಅನುಕೂಲತೆಗಳನ್ನು ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ. ಮಾಂಸ, ಮೊಟ್ಟೆ ಹಾಲು ಇವುಗಳನ್ನು ಸಹ ಕಡಿಮೆ ಬೆಲೆಯಲ್ಲಿ ದೊರೆಯುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದಾರೆ. ಈ ರೀತಿಯಾಗಿ ಸರ್ಕಾರದವರು ಜನತೆಗೆ ಏನು ಅನುಕೂಲತೆಗಳು ಬೇಕೋ ಅದನ್ನು ಮಾಡುತ್ತಿದ್ದಾರೆ.

ಕೆಲವು ಮಾನ್ಯ ಸದಸ್ಯರು ಪ್ರಾಜೆಕ್ಟ್ ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ಹೇಳಬೇಕಾದರೆ ನಮ್ಮ ಸರ್ಕಾರದವರು ಕೆಲವು ಅಣೆಕಟ್ಟುಗಳ ಕೆಲಸವನ್ನು ಮುಗಿಸಿದ್ದಾರೆ. ಅವುಗಳಿಂದ ನೀರನ್ನು ಉಪಯೋಗಿಸಿ ವ್ಯವಸಾಯ ಮಾಡುವುದಕ್ಕೆ ಕೆನಾಲ್ ಆಗಬೇಕಾಗಿದೆ ಕೆನಾಲ್ ಮಾಡುವುದಕ್ಕೆ ನಮ್ಮಲ್ಲಿ ಹಣವಿಲ್ಲ. ಈಗ ನಮ್ಮ ರಾಜ್ಯದಲ್ಲಿ ೧೦ ಪ್ರಾಜೆಕ್ಟ್‌ಗಳ ಕೆಲಸವನ್ನು ಮಾಡುವುದಕ್ಕೆ ಸುಮಾರು ೬೦೦ ಕೋಟಿ ರೂಪಾಯಿಗಳು ಬೇಕು. ಇದರಿಂದ ಆ ಪ್ರಾಜೆಕ್ಟ್‌ಗಳ ಕೆಲಸವನ್ನು ಮುಗಿಸುವುದಕ್ಕೆ ಕಷ್ಟವಾಗಿದೆ. ಒಂದೊಂದು ಕಾರ್ಯಕ್ರಮನ್ನು ಮಾಡಿಕೊಂಡು ಮುಗಿಸಿಕೊಂಡು ಬಾದಿದ್ದರೆ ಇಷ್ಟು ಅಭಾವ ಬರುತ್ತಿರಲಿಲ್ಲ. ಈಗ ಸರ್ಕಾರದವರು ಸಾಧ್ಯವಾದಷ್ಟು ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಇದರಿಂದಾಗಿ ಪರಿಸ್ಥಿತಿ ಸ್ವಲ್ಪ ಸ್ವಲ್ಪವಾಗಿ ಸುಧಾರಿಸುತ್ತಾ ಬರುತ್ತದೆ.

ಇನ್ನೊಂದು ವಿಷಯ. ಲಾರಿಗಳಲ್ಲಿ ಅಕ್ಕಿಯನ್ನು ಕಳ್ಳಸಾಗಾಣಿಕೆ ಮಾಡುವಾಗ ಅವರಿಗೆ ಪೀನಲೈಜ್ ಮಾಡಬೇಕು. ಅಂತಹ ಲಾರಿಗಳನ್ನು ಕಾನ್‌ಫಿಸಿಕೇಟ್ ಮಾಡಬೇಕು ಎಂದು ಸಲಹೆ ಮಾಡುತ್ತೇನೆ, ಈ ಬಗ್ಗೆ ಯು.ಪಿ. ಯಲ್ಲಿ ಯಾವರೀತಿ ಕಾನೂನು ಅನುಸರಿಸುತ್ತಿದ್ದಾರೆಯೋ ಅದೇ

ನೀತಿಯನ್ನು ಇಲ್ಲಿಯೂ ಅನುಸರಿಸಿದರೆ ಆಹಾರ ಧಾನ್ಯಗಳ ಕಳ್ಳಸಾಗಾಣಿಕೆ ಬಹಳ ಕಡಿಮೆಯಾಗುತ್ತದೆ ಸೀಮೆ ಎಣ್ಣೆಯ ಅಭಾವವಾಗಲೀ ಅಥವಾ ಆಹಾರದ ಅಭಾವವಾಗಲೀ ಇದನ್ನು ಬಗೆಹರಿಸುವುದಕ್ಕೆ ಎಲ್ಲರೂ ಸರ್ಕಾರದೊಡನೆ ಸಹಕರಿಸಬೇಕು. ಇದನ್ನು ಯಾವರೀತಿ ಬಗೆಹರಿಸಬೇಕು ಎನ್ನುವ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ನಾವು ಈ ಬಗ್ಗೆ ಯಾವರೀತಿ ಮಾಡಬೇಕು ನನ್ನ ಜವಾಬ್ದಾರಿ ಏನಿದೆ ? ಎನ್ನುವುದನ್ನು ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ಸಾಧ್ಯವಾದ ಮಟ್ಟಿಗೆ ಬಡಜನಗಳಿಗೆ, ದೀನ ದಲಿತರಿಗೆ, ಹಿಂದುಳಿದವರಿಗೆ ಧನ ಸಹಾಯ ಮಾಡಬೇಕು. ಸಮಾಜವಾದವನ್ನು ಆಚರಣೆಗೆ ತರಬೇಕು ಈ ಸರ್ಕಾರ ಪಣ ತೊಟ್ಟಿದೆ ಎಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

"ಜೈಕರ್ನಾಟಕ"

† ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಮಾನ್ಯ ಸಭಾಧ್ಯಕ್ಷಿಣಿಯವರೇ ಈ ದಿವಸ ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಸೂಚನೆಯ ಬಗ್ಗೆ ಮಾತನಾಡುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಶ್ರೀಮಾನ್ ಶಾಮಣ್ಣನವರು ಅಗತ್ಯ ವಸ್ತುಗಳ ಅಭಾವ ಹಾಗೂ ಬೆಲೆ ಏರಿಕೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಈ ಸಭೆಯ ಮುಂದೆ ಮಂಡಿಸಿರತಕ್ಕ ಸೂಚನೆ ಏನಿದೆ ಇದು ಕಾಲಾನುಸಾರವಾಗಿದೆ ಮತ್ತು ಉಚಿತವಾಗಿದೆ. ಇದುವರೆಗೂ ಶ್ರೀಮಾನ್ ಶಾಮಣ್ಣನವರು ಹಾಗೂ ನನ್ನ ಇತರ ಮಿತ್ರರು ಈ ಸೂಚನೆಯ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ೧೯೭೦ನೇ ಇಸವಿಯಲ್ಲಿ ಬಡವರ ರಕ್ಷಣೆಗೋಸ್ಕರ ಬಂದಂತಹ ಈ ಬಡವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾಮಾನ್ಯ ಜನತೆ ದಿನ ನಿತ್ಯ ಉಪಯೋಗಿಸತಕ್ಕ ಅಕ್ಕಿ, ಗೋಧಿ, ರಾಗಿ, ಬಟ್ಟೆ ಸಾಬೂನು ಎಣ್ಣೆ ಇತ್ಯಾದಿ ಪದಾರ್ಥಗಳ ಬೆಲೆ ಏರಿಕೆ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ವೀಕ್ಷಣೆ ಮಾಡಿದರೆ ಬಡತನವನ್ನು ಹೋಗಲಾಡಿಸುತ್ತೇವೆ ಎನ್ನುವಂತಹ ಇವರ ತತ್ವ ಏನಿದೆ ಅದಕ್ಕೆ ತದ್ವಿರುದ್ಧವಾಗಿದೆ. ಬಡವರು ಈ ದೇಶದಲ್ಲಿ ಇಲ್ಲದೇ ಇರುವ ಹಾಗೆ ಅವರು ಜೀವಂತವಾಗಿ ಈ ದೇಶದಲ್ಲಿ ಇಲ್ಲದೇ ಇರುವ ಹಾಗೆ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಅಷ್ಟೇ ಅಲ್ಲ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಮಧ್ಯಮ ವರ್ಗದ ಜನಗಳು ಅತ್ಯಂತ ಬಡವರಾಗಿ ಅವರು ಜೀವನವನ್ನು ಸಾಗಿಸುವುದಕ್ಕೆ ದುರ್ಭರವಾಗಿರುವಂತಹ ಒಂದು ಘೋರ ಸನ್ನಿವೇಶದಲ್ಲಿ ಅವರನ್ನು ನಿಲ್ಲಿಸಿದ್ದಾರೆ ಈ ಸರ್ಕಾರ. ಒಂದೊಂದು ಪದಾರ್ಥಗಳ ಬೆಲೆಯೂ ಶೇಕಡಾ ೩೦೦ ರಷ್ಟು ಜಾಸ್ತಿಯಾಗಿದೆ, ಇದಕ್ಕೆ ಕಾರಣ ಬಹುಶಃ ಈ ಸರ್ಕಾರವೇ ಎಂದು ನಾನು ಹೇಳುತ್ತೇನೆ. ಪ್ರಕೃತಿಯ ವಿಕೋಪ, ಅತಿವೃಷ್ಟಿ ಅನಾವೃಷ್ಟಿ ಆಹಾರ ಪದಾರ್ಥಗಳ ಸಂಗ್ರಹಣೆ ಸರಿಯಾಗಿ ಆಗಿಲ್ಲ ಎಂದು ಸರ್ವೇ ಸಾಮಾನ್ಯವಾಗಿ ಸರ್ಕಾರ ಒಂದು ವಾದವನ್ನು ಮುಂದಿಟ್ಟಿದೆ.

Mr. Chairman (Sri M. Mallappa in the Chair)

ಆದರೆ ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಮ್ಮ ರಾಷ್ಟ್ರದ ದೌರ್ಭಾಗ್ಯವೋ ಏನೋ, ಈ ದೇಶದಲ್ಲಿ ಒಂದಲ್ಲ, ಒಂದು ಗಂಡಾಂತರ ಬರುತ್ತಿದೆ. ದೇವರ ಕೃಪಾದೃಷ್ಟಿ ನಮ್ಮ ಮೇಲೆ ಬೀಳಲಿಲ್ಲ. ಈ ಸರ್ಕಾರದ ನೀತಿ ಮತ್ತು ಧೋರಣೆಯನ್ನು ನೋಡಿದಾಗ, ಹೆಚ್ಚಾಗಿ ಇವರು ಕಾಳಸಂತೆಕೋರರಿಗೆ ಮತ್ತು ಲಾಭ ಬಡುಕರಿಗೆ ಆಶ್ರಯ ಕೊಟ್ಟಿದ್ದಾರೆ ಎಂದರೆ ತಪ್ಪಾಗಲಾರದು ಅನೇಕ ಆರ್ಥಿಕ ತಜ್ಞರು ಹೇಳಿದಂತೆ ಇಂದಿನ ಬೆಲೆಗಳ ಏರಿಕೆಗೆ ಹೆಚ್ಚಿನ ಹಣದ ವಹಿವಾಟೇ ಮೂಲ ಕಾರಣ. ಇಲ್ಲಿಯವರೆಗೆ ಎಷ್ಟು ಜನ ಕಾಳಸಂತೆಕೋರರನ್ನು ಮತ್ತು ಲಾಭಬಡುಕರನ್ನು ಹಿಡಿದು ತಂದು ಸಮಾಜದ ಮುಂದೆ ನಿಲ್ಲಿಸಿ ಶಿಕ್ಷೆ ವಿಧಿಸಿದ್ದಾರೆಂದು ನಾನು ತಮ್ಮ ಮೂಲಕ ಮಾನ್ಯ ಆಹಾರ ಮಂತ್ರಿಗಳನ್ನು ಕೇಳುತ್ತೇನೆ ? ಈ ಸರ್ಕಾರಕ್ಕೆ ಏನಾದರೂ ಎದೆಗುಂಡಿಗೆ ಇದ್ದರೆ ಅಧಿಕಾರಿಗಳ ಮತ್ತು ಪೋಲೀಸರ ಸಹಾಯ ತೆಗೆದುಕೊಂಡು ಬೆಂಗಳೂರು ನಗರದಲ್ಲಿರುವ ಪ್ರತಿಯೊಂದು ಅಂಗಡಿಗಳನ್ನು ಶೋಧನೆ ಮಾಡಲಿ ; ಆಗ ಕಾಳಸಂತೆಕೋರರ ಗೋಡೌನ್‌ಗಳಲ್ಲಿ ಎಷ್ಟು ಟನ್ ಸಿಮೆಂಟ್, ಉಕ್ಕು, ಸೀಮೆ ಎಣ್ಣೆ ಮತ್ತು ಇನ್ನಿತರ ಆಹಾರವಸ್ತುಗಳು ಇವೆ ಎಂಬುದನ್ನು ತೋರಿಸಿಕೊಡುತ್ತೇನೆ. ಆದರೆ ಈ ಸರ್ಕಾರ ಇಂದು ಅಪ್ರತ್ಯಕ್ಷವಾಗಿ ಸಮಾಜದ್ರೋಹಿಗಳಿಗೆ ನೆರವಾಗಿ ನಿಂತಿದ್ದಾರೆ ಮತ್ತು ಸಹಾಯ ಮಾಡುತ್ತಿದ್ದಾರೆ. ಒಂದು

(ಶ್ರೀ ಟಿ. ಎಂ. ಮಂಜುನಾಥ್)

ಕಡೆ ತಮ್ಮದು ಸಮಾಜವಾದೀ ಸರ್ಕಾರ ಎಂದು ಹೇಳಿಕೊಳ್ಳುತ್ತಾರೆ, ಮತ್ತೊಂದು ಕಡೆ ತಮ್ಮ ಕಡೆಯವರು, ತಮ್ಮ ಪಕ್ಷದವರು ಕೋಟ್ಯಾಧೀಶ್ವರರಾಗುವುದಕ್ಕೆ ಮತ್ತು ಶ್ರೀಮಂತರಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇನ್ನೊಂದು ಕಡೆಯಲ್ಲಿ ಬಡವರ ಶೋಷಣೆಮಾಡಿ ಸಮಾಜವನ್ನು ಕೊಂದಿದ್ದಾರೆ. ಇದೇ ಪರಿಸ್ಥಿತಿ ಮುಂದುವರೆದರೆ ಈ ಕರ್ನಾಟಕ ರಾಜ್ಯದಲ್ಲಿ ಜನರು ಕರಾಳ ದಿನವನ್ನು ಆಚರಣೆ ಮಾಡಬೇಕಾಗುತ್ತದೆ. ಮನುಷ್ಯ ಮನುಷ್ಯನನ್ನು ತಿನ್ನಬೇಕಾದ ಪರಿಸ್ಥಿತಿ ಬರುತ್ತದೆ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಕೆ. ಜಿ. ಅಕ್ಕಿಗೆ ಒಂದು ರೂಪಾಯಿ ೫೦ ಪೈಸೆ ಇತ್ತು; ಕೆ.ಜಿ. ಸಕ್ಕರೆಗೆ ೧ ರೂ. ೫೦ ಪೈಸೆ ಇತ್ತು. ಆದರೆ ಇಂದು ಒಂದು ಕೆ.ಜಿ. ಅಕ್ಕಿ ಬೆಲೆ ೩ ರೂಪಾಯಿ ಆಗಿದೆ, ಕೆ.ಜಿ. ಸಕ್ಕರೆ ಬೆಲೆ ೪ ರೂಪಾಯಿ ಆಗಿದೆ. ಈ ಸರ್ಕಾರ ಇರುವುದು ಬಡವರಿಗಾಗಿ, ಬಡವರನ್ನು ರಕ್ಷಣೆ ಮಾಡುತ್ತೇವೆಂದು ಅಧಿಕಾರಕ್ಕೆ ಬಂದ ಸಮಯದಲ್ಲಿ ಪ್ರತಿಜ್ಞೆ ಮಾಡಿದ್ದರು. ಆ ಒಂದು ಪ್ರತಿಜ್ಞೆಯಂತೆ ನಡೆದುಕೊಂಡಿದ್ದಾರೆಯೇ ಎಂಬುದನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಬೇಕು. ಹಳ್ಳಿಗಳಲ್ಲಿರತಕ್ಕ ಜನರ ಜೀವನವನ್ನು ನೋಡುವುದಾದರೆ ಅಲ್ಲಿರುವ ಮಕ್ಕಳ ಮೈ ಮೇಲೆ ಬಟ್ಟೆಯಿಲ್ಲ. ಹಳ್ಳಿಯ ಜನರು ಬಹಳ ನಿಶಕ್ತರಾಗಿದ್ದಾರೆ. ಯಾರು ಬೇಕಾದರೂ ಬಂದು ನೋಡಬಹುದು. ಹಳ್ಳಿಯ ಜನರು ಪಟ್ಟಣಕ್ಕೆ ಬರುವಾಗ ಸಾಲ ಸೋಲ ಮಾಡಿ ಒಳ್ಳೆಯ ಬಟ್ಟೆ ಹಾಕಿಕೊಂಡು ಬರಬಹುದು; ಆದರೆ ಹಳ್ಳಿಗಳಲ್ಲಿರುವಾಗ ಅವರ ಮೈಮೇಲೆ ಸರಿಯಾದ ಬಟ್ಟೆ ಇರುವುದಿಲ್ಲ. ಇದಕ್ಕೆ ಕಾರಣ ಇಂದು ಕಂಟ್ರೋಲ್ ಬಟ್ಟೆಗಳ ಮೇಲೆ ಸಹ ಹೆಚ್ಚು ತೆರಿಗೆ ಹಾಕಿದ್ದಾರೆ-ಜೊತೆಗೆ ಇತ್ನಿತರ ಬಟ್ಟೆಗಳ ಬೆಲೆಯನ್ನು ಸಹ ಹೆಚ್ಚು ಮಾಡುವುದಕ್ಕೆ ದೊಡ್ಡ ದೊಡ್ಡ ಬಟ್ಟೆ ಗಿರಣಿಗಳ ಮಾಲೀಕರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಯಾವಾಗಲೂ ಹುಬ್ಬಳ್ಳಿ, ಧಾರವಾಡ ಮತ್ತು ಗದುಗಕ್ಕೆ ಪ್ರವಾಸ ಹೋಗುತ್ತಿರುತ್ತಾರೆ. ತಮ್ಮ ಕ್ಷೇತ್ರದ ಜನರ ಕ್ಷೇಮವನ್ನು ಮಾತ್ರ ನೋಡಿಕೊಳ್ಳುವುದಕ್ಕೆ ಅವರು ಪ್ರವಾಸ ಹೋಗುತ್ತಿರುತ್ತಾರೆ. ಅದು ಸರಿಯಲ್ಲ ; ಇಡೀ ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ಜನರ ಕ್ಷೇಮವನ್ನು ನೋಡಿಕೊಳ್ಳುವುದು ಅವರ ಕರ್ತವ್ಯ. ಏಕೆಂದರೆ ಅವರು ಇಡೀ ರಾಜ್ಯದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಆದಕಾರಣ ಇಡೀ ರಾಜ್ಯದ ಬಡವರ ಮತ್ತು ದುರ್ಬಲ ವರ್ಗದವರ ಹಿತರಕ್ಷಣೆ ಮಾಡುವುದು ಅವರ ಕರ್ತವ್ಯವಾಗಿದೆ. ಈ ಸರ್ಕಾರದ ಒಂದು ನೀತಿಯಿಂದಾಗಿ ಮತ್ತು ಈ ಸರ್ಕಾರದವರು ಮಾಡುತ್ತಿರುವ ಇತಿಮಿತಿಯಿಲ್ಲದ ಭ್ರಷ್ಟಾಚಾರದಿಂದಾಗಿ, ಸರ್ಕಾರದ ಅಧಿಕಾರಿಗಳು ಸಹ ಭ್ರಷ್ಟಾಚಾರಕ್ಕೆ ಇಳಿದಿದ್ದಾರೆ. ೪ ಜನರು ಇರುವ ಒಂದು ಸಂಸಾರವನ್ನು ಸರ್ಕಾರದವರು ಕೊಡುವ ೧೫೦ ರೂಪಾಯಿಗಳ ಸಂಬಳದಲ್ಲಿ ಸಾಕುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕಾಗಿದೆ. ಇಂದು ಬೆಂಗಳೂರು ನಗರದಲ್ಲಿ ಮಾಸದ ಮನೆಗೆ ೧೫೦ ರೂಪಾಯಿ ಬಾಡಿಗೆ ಕೊಡಬೇಕಾಗಿದೆ. ಬಾಡಿಗೆಯೇ ಇಷ್ಟಾದರೆ, ಇನ್ನು ಹಾಲು, ಅಕ್ಕಿ ಮತ್ತು ಇನ್ನಿತರ ಆಹಾರ ವಸ್ತುಗಳಿಗೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಊಹಿಸಿಕೊಳ್ಳಬಹುದು. ಜನತೆಗೆ ಬೇಕಾಗಿರುವ ಆಹಾರ ಧಾನ್ಯಗಳನ್ನು ಮತ್ತು ದಿನಬಳಕೆ ವಸ್ತುಗಳನ್ನು ಸರಿಯಾದ ದರದಲ್ಲಿ ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ. ಇದು ಬಡವರ ಸರ್ಕಾರ, ಪ್ರಜಾಸರ್ಕಾರ ಎಂದು ಹೇಳುತ್ತಾರೆ. ಆದರೆ ಯಾವುದನ್ನೂ ಸಹ ಸರಿಯಾಗಿ ಜನರಿಗೆ ಒದಗಿಸುತ್ತಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಮಾನ್ಯ ನಾಯ್ಡುರವರು ಹೇಳಿದರು. ಆದರೆ ಅವರು ಹೇಳುವುದೊಂದು, ಮಾಡುವುದು ಇನ್ನೊಂದು. ನಮ್ಮ ದೇಶ ಇಷ್ಟೊಂದು ದುರ್ಬಲ ಪರಿಸ್ಥಿತಿಗೆ ಬಂದಿರುವ ಕಾರಣದಿಂದ ಜನತೆ ಕ್ರಾಂತಿ ಮಾಡಬಹುದು ; ಬಿಹಾರದ ಪರಿಸ್ಥಿತಿ ಇಲ್ಲಿಯೂ ಬರಬಹುದು; ಆ ಒಂದು ಪರಿಸ್ಥಿತಿ ಇಲ್ಲಿಯೂ ಬಂದರೆ ನಿಜವಾಗಿಯೂ ಈ ಸರ್ಕಾರ ಉಳಿಯುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಆಗ ನೀವು ಅಧಿಕಾರಕ್ಕೆ ಬರುತ್ತೀರಿ ;

ಶ್ರೀ ಟಿ. ಎಂ ಮಂಜುನಾಥ.—ಆ ಮಾತು ಬೇರೆ. ಈಗ ನಿಮ್ಮ ಅಧಿಕಾರದಿಂದ ಜನತೆಗೆ ಏನು ಉಪಕಾರವಾಗಿದೆ ಎಂಬುದನ್ನು ಹೇಳಬೇಕಾಗಿದೆ. ಇಂದಿನ ಮಹತ್ತರವಾದ ಪ್ರಶ್ನೆಯನ್ನು ಕುರಿತು ಎಲ್ಲ ರಾಜಕೀಯ ಪಕ್ಷಗಳವರು ಒಂದೆಡೆ ಸೇರಿ ಯೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಕೇಂದ್ರ ಸರ್ಕಾರದವರು ಕಬ್ಬಿಣ ಸಿಮೆಂಟ್ ಮತ್ತು ಸೀಮೆ ಎಣ್ಣೆಯ ದರವನ್ನು ಹೆಚ್ಚು ಮಾಡಿದರು. ಕಾರಿನ ಬೆಲೆ ಜಾಸ್ತಿ ಮಾಡಿದರು. ಮಾರುತಿ ಕಾರು ಪೇಟೆಗೆ ಬರುವ ಹೊತ್ತಿಗೆ ಅದರ ಬೆಲೆ ಇನ್ನೂ ಹತ್ತು ಸಾವಿರ ರೂಪಾಯಿಗಳು ಜಾಸ್ತಿಯಾಗಬಹುದೆಂದು ಕಾಣುತ್ತದೆ. ಇಂದು ಸಾಮಾನ್ಯ ಜನರು ಉಪಯೋಗ ಮಾಡುವ ಸಾಬೂನು, ಸೀಮೆ ಎಣ್ಣೆ, ಬಟ್ಟೆ ಸಿಗುತ್ತಿಲ್ಲ. ಜನತೆಗೆ ಏನು ಸೌಲಭ್ಯ ಕಲ್ಪಿಸಿ

ಕೊಟ್ಟಿದ್ದೀರಿ ಎಂದು ನಾನು ಕೇಳುತ್ತೇನೆ? ಇಂಥ ಪದಾರ್ಥಗಳನ್ನು ನಾವು ಯೋಗ್ಯ ಬೆಲೆಗೆ ಒದಗಿಸುತ್ತಿದ್ದೇವೆಂದು ಹೇಳುವ ಧೈರ್ಯವಾಗಲೀ, ಅರ್ಹತೆಯಾಗಲೀ ನಿಮಗೆ ಇದೆಯೇ ಎಂದು ಕೇಳುತ್ತೇನೆ. ಈ ಬಗ್ಗೆ ಏನಾದರೂ ಒಂದು ಕಾರ್ಯಕ್ರಮವನ್ನು ಸಹ ಹಾಕಿಕೊಳ್ಳದಿದ್ದರೆ, ನೀವು ಆ ಸ್ಥಾನದಲ್ಲಿ ಇದ್ದುಕೊಂಡು ಮಾಡುವುದಾದರೂ ಸಹ ಏನು ಎಂದು ಕೇಳಬೇಕಾಗಿದೆ. ನಾಳೆದಿವಸ ನಾವು ಸ್ವಾತಂತ್ರ್ಯದ ಹಬ್ಬವನ್ನು ನಾವೆಲ್ಲಾ ಆಚರಣೆ ಮಾಡಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಯಾವ ಒಂದು ಕಾರ್ಯಕ್ರಮವನ್ನು ಸಹ ಹಾಕಿಕೊಂಡಿಲ್ಲ. ಮನರಂಜನಾ ಕಾರ್ಯಕ್ರಮವನ್ನು ಇಟ್ಟುಕೊಂಡರೆ ಜನರು ದೊಂಬಿಯೇಳಬಹುದು; ಆದಕಾರಣ ಯಾವ ಕಾರ್ಯಕ್ರಮವನ್ನು ಸಹ ಇಟ್ಟುಕೊಳ್ಳಬೇಡಿ ಎಂದು ಸರ್ಕಾರದವರು ಅಧಿಕಾರಿಗಳಿಗೆ ಏನಾದರೂ ಮುನ್ಸೂಚನೆ ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ. ಇಂದು ಸಿಮೆಂಟಿನ ಬೆಲೆ ಚೀಲ ಒಂದಕ್ಕೆ ೪೦ ರೂಪಾಯಿ ಆಗಿದೆ. ಒಬ್ಬ ಬಡವ ಮನೆ ಕಟ್ಟಿಸುತ್ತೇನೆಂದರೆ ಒಂದು ಮೂಟೆ ಸಿಮೆಂಟ್ ಸಿಗುತ್ತಿಲ್ಲ; ಆದರೆ ಒಬ್ಬ ಲಕ್ಷಾಧೀಶ್ವರ ಮನೆ ಕಟ್ಟಿಸುತ್ತೇನೆಂದರೆ ಆತನ ಮನೆ ಬಾಗಿಲಿಗೆ ಟನ್‌ಗಟ್ಟಲೆ ಸಿಮೆಂಟ್ ಮತ್ತು ಕಬ್ಬಿಣ ಹೋಗಿ ಬೀಳುತ್ತದೆ. ಒಂದು ರೀತಿಯಲ್ಲಿ ಬಡವರನ್ನು ಶೋಷಣೆ ಮಾಡುತ್ತಿದ್ದಾರೆ. ಇದನ್ನೆಲ್ಲಾ ವಿಚಾರ ಮಾಡುವ ಸಂದರ್ಭ ಜನತೆಗೆ ಬಂದಿದೆ. ಒಂದು ರೂಪಾಯಿನ ಬೆಲೆ ಇಂದು ೨೦ ಅಥವಾ ೧೯ ಪೈಸೆಗೆ ಇಳಿದಿದೆ. ಇಂದು ಚಲಾವಣೆ ಮಾಡಿರುವ ಹಣವೆಷ್ಟು, ಚಲಾವಣೆಯಲ್ಲಿರುವ ಹಣವೆಷ್ಟು ಎಂದು ಕಂಡುಹಿಡಿಯುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇಂತಹ ಸರ್ಕಾರವನ್ನು ಪ್ರಜಾ ಸರ್ಕಾರ ಎಂದು ಹೇಳಿಕೊಳ್ಳುವುದಕ್ಕೆ ಅರ್ಹತೆ ಇದೆಯೇ ಎಂದು ನಾನು ಕೇಳುತ್ತೇನೆ? ಇಂದು ಆಹಾರ ಬೇಕಾದಷ್ಟು ಇದೆ. ಆದರೆ ಅದು ಬಂಡವಾಳಷಾಹಿಗಳ ಕೈಯಲ್ಲಿ ಕಾಳಸಂತೆಕೋರರ ಕೈಯಲ್ಲಿದೆ. ಬೆಂಗಳೂರು ನಗರದಲ್ಲಿರುವ ಅಂಗಡಿಗಳನ್ನು ತನಿಖೆ ಮಾಡಿಸುತ್ತೇನೆ, ಲೆಕ್ಕವಿಲ್ಲದೆ ಇಟ್ಟಿರುವ ಆಹಾರವನ್ನು ಮುಟ್ಟುಗೋಲು ಹಾಕಿಸುತ್ತೇನೆಂದು ಮಾನ್ಯ ಪಾಟೀಲ್ ಅವರು ಇಂದು ಛಾಲೆಂಜ್ ಮಾಡಿದ್ದೇ ಆದರೆ, ಸಾವಿರಾರು ಚೀಲಗಳಷ್ಟು ಅಕ್ಕಿ, ಸಿಮೆಂಟ್, ಕಬ್ಬಿಣ ಮುಂತಾದ ವಸ್ತುಗಳು ಸಿಗುತ್ತವೆ. ಇಂದು ಕಾರ್ಖಾನೆಯ ಬೆಲೆ ಕಬ್ಬಿಣಕ್ಕೆ ಒಂದು ಟನ್‌ಗೆ ೧,೭೦೦ ರೂಪಾಯಿಗಳಿದ್ದರೆ, ಬಜಾರ್‌ನ ಬೆಲೆ ಟನ್ ಒಂದಕ್ಕೆ ಮೂರುವರೆ ಸಾವಿರ ರೂಪಾಯಿಗಳಿವೆ. ಭೋಗ ಜೀವನ ಮಾಡಲು ಇಪ್ಪತ್ತೊಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇಂತಹ ವಸ್ತುಗಳನ್ನು ಏತಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕೇಳುತ್ತೇನೆ? ಆ ರೀತಿ ಕ್ರಮ ತೆಗೆದುಕೊಳ್ಳದಿದ್ದರೆ ಈ ಸರ್ಕಾರವನ್ನು ಪ್ರಜಾ ಸರ್ಕಾರ ಎಂದು ಕರೆಯುವುದಕ್ಕೆ ಸಾಧ್ಯವಿಲ್ಲ. ಇದೇ ಪರಿಸ್ಥಿತಿ ಮುಂದುವರೆಯುವುದಕ್ಕೆ ಬಿಟ್ಟರೆ ಈ ಸರ್ಕಾರವನ್ನು ಬಂಡವಾಳಷಾಹಿಗಳ ಪರ ಇರುವ ಸರ್ಕಾರ, ನೀತಿಗೆಟ್ಟ ಭ್ರಷ್ಟಾಚಾರಿಗಳ ಕೈಯಲ್ಲಿರುವ ಸರ್ಕಾರ ಎಂದು ಹೇಳಬೇಕಾಗುತ್ತದೆ.

ದೇಶದ ಪರಿಸ್ಥಿತಿ ಇಂಥಾ ಒಂದು ಸಂಕಟದಲ್ಲಿ ಇರಬೇಕಾದರೆ ಇದಕ್ಕೆ ಒಂದು ನ್ಯಾಯವಾದ ಮಾರ್ಗಗಳನ್ನು ಹಾಕಿಕೊಳ್ಳಬೇಕು. ಸರ್ಕಾರದವರು ಇದಕ್ಕೆ ಸರಿಯಾದ ಯೋಚನೆಯನ್ನು ಹಾಕಿಕೊಳ್ಳದೆ ಹೋದ ಪಕ್ಷದಲ್ಲಿ ಜನತೆ ನಿತ್ರಾಣವಾಗುತ್ತಾರೆ. ಈ ಹೊತ್ತಿನ ದಿವಸ ಪಟ್ಟಣಗಳಲ್ಲಿರತಕ್ಕಂಥ ಜನರಿಗೆ ತಾವು ಆಹಾರ ಪದಾರ್ಥಗಳನ್ನು ಹಂಚುತ್ತಿದ್ದೀರಿ, ಆದರೆ ಹಳ್ಳಿಗಳಲ್ಲಿರತಕ್ಕಂಥ ಜನರಿಗೆ, ಮಧ್ಯಮ ವರ್ಗದ ಜನರಿಗೆ, ತಾಲ್ಲೂಕುಮಟ್ಟದಲ್ಲಿರತಕ್ಕಂಥ ಕೂಲಿಗಾರರಿಗೆ ಎಷ್ಟು ಜನಕ್ಕೆ ಸರಿಯಾದ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ಹಂಚುವ ವ್ಯವಸ್ಥೆ ಮಾಡಿದ್ದೀರಿ. ದೇಶದಲ್ಲಿ ಸರಿಯಾದ ರೀತಿಯಲ್ಲಿ ಎಲ್ಲರಿಗೂ ಒಂದೇ ಸಮನಾದ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ಹಂಚಬೇಕಾದ್ದು ಅತಿ ಮುಖ್ಯ ಎಂದು ಕೇಂದ್ರ ಸರ್ಕಾರದವರು ಮೊದಲು ಒಂದು ನೀತಿ ಹೊರಡಿಸಿದರು. ಅದು ಏನೆಂದರೆ ನಾವೇ ಹೋಲ್ ಸೇಲ್ ಡೀಲ್ ವ್ಯಾಪಾರ ಮಾಡುತ್ತೇವೆ, ನಾವೇ ರೀಟೇಲ್ ವ್ಯಾಪಾರ ಮಾಡುತ್ತೇವೆ ಎನ್ನುವ ಒಂದು ಧೋರಣೆಯನ್ನು ಜನತೆಯ ಮುಂದೆ ಇಟ್ಟರು. ಅದರ ಪರಿಣಾಮ ಏನಾಯಿತು ಎಂದರೆ ಆವಾಗ ಬೆಲೆಗಳು ಏನು ಇತ್ತು ಅದರ ೨-೩ರಷ್ಟು ಏರಿತು. ಇದಕ್ಕೆ ಕಾರಣ ಏನು? ಇದಕ್ಕೆ ಅವರು ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ ಏತಕ್ಕೆಂದರೆ ಅದರಲ್ಲಿ ಸರಿಯಾದಂಥ ಸಿಬ್ಬಂದಿ ಇಲ್ಲ ಮತ್ತು ಪ್ರಾಮಾಣಿಕರಾದಂಥ ಅಧಿಕಾರಿಗಳು ಇಲ್ಲ. ಇಂಥಾ ಒಂದು ಅವ್ಯವಸ್ಥೆ ಇರುವ ಈ ರಾಷ್ಟ್ರದಲ್ಲಿ ಪರಿಸ್ಥಿತಿ ಹೀಗೆ ಮುಂಟ್ಟಿರುವುದರಿಂದ ಸರ್ಕಾರದಲ್ಲಿ ಜನತೆಯ ನಂಬಿಕೆ ಹೋಗುತ್ತಾ ಇದೆ. ಆದುದರಿಂದ ನಾನು ಹೇಳುವುದು ಸರ್ಕಾರದವರು ಈ ಬಗ್ಗೆ ಒಂದು ದಿಟ್ಟ ಹೆಜ್ಜೆಯನ್ನು ಇಡಬೇಕು ಎಂದು. ಜನತೆಗೆ ನೀವು ಕೊಟ್ಟಂಥ ಆಶ್ವಾಸನೆ ಏನು? ಗರೀಬಿ ಹಟಾವೋ ಎನ್ನುವುದನ್ನು ಜನತೆಯ ಮುಂದೆ ಇಟ್ಟಿರುವಾಗ ಜನಗಳಿಗೆ ಬೇಕಾದಂಥ ಅನ್ನ ಬಟ್ಟೆ ಮತ್ತು ವಸತಿಗೆ ಒಂದು ಯೋಗ್ಯವಾದ ಮನೆಯನ್ನು ಕೊಡಬೇಡವೇ? ಮನೆಯನ್ನು ಕೊಡುವುದಕ್ಕಂತೂ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಆದರೆ ಸಾಮಾನ್ಯ ಜನಗಳಿಗೆ ಬೇಕಾದ ಎರಡು ಹೊತ್ತು ಊಟಕ್ಕೆ ಅನ್ನವನ್ನಾದರೂ ಕೊಡದೇ ಹೋದರೆ ಈ ಸರ್ಕಾರ ಕೊಟ್ಟ ಆಶ್ವಾಸನೆ ಏನಾಯಿತು? ಇನ್ನೊಂದು ಮಾತು ಹೇಳುತ್ತಾರೆ ನಾವು ಅಂತರರಾಷ್ಟ್ರೀಯ ನಿರ್ಬಂಧವನ್ನು ಹಾಕಿರುವುದರಿಂದ ಬೆಲೆಗಳನ್ನು ಒಂದು ಹಿಡಿತದಲ್ಲಿಟ್ಟದ್ದೇವೆ ಎಂದು. ಈ ಮಾತನ್ನು ಮಾನ್ಯ ಮಂತ್ರಿಗಳೂ ಹೇಳುತ್ತಾರೆ

(ಶ್ರೀ ಟಿ. ಎಂ. ಮಂಜುನಾಥ್)

ಮತ್ತು ಮುಖ್ಯಮಂತ್ರಿಗಳೂ ಹೇಳುತ್ತಾರೆ. ನಾನು ಕೇಳುತ್ತೇನೆ, ಎಲ್ಲರೂ ಒಂದೇ ಸಮನಾಗಿ ಬಾಳಬೇಕಾದರೆ ಒಂದು ಭಾಗದ ಜನ ಸ್ವಲ್ಪ ಬೆಲೆ ಕೊಟ್ಟುಕೊಳ್ಳುವುದು, ಇನ್ನೊಂದು ಭಾಗದ ಜನ ಒಂದಕ್ಕೆ ಎರಡರಷ್ಟು ಬೆಲೆ ಕೊಟ್ಟು ಕೊಂಡುಕೊಳ್ಳುವುದು ಆದರೆ ಇದೇನು ಸಮಾಜವಾದದ ನೀತಿ ಎಂದು ಕರೆಯೋಣವೇ, ಇದು ಯಾವ ತತ್ವ ಎಂದು ಹೇಳೋಣವೇ ಹೇಳಿ. ಕರ್ನಾಟಕದ ಜನತೆ ಎಲ್ಲರೂ ಒಂದೇ ಸಮನಾಗಿ ಬಾಳಬೇಕಾದರೆ ಇದಕ್ಕೆ ಒಂದು ಸರಿಯಾದಂಥ ಯೋಜನೆ ಹಾಕಿಕೊಳ್ಳಬೇಕು. ಶ್ರೀಮಂತ ವರ್ಗದವರಿಗೆ ಬಡವರ ಕಷ್ಟ ಗೊತ್ತಿಲ್ಲ. ಮಧ್ಯಮ ವರ್ಗದವರು ತತ್ತರಿಸಿ ಹೋಗಿದ್ದಾರೆ. ಈಗ್ಗೆ ಸ್ವಲ್ಪ ದಿವಸದ ಹಿಂದೆ ಕೇಂದ್ರ ಸರ್ಕಾರದವರು ಒಂದು ಸುಗ್ರೀವಾಜ್ಞೆ ಹೊರಡಿಸಿದರು. ಅದು ಏನೆಂದರೆ ನೌಕರರ ಸಂಬಳದಲ್ಲಿ ಇಂತಿಷ್ಟು ಭಾಗವನ್ನು ಸೇವಿಂಗ್ಸ್‌ಗೆ ಕೊಡಬೇಕು ಎಂದು ಮತ್ತು ಬ್ಯಾಂಕುಗಳವರ ಮೇಲೂ ಒಂದು ನಿರ್ಭಂಧವನ್ನು ಹೊರಡಿಸಿದರು. ಈ ನಿರ್ಭಂಧದಿಂದ ಯಾವ ಬೆಲೆಗಳು ಕಡಿಮೆಯಾಯಿತು ಎಂದು ನಾನು ಕೇಳುತ್ತೇನೆ. ಯಾವ ಪದಾರ್ಥಗಳ ಬೆಲೆಯೂ ಕಡಿಮೆಯಾಗಲಿಲ್ಲ. ಮತ್ತಷ್ಟು ದಾರಣೆಗಳು ಏರಿತು. ಎಷ್ಟು ಜನರನ್ನು ಹಿಡಿದು ಮುಟ್ಟುಗೋಲು ಹಾಕಿದ್ದೀರಿ ? ಈ ಹಣ ಎಲ್ಲಿಗೆ ಹೋಯಿತು? ಯಾರು ದೇಶದಲ್ಲಿ ಬಂಡವಾಳ ಶಾಹಿಗಳು ಇದ್ದರೋ ಯಾರು ಸಮಾಜಘಾತುಕರು ಇದ್ದಾರೋ ಅವರಿಗೆ ಈ ಹಣ ಹೋಗಿದೆ. ಈ ಸುಗ್ರೀವಾಜ್ಞೆಯಿಂದ ಸರ್ವತೋಮುಖವಾದ ಬೆಳವಣಿಗೆ ಆಗಲಿಲ್ಲ. ಆದುದರಿಂದ ಇವೆಲ್ಲಾ ಆಡಂಬರದ ಸುಗ್ರೀವಾಜ್ಞೆಗಳು ಎಂದು ಹೇಳಬೇಕಾಗಿದೆ. ಇವು ಜನಗಳಿಗೆ ನೆಮ್ಮದಿಯಾಗುವಂಥ ಸುಗ್ರೀವಾಜ್ಞೆಗಳಲ್ಲ, ಜನಗಳಿಗೆ ಹಿತವಾಗತಕ್ಕಂಥ ಸುಗ್ರೀವಾಜ್ಞೆಗಳಲ್ಲ ಎಂದು ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆದುದರಿಂದ ನಾನು ಒಂದು ಮಾತು ಹೇಳುತ್ತೇನೆ ಸರ್ಕಾರಕ್ಕೆ ಈಗಲಾದರೂ ಕೂಡ ಶಕ್ತಿ ಇದ್ದರೆ, ಯೋಗ್ಯತೆ ಇದ್ದರೆ ಅವರು ಪ್ರಾಮಾಣಿಕರಾಗಿದ್ದಾರೆ ಈವೊತ್ತಿನ ದಿವಸ ಈ ಈ ಬಗ್ಗೆ ಒಂದು ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಈಗ ಏರಿರತಕ್ಕಂಥ ಬೆಲೆಗಳನ್ನು ಇಳಿಸು ವುದಕ್ಕೆ ಪ್ರಯತ್ನ ಮಾಡಿದರೆ ಆವಾಗ ಎಲ್ಲರಿಗೂ ಸರ್ವತೋಮುಖವಾದ ಬೆಳವಣಿಗೆ ಆದೀತು. ಇಲ್ಲದೆ ಹೋದರೆ ದೇಶದ ಪರಿಸ್ಥಿತಿ ಉತ್ತಮವಾಗುವುದಿಲ್ಲ. ಆ ಬಡಜನಗಳಿಗೆ ಕೇಳುವುದಕ್ಕೆ ಈವೊತ್ತಿನ ದಿವಸ ಶಕ್ತಿ ಇಲ್ಲ. ಈವೊತ್ತಿನ ದಿವಸ ಬಂಡವಾಳಶಾಹಿಗಳ ಕೈಗೊಂಬೆಗಿಯಾಗಿದ್ದೀರಿ ಅವರನ್ನು ಮಾತನಾಡಿಸುವುದಿಲ್ಲ. ಆ ಬಂಡವಾಳಶಾಹಿಗಳು ಹೇಳುವಂತ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ಆದುದರಿಂದ ಇದು ಎಂತಹ ಯೋಜನೆ ಎಂದು ನಾನು ಕೇಳಬೇಕಾಗಿದೆ. ನೀವು ಎಲ್ಲಿಯವರೆಗೆ ಹಸಿದ ಹೊಟ್ಟೆ ಇರುವವನಿಗೆ ಎರಡು ಹೊತ್ತು ಊಟ ಹಾಕುವುದಿಲ್ಲವೋ ಅಲ್ಲಿಯವರೆಗೂ ಕೂಡ ನಿಮ್ಮ ನಿಮ್ಮ ಸರ್ಕಾರವನ್ನು ಸಾಮಾನ್ಯ ಜನರ ಸರ್ಕಾರ ಎಂದು ಕರೆಯುವುದಕ್ಕಾಗುವುದಿಲ್ಲ, ಪಟ್ಟಣದಲ್ಲಿ ವಾಸವಾಗಿರುವ ಬಂಡವಾಳಶಾಹಿಗಳವರು ತಯಾರುಮಾಡಿಕೊಟ್ಟಂಥ ಯೋಜನೆಗಳಿಂದ ಬಡವರ ಹಿತ ಸಾಧನೆ ಮಾಡುವುದಕ್ಕಾಗುವುದಿಲ್ಲ. ಈ ಸರ್ಕಾರ ಚುನಾವಣಾ ಸಮಯದಲ್ಲಿ ಜನತೆಗೆ ಏನು ಆಶ್ವಾಸನೆ ಕೊಟ್ಟಿತ್ತೋ ಆ ಆಶ್ವಾಸನೆಯನ್ನು ಈಡೇರಿಸದೇ ಹೋದ ಪಕ್ಷದಲ್ಲಿ ಈ ಸರ್ಕಾರ ಕೂಡಲೇ ರಾಜೀನಾಮೆ ಕೊಡಬೇಕು ಎಂದು ಹೇಳುತ್ತೇನೆ. ಹಾಗಾದರೆ ಜನಗಳಿಗೆ ನಿಮ್ಮ ಮೇಲೆ ಒಂದು ನಂಬಿಕೆ ಬರುತ್ತದೆ ಈವೊತ್ತಿನ ದಿವಸ ಬಡ ಜನರು ತತ್ತರಿಸಿ ಹೋಗುತ್ತಿದ್ದಾರೆ. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಮಂತ್ರಿಗಳು ಯಾವುದೋ ಒಂದು ತಾಲ್ಲೂಕಿಗೆ ಟೂರ್ ಪ್ರೋಗ್ರಾಂ ಹಾಕಿಕೊಂಡರು. ಯಾವ ಕಾರಣಕ್ಕೆ ಎಂದರೆ ಆ ತಾಲ್ಲೂಕಿನ ಒಬ್ಬ (ಆರ್) ಕಾಂಗ್ರೆಸ್ ಸೆಕ್ರೆಟರಿಗೆ ಜಮೀನು ಕೊಡಬೇಕು ಎಂದು. ಈ ಟೂರ್‌ಗೆ ಸರ್ಕಾರದ ಹಣ ವೆಚ್ಚವಾಯಿತು ಪ್ರಯೋಜನ ಏನೂ ಆಗಲಿಲ್ಲ. ಹೇಗೆಂದರೆ ಅವರ ಟೂರ್ ಪ್ರೋಗ್ರಾಂ ಅನ್ನು ಆ ತಾಲ್ಲೂಕಿನ ಬೋರ್ಡ್ ಅಧ್ಯಕ್ಷರಿಗೆ ಮುಂತಾದವರಿಗೆ ಏನು ಕಳುಹಿಸಿಕೊಟ್ಟರು; ಅದರಂತೆ ಅವರುಗಳು ಟಿ. ಬಿ. ಯಲ್ಲಿ ಮಂತ್ರಿಗಳು ಬರುತ್ತಾರೆ ಎಂದು ಕಾದು ನಿಂತಿದ್ದರು. ಆದರೆ ಇವರು ಮಾಡಿದ್ದು ಏನೆಂದರೆ ಆ ಮಂತ್ರಿಗಳು ನೇರವಾಗಿ ಆ (ಆರ್) ಕಾಂಗ್ರೆಸ್ಸಿನ ಸೆಕ್ರೆಟರಿಯವರ ಜಮೀನಿಗೆ ಹೋದ ಅದನ್ನು ನೋಡಿಬಿಟ್ಟು ಆ ಜಮೀನನ್ನು ಅವನಿಗೆ ಕೊಡಿರಿ ಎಂದು ಹೇಳಿಬಿಟ್ಟು ಹೊರಟುಹೋದರು. ಅವರು ಟಿ. ಬಿ ಗೆ ಬರಲೇ ಇಲ್ಲ ಅದಕ್ಕೆ ನಾನು ಕೇಳುವುದು ಇದು ಯಾರು ಹಣ ಅಪವ್ಯಯವಾಯಿತು. ಬಡಬೋರೇಗೌಡನ ಹಣವನ್ನು ಈ ರೀತಿಯಾಗಿ ಉಪಯೋಗಿಸುವುದು ಸೂಕ್ತವೇ ? ಇನ್ನು ಅವರು ನಡೆತಕ್ಕಂಥ ಸುಖಜೀವನ ಏನು ಇದೆ ಅದನ್ನು ಕಡಿಮೆ ಮಾಡಿ ಎಂದು ಹೇಳುತ್ತೇನೆ. ನಾನು ಶ್ರೀಮಾನ್ ಕೆ. ಹೆಚ್. ಪಾಟೀಲರ ಮೇಲೆ ವೈಯುಕ್ತಿಕವಾಗಿ ಹೇಳುತ್ತಾ ಇಲ್ಲ. ಈವೊತ್ತಿನ ದಿವಸ ಆಡಳಿತ ಕಾಂಗ್ರೆಸ್ಸಿನಲ್ಲಿರತಕ್ಕಂಥವರು ಯಾರ್ಯಾರು ಇದ್ದಾರೆ ಅವರು ಮೊದಲು ಶಾಸನಾ ಸಭಾ ಸದಸ್ಯರಾಗುವ ಮೊದಲು ಅವರಲ್ಲಿ ಏನು ಹಣ ಇತ್ತು ? ಈವೊತ್ತು ಎಷ್ಟು ಹಣ ಸಂಪಾದನೆ ಮಾಡಿದ್ದಾರೆ. ಕೇವಲ ಬಡವರ ಹೆಸರನ್ನು ಹೇಳಿಕೊಂಡು ಬಡತನವನ್ನು ನಿರ್ಮೂಲ ಮಾಡುತ್ತೇವೆ ಎಂದು ಹೇಳಿ ಕೆಲವರು

ಶ್ರೀಮಂತರಾಗಿರುವವರು ಆಡಳಿತ ಕಾಂಗ್ರೆಸ್ಸಿನಲ್ಲಿ ಇದ್ದಾರೆ. ಅಂಥಾ ಪಟ್ಟಪಭದ್ರ ಹಿತಾ ಸಕ್ತಿಗಳು ಆಡಳಿತ ಕಾಂಗ್ರೆಸ್ಸಿನಲ್ಲಿ ಸೇರಿಕೊಂಡಿರುವಾಗ ಆಹಾರ ಸಮಸ್ಯೆ ಹೇಗೆ ಬಗ್ಗೆ ಹರಿದೀತು ? ಅವರಿಗೆ ಏನಾದರೂ ಬಡವರ ಮೇಲೆ ಅನುಕಂಪ ಇದೆಯೋ, ಅವರ ಬಗ್ಗೆ ಸರಿಯಾದಂಥ ಕಾರ್ಯಕ್ರಮವನ್ನು ಏನಾದರೂ ಹಾಕಿಕೊಂಡಿದ್ದಾರೆಯೇ ? ಅವರಿಗೆ ಏನಾದರೂ ರಕ್ಷಣೆ ಕೊಡುತ್ತಿದ್ದಾರೆಯೇ ? ಕೇವಲ ಬೂಟಾಟಿಕೆ ಮಾತನಾಡಿಕೊಂಡು ಕಾನೂನು ಕಟ್ಟಳೆಗಳನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇನ್ನು ಮುಂದಾದರೂ ಕೂಡ ಈ ಬಡವರ ಬಗ್ಗೆ ಒಂದು ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಿ, ಶ್ರೀಮಂತರ ಕೈಗೊಂಬೆಯಾಗಬೇಡಿ. ಗುಡಿಸಲುಗಳಲ್ಲಿ ವಾಸ ಮಾಡತಕ್ಕಂಥ ರೈತನ ಮನೆಗೆ ಸರಿಯಾದ ರಿತೀಯಲ್ಲಿ ಆಹಾರ ಧಾನ್ಯವನ್ನು ಒದಗಿಸಿಕೊಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಿ. ಹಾಗಾದರೆ ಅವನು ನಿಮ್ಮನ್ನು ಪ್ರಶಂಸೆ ಮಾಡುತ್ತಾನೆ ಮತ್ತು ಸರ್ಕಾರವನ್ನು ಕೂಡ ಪ್ರಶಂಸೆ ಮಾಡುತ್ತಾನೆ. ಅದು ಬಿಟ್ಟು ಬರೇ ಡೊಂಗಾ ಮಾತನ್ನು ಆಡತಕ್ಕಂಥಾ ಸರ್ಕಾರಕ್ಕೆ ನಾವು ಏನು ಹೇಳಬೇಕೋ ಗೊತ್ತಿಲ್ಲ. ಕರ್ನಾಟಕದಲ್ಲಿ ಬರಗಾಲ ಮುಂದೆ ಬಹಳ ಭೀಕರವಾಗಿ ಬರುತ್ತದೆ. ಹೇಗೆಂದರೆ ಮುಂದಿನ ವರ್ಷ ದೇಶದಲ್ಲಿ ಆಹಾರದ ಉತ್ಪಾದನೆ ಬಹಳ ಕಡಿಮೆಯಾಗುತ್ತಾ ಇದೆ. ಇದಕ್ಕೆ ಕಾರಣವಾದರೂ ಇಷ್ಟೆ ಈ ಹಿಂದೆ ಶ್ರೀಮಾನ್ ಕೆ. ಆರ್. ಎಸ್. ನಾಯಿಡುರವರು ಹೇಳಿದರು ಗೊಬ್ಬರದ ಧಾರಣೆ ಹಾಗೆ ಇದೆ, ಹೀಗೆ ಇದೆ ಎಂದು. ರೈತ ಏನಾದರೂ ಲೆವಿ ಕೊಡದೇ ಹೋದರೆ ಅವನನ್ನು ಹಿಂಸೆ ಮಾಡಿ ಕಿತ್ತುಕೊಳ್ಳುವ ಅಧಿಕಾರ ನಿಮಗೆ ಇದೆ. ಆದರೆ ಅವನಿಗೆ ಬೇಕಾದಂಥ ಗೊಬ್ಬರವನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ ರೈತ ದೇಶದ ಬೆನ್ನೆಲುಬು ಎಂದು ಹೇಳುತ್ತೀರೇ ವಿನಾ ಅವನಿಗೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಆಗಿಲ್ಲ, ಅವನನ್ನು ಮತ್ತೂ ತುಳಿಯುತಕ್ಕಂಥ ಯೋಜನೆ ಮಾಡುತ್ತಿದ್ದೀರಿ. ದೇಶಕ್ಕೆ ಅನ್ನ ಕೊಡತಕ್ಕಂಥ ರೈತನನ್ನು ಮತ್ತೂ ಶೋಷಣೆ ಮಾಡುತ್ತೀದ್ದೀರಿ. ನ್ಯಾಯವಾಗಿ ಅವರಿಗೆ ರಕ್ಷಣೆ ಕೊಡಬೇಕು, ಅವನಿಗೆ ಬೇಕಾದಂಥ ಸವಲತ್ತುಗಳನ್ನು ಕೊಡಬೇಕು, ಅವನಿಗೆ ವ್ಯವಸಾಯಕ್ಕೆ ಬೇಕಾದಂಥ ಉಪಕರಣಗಳನ್ನು ಕಡಿಮೆ ದರದಲ್ಲಿ ಕೊಡಬೇಕು, ಅವನು ಇದನ್ನೆಲ್ಲಾ ಹೆಚ್ಚು ಧಾರಣೆ ಕೊಟ್ಟು ಕೊಂಡು ಕೊಳ್ಳಲಿಕ್ಕೆ ಶಕ್ತಿ ಇಲ್ಲ, ಹೆಚ್ಚು ಧಾರಣೆ ಕೊಟ್ಟು ಗೊಬ್ಬರವನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲ, ಅವನು ಬಹಳ ದುರ್ಬಲನಾಗಿದ್ದಾನೆ. ಆದುದರಿಂದ ನಿಮ್ಮ ಆಹಾರದ ನೀತಿಯನ್ನು ಸರಿಯಾಗಿ ಹಾಕಿಕೊಳ್ಳಬೇಕು. ನೀವು ಮುಂದಿನ ವರ್ಷ ಈ ಆಹಾರೋತ್ಪಾದನೆ ಬಗ್ಗೆ ಏನು ಒಂದು ಅಂಕಿ ಅಂಶ ಹಾಕಿಕೊಂಡಿದ್ದೀರೋ ಆ ಅಂಕಿ ಅಂಶ ಕಡಿಮೆ ಬರುತ್ತದೆ, ದೇಶದಲ್ಲಿ ಆಹಾರ ಅಭಾವ ಬರುತ್ತದೆ. ಅದುದರಿಂದ ತಾವು ಈಗಲೇ ಆ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಆಲೋಚನೆ ಮಾಡಬೇಕು. ಮುಂದಿನ ವರ್ಷ ನಮಗೆ ಆಹಾರಧಾನ್ಯ ಎಷ್ಟು ಕೊರತೆ ಬರುತ್ತದೆ ಅದನ್ನು ಯೋಚನೆ ಮಾಡಲಿ ಎಂದು ನಾನು ಈಗ ಹೇಳಿದ್ದೇನೆ. ಮುಂದೆ ಆಹಾರಪದಾರ್ಥಗಳನ್ನು ಸಂಗ್ರಹ ಮಾಡುವುದಕ್ಕಾಗಲಿ ಅಥವಾ ಯಾವುದಕ್ಕಾದರೂ ಮುಂಜಾಗ್ರತೆ ವಹಿಸುವುದಕ್ಕಾಗಲಿ ಈ ಬಗ್ಗೆ ಗಹನವಾಗಿ ವಿಚಾರಮಾಡಲಿ ಎಂದು ಹೇಳಿದ್ದೇನೆ ಕೇವಲ ಇದನ್ನು ನಿಮ್ಮ ಮಂತ್ರಿಮಂಡಲದಲ್ಲಿಯಾಗಲಿ ಅಥವಾ ನಿಮ್ಮ ಅಧಿಕಾರ ವರ್ಗದಲ್ಲಿಯಾಗಲಿ ಒಂದು ಸಮೀಕ್ಷೆಯನ್ನು ನಡೆಸುವುದಕ್ಕೆ ಹೋಗಬೇಡಿ. ಎಲ್ಲಾ ರಾಜಕೀಯ ಪಕ್ಷಗಳನ್ನೂ ಗಣನೆಗೆ ತೆಗೆದುಕೊಂಡು ಅವರೊಡನೆ ವ್ಯವಹರಿಸಿ. ದೇಶದಲ್ಲಿರುವ ಆಹಾರದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಿಮ್ಮಲ್ಲಿ ಒಂದು ಶಕ್ತಿ ಉಂಟಾಗಲಿ ಇಲ್ಲದೇ ಹೋದರೆ ಮುಂದಿನ ವರ್ಷ ದೇಶದಲ್ಲಿ ಆಹಾರದ ಅಭಾವ ಉಂಟಾಗುತ್ತದೆಎಂದು ಹೇಳುತ್ತೇನೆ. ಏನು ಕರ್ನಾಟಕ ಜನ ನಿಮ್ಮನ್ನು ನಂಬಿ ನಂಬಿ ಬಹು ಸಂಖ್ಯಾತರನ್ನಾಗಿ ಆರಿಸಿ ಕಳುಹಿಸಿದ್ದಾರೆ, ಅವರು ನಿಮ್ಮನ್ನು ಪ್ರತ್ಯಕ್ಷ ದೇವರು ಎಂದು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರನ್ನು ಸಹ ಪ್ರತ್ಯಕ್ಷ ದೇವತೆಯೇ ಎಂದು ನಂಬಿಕೊಂಡಿದ್ದಾರೆ. ಕರ್ನಾಟಕ ಜನತೆಯನ್ನು ರಕ್ಷಿಸಬೇಕೇ ಹೊರತು ಭಕ್ಷಿಸಬೇಡಿ ಎಂದು ತಮ್ಮನ್ನು ಬಹಳ ವಿನಿಮಯದಿಂದ ಕೇಳಿಕೊಳ್ಳುತ್ತೇನೆ. ಈ ಆಹಾರ ಇಲಾಖೆಯನ್ನು ವಹಿಸಿರತಕ್ಕಂಥ ಶ್ರೀಮಾನ್ ಕೆ. ಎಚ್. ಪಾಟೀಲರು ಮಾತ್ರ ರೈತ ಮನೆತನದವರಾದ್ದರಿಂದ ನಮ್ಮ ಕರ್ನಾಟಕದ ಜನತೆಯನ್ನು ಖಂಡಿತವಾಗಿ ರಕ್ಷಿಸುತ್ತಾರೆಂದು ಹೇಳುತ್ತೇನೆ. ಜೊತೆಗೆ ಈ ಇಲಾಖೆಯನ್ನು ಬಹಳ ದಕ್ಷತೆಯಿಂದ ನಡೆಸುತ್ತಾರೆ ಎಂಬ ನಂಬಿಕೆ ನಮಗೆ ಇದೆ. ಇನ್ನು ಹೆಚ್ಚಿನ ದಕ್ಷತೆಯಿಂದ ಕೆಲಸಮಾಡಲಿ ಶಾಶ್ವತವಾಗಿ ಈ ಮಂತ್ರಿಪದವಿ ಇರಲಿ ಆಹಾರ ಮಂತ್ರಿ ಪದವಿ ಯಶಸ್ವಿಯಾಗಿ ನಿರ್ವಹಿಸಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಲಿ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಮ್ಮ ಜಿಲ್ಲೆಗೆ ಆಹಾರ ವಿತರಣೆ ಮಾಡಿಯೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

11-00 A.M.

† ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಬಹಳ ಗಹನವಾದ ವಿಚಾರದ ಬಗ್ಗೆ ಚರ್ಚೆ ನಡೆಯುವಾಗ ಮಾನ್ಯ ವಿರೋಧ ಪಕ್ಷದ ಸದಸ್ಯರು ಅನೇಕರು ಸರ್ಕಾರ

(ಶ್ರೀ ಕೆ. ಎಂ. ರುದ್ರಪ್ಪ)

ಆಹಾರ ಸಮಸ್ಯೆಯನ್ನು ಬಗೆಹರಿಸುವಲ್ಲಿ ಯಾವರೀತಿಯಾದ ಕಾರ್ಯಕ್ರಮ ತೆಗೆದುಕೊಳ್ಳದೆ ಪೂರ್ಣವಾಗಿ ವಿಫಲವಾಗಿದೆಯೆಂದು ಹೇಳುತ್ತಾ ಬಂದರು. ಈ ಆಹಾರ ಸಮಸ್ಯೆ ನಮ್ಮ ರಾಜ್ಯಕ್ಕೆ ಅಥವಾ ನಮ್ಮ ದೇಶಕ್ಕೆ ಸೀಮಿತವಾದುದಲ್ಲ. ಅನೇಕ ರಾಜ್ಯಗಳಲ್ಲಿ ಮತ್ತು ಅನೇಕ ದೇಶಗಳಲ್ಲಿ ಕೂಡ ಇಂಥ ಸಮಸ್ಯೆ ಇದೆ. ಮುಖ್ಯವಾಗಿ ಇದರಲ್ಲಿ ಸರ್ಕಾರದ ಹೊಣಗಾರಿಕೆ ಇದೆಯೇ ಅಥವಾ ಸಾರ್ವಜನಿಕರ ಹೊಣೆಗಾರಿಕೆಯೂ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನೋಡಬೇಕಾಗಿದೆ. ಈ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡುವಾಗ ಪ್ರಕೃತಿಯ ವಿಕೋಪದಿಂದ ಉಂಟಾಗಿದೆಯೇ ಆಹಾರ ಉತ್ಪಾದನೆ ಕಡಿಮೆಯಾಗಿರುವುದರಿಂದ ಉಂಟಾಗಿದೆಯೇ ಎಂಬುದನ್ನು ಯೋಚನೆ ಮಾಡಿ ನೋಡಬೇಕು. ಅದರಲ್ಲಿ ಆಹಾರ ಉತ್ಪಾದನೆಯೂ ಸಹ ಕಡಿಮೆಯಾಗಿದೆ ಜೊತೆಗೆ ಪ್ರಕೃತಿಯ ವಿಕೋಪವೂ ಕಾರಣವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಇದರಲ್ಲಿ ಮಾನ್ಯ ವಿರೋಧಪಕ್ಷದ ಸದಸ್ಯರು ಹೇಳುವುದನ್ನು ನೋಡಿದರೆ ಸರಿಯಾದ ರೀತಿಯಲ್ಲಿ ಆಹಾರ ವಿತರಣೆ ಆಗುತ್ತಿದೆಯೋ ಎಂಬುದನ್ನು ಸಹ ನೋಡಬೇಕು.

SRI B. B. SAYANAK —I rise to a point of order. Only one or two ministers are interested in this debate. This is an important debate. There is only one State Minister here. It shows how careless the Ministers are.

MR. CHAIRMAN. There is no point of order.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕನ್ನಡ ಬರದೆ ಇರುವ ಮಂತ್ರಿಗಳು ಇರುವುದರಿಂದ ಕನ್ನಡ ಬರುವ ಒಬ್ಬ ಮಂತ್ರಿಯವರನ್ನು ತಂದು ಕೂಡಿಸಿ ?

ಶ್ರೀ ಕೊಣಂದೂರು ಲಿಂಗಪ್ಪ —ಇದು ಬಹಳ ಪ್ರಾಮುಖ್ಯವಾದ ವಿಷಯ ಆದ್ದರಿಂದ ಕನ್ನಡದಲ್ಲಿ ಎಲ್ಲರೂ ಮಾತನಾಡುತ್ತಾ ಇರುವುದರಿಂದ ಕನ್ನಡ ತಿಳಿಯದೆ ಇರುವ ಮಂತ್ರಿಗಳು ಇದ್ದರೆ ಹೇಗೆ ?

ಶ್ರೀ ಕೆ. ಎಂ ರುದ್ರಪ್ಪ.—ನಮ್ಮ ಆಹಾರ ಸಚಿವರು ಯಾರು ಯಾರು ಆಹಾರಧಾನ್ಯವನ್ನು ಬಚ್ಚಿಟ್ಟಿದ್ದಾರೆ ಅದನ್ನು ಹೊರತೆಗೆಯಲು ಧಾಳಿ ಮಾಡಿದಾಗ ಯಾರ ಮುಲಾಜಿಗೆ ಸಹ ಒಳಗಾಗದೆ ಅದನ್ನು ಯಶಸ್ವಿಯಾಗಿ ಮಾಡಿದ್ದಾರೆ. ಆದಕ್ಕೋಸ್ಕರ ನಮ್ಮ ವಿರೋಧಪಕ್ಷದ ಸದಸ್ಯರು ಅವರನ್ನು ಟೀಕೆ ಮಾಡುತ್ತಿದ್ದಾರೆ ಅವರು ಟೀಕೆ ಮಾಡುವುದರ ಬದಲು ಸರಿಯಾಗ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು ಎಂದು ಹೇಳುತ್ತೇನೆ. ಬಹು ಮುಖ್ಯವಾಗಿ ಈ ಹಣದುಬ್ಬರ ಮತ್ತು ಆಹಾರ ಅಭಾವದ ಬಗ್ಗೆ ಕೇಂದ್ರ ಸರ್ಕಾರದವರು ಸಹ ಒಪ್ಪಿಕೊಂಡಿದ್ದಾರೆ. ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರದವರು ಎಲ್ಲಾ ರೀತಿಯಾದ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಅದನ್ನು ಯೋಚನೆ ಮಾಡದೆ ನಮ್ಮ ವಿರೋಧಪಕ್ಷದ ಸದಸ್ಯರು ಕೇವಲ ಟೀಕೆ ಮಾಡುವುದು ಅದರಿಂದಲೇ ಅವರಿಗೆ ಸಮಾಧಾನವಾಗಲಾರದೆಂದು ನನ್ನ ಭಾವನೆ. ಇದರಲ್ಲಿ ಒಂದು ಕಡೆ ಜನರಿಗೆ ಆಹಾರವಿಲ್ಲದೆ ನಿರ್ಗತಿಕರಾಗುತ್ತಿದ್ದಾರೆ. ಒಂದುಕಡೆ ಇರುವುದಕ್ಕಿಂಥ ಹೆಚ್ಚಿಗೆ ದಾಸ್ತಾನು ಮಾಡುತ್ತಾ ಇದ್ದಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಹಬ್ಬ, ಮದುವೆ ಮುಂತಾದ ಸಮಾರಂಭಗಳಿಗೆ ಆಹಾರ ಪದಾರ್ಥಗಳನ್ನು ಹೆಚ್ಚಿಗೆ ಉಪಯೋಗಿಸುತ್ತಿರುವುದು ಜಾಸ್ತಿಯಾಗಿ ಕಂಡುಬರುತ್ತಿದೆ. ಹಿಂದೆ ಸರ್ಕಾರ ಗೆಸ್ಟ್ ಕಂಟ್ರೋಲ್ ಆರ್ಡರ್ ಮಾಡಿದ್ದಾರೆ. ಆದನ್ನು ಸರಿಯಾದ ರೀತಿಯಲ್ಲಿ ನಿರ್ದಾಕ್ಷಿಣ್ಯವಾಗಿ ಚಲಾಯಿಸಬೇಕೆಂದು ಹೇಳುತ್ತೇನೆ. ಯಾರು ಈ ರೀತಿಯಾಗಿ ಸಮಾರಂಭಗಳಿಗೆ ದುಂದು ವೆಚ್ಚ ಮಾಡುತ್ತಾರೆ ಅದನ್ನು ಕಡಿಮೆ ಮಾಡಿದರೆ ಒಳ್ಳೆಯದು. ಯಾರೇ ಮದುವೆ ಮಂಜಿ ಮಾಡಿದರೂ ಕೂಡ ಅತಿಥಿಗಳನ್ನು ಇಷ್ಟೇ ಕರೆಯಬೇಕೆಂದು ಆಜ್ಞೆ ಇದ್ದರೂ ಕೂಡ ಅವನ್ನು ಯಾರು ಪರಿಪಾಲನೆ ಮಾಡುತ್ತಾ ಇಲ್ಲ. ಅಂಥವರ ಬಗ್ಗೆ ಟೀಕೆ ಮಾಡಲಿ ಅದಕ್ಕೆ ಯಾರು ಅಡ್ಡಿ ಮಾಡುವುದಿಲ್ಲ. ಆ ವಿಷಯವನ್ನು ಮಾನ್ಯ ವಿರೋಧಪಕ್ಷದ ಸದಸ್ಯರು ಏಕೆ ಟೀಕೆ ಮಾಡಲಿಲ್ಲ ಒಂದು ಕಡೆ ಬಂಡವಾಳಗಾರರು ಅವರೇ ಈ ರೀತಿ ದುಂದು ವೆಚ್ಚ ಮಾಡುತ್ತಾರೆ ಅದರ ಬಗ್ಗೆ ವಿರೋಧ ಪಕ್ಷದವರು ಏನು ಹೇಳುತ್ತಾ ಇಲ್ಲ ಅಂಥವರ ಮೇಲೆ ಕ್ರಮ ತೆಗೆದುಕೊಂಡರೆ ಸರ್ಕಾರವನ್ನು ದೂರುತ್ತಾರೆ.

ಶ್ರೀ ಕೊಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರು ವಿರೋಧಪಕ್ಷದ ಸದಸ್ಯರು ಯಾರು ಆ ರೀತಿ ಮಾಡಿದ್ದಾರೆ, ಯಾರು ರಾಜಕೀಯ ಮಾಡುವುದಕ್ಕೆ ಮುಂದೆ ಬಂದಿದ್ದರು ಅದರಲ್ಲಿ ಯಾವ ಯಾವ ರಾಜಕೀಯ ಪಕ್ಷದವರು ಬಂದಿದ ರು ಎಂದು ಹೇಳಲಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರ ಪಕ್ಷದವರೇ ಒಂದು ಸಮಾರಂಭದಲ್ಲಿ ಸುಮಾರು ೬೦ ಸಾವಿರ ಜನರಿಗೆ ಮದುವೆಮಾಡಿ ಊಟ ಹಾಕಿದ್ದಾರೆ ಅದನ್ನು ವಿರೋಧಪಕ್ಷದವರು ದೂರು ಹೇಳುತ್ತಿದ್ದಾರೆ ?

ಶ್ರೀ ಕೆ. ಎಂ. ರುದ್ರಪ್ಪ.—ವಿರೋಧ ಪಕ್ಷದವರು ನಮ್ಮನ್ನು ದೂರುತ್ತಿದ್ದಾರೆ ಅವರ ತಪ್ಪನ್ನು ನ್ಯಾಯವಾಗಿ ನಮಗೆ ಹೇಳಲು ನಮಗೂ ಅಧಿಕಾರ ಇದೆ ಉತ್ಪಾದನೆ ವಿಚಾರದಲ್ಲಿ ನಮ್ಮ ಸರ್ಕಾರದವರು ಇನ್ನೂ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ರೈತರಿಗೆ ಗೊಬ್ಬರ ಹಂಚುವುದಕ್ಕೆ ಮತ್ತು ಇತರ ಸಲಕರಣೆಗಳನ್ನು ಒದಗಿಸುವುದಕ್ಕೆ ಸರ್ಕಾರದವರು ಸಾಕಷ್ಟು ಆಸಕ್ತಿ ವಹಿಸಿದ್ದಾರೆ. ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೋಸ್ಕರ ಬೇಕಾದಷ್ಟು ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಅವರು ಕೈಕೊಂಡಿರುವ ಎಲ್ಲಾ ಕೆಲಸಕಾರ್ಯಗಳು ಯಶಸ್ವಿಯಾಗಿ ನಡೆಯುತ್ತಿದ್ದರೂ ಅದನ್ನು ಪರಿಗಣಿಸದೆ ನಮ್ಮ ವಿರೋಧಪಕ್ಷದ ಸದಸ್ಯರು ಬರೀ ಟೀಕೆ ಮಾಡುವುದಕ್ಕಿಂಥ ಅವರು ಸಹಿತ ನಮ್ಮ ಸರ್ಕಾರದೊಡನೆ ಸಹಕರಿಸಿ ಸಹಾಯ ಮಾಡಿದರೆ ವಿತರಣೆ ಕಾರ್ಯವು ಇನ್ನು ಸುಗಮವಾಗಿ ಯಶಸ್ವಿಯಾಗುತ್ತದೆಂದು ನಾನು ಹೇಳುತ್ತೇನೆ. ಇನ್ನೊಂದು ವಿಚಾರ ಏನು ಎಂದರೆ ರೈತರು ಆಹಾರ ಪದಾರ್ಥವನ್ನು ಬೆಳೆಯುತ್ತಾರೆ ಬೆಳೆದ ಪದಾರ್ಥವನ್ನು ಇಡುವುದಕ್ಕೆ ಮತ್ತು ಸ್ಟೋರ್ ಮಾಡುವುದಕ್ಕೆ ಸರಿಯಾದ ಅನುಕೂಲವಿರುವುದಿಲ್ಲ. ಬೆಳೆದ ಪದಾರ್ಥದಲ್ಲಿ ಸುಮಾರು ೧೦೦ಕ್ಕೆ ೧೦ರಷ್ಟು ಭಾಗ ಇಲಿ, ಹೆಗ್ಗಣದ ಹಾವಳಿಯಿಂದ ನಷ್ಟವಾಗುತ್ತಿದೆ. ಇದನ್ನು ತಪ್ಪಿಸಬೇಕಾದರೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ವೇರ್‌ಹೌಸ್ ಫೆಸಿಲಿಟೀಸ್ (warehouse) ಕೊಡುವುದರ ಕಡೆಗೆ ಹೆಚ್ಚಿನ ಗಮನ ಕೊಟ್ಟು ರೈತರಿಗೆ ಸಹಾಯಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಮೇಲೆ ರೈತನಿಗೆ ಸಾಲ ತೆಗೆದುಕೊಳ್ಳುವುಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿಗೂ ಒಂದು ವೇರ್ ಹೌಸ್ ಕಟ್ಟಿಸಿ ಕೊಡುವುದು ಒಳ್ಳೆಯದು. ಅಹಾರ ಪದಾರ್ಥ ಹೆಚ್ಚಿನ ರೀತಿಯಲ್ಲಿ ಶೇಖರಣೆ ಮಾಡುವುದಕ್ಕೆ ಸಹಾಯವಾಗುದೆಂದು ಹೇಳಬಯಸುತ್ತೇನೆ. ಉತ್ಪಾದನೆ ಕಡಿಮೆಯಾಗಲು ಇನ್ನೂ ಒಂದು ಕಾರಣ ಇದೆ. ಅದು ಏನೆಂದರೆ ಕೆಲಸಗಾರರು ಆಗಾಗ್ಗೆ ಅವರ ಕುಂದುಕೊರತೆಗಳಿಗೋಸ್ಕರ ಮುಷ್ಕರ ಹೂಡುವುದರಿಂದ ಆಹಾರಧಾನ್ಯದ ಉತ್ಪಾದನೆ ಕಡಿಮೆಯಾಗುತ್ತದೆ ಆದ್ದರಿಂದ ನಮ್ಮ ವಿರೋಧಪಕ್ಷದ ಸದಸ್ಯರು ಸಹಿತ ಈ ರೀತಿ ಮುಷ್ಕರ ನಡೆಯದಂತೆ ಸಹಕರಿಸಬೇಕೆಂದು ಜನರಿಗೆ ತಿಳುವಳಿಕೆ ಕೊಟ್ಟರೆ ಒಳ್ಳೆಯದು. ಯಾವ ರಾಷ್ಟ್ರವೇ ಆಗಲಿ, ಯಾವ ರಾಜ್ಯವೇ ಆಗಲಿ ಮುಷ್ಕರ ಹೂಡಿದರೆ ಕೆಲಸ ಕಡಿಮೆಯಾಗುತ್ತದೆ ಅದರಿಂದ ಉತ್ಪಾದನೆ ಕಡಿಮೆಯಾಗುತ್ತದೆ. ಜನರು ಯಾವಾಗಲೂ ಕಷ್ಟಪಟ್ಟು ದುಡಿದರೆ ಅವರಿಗೂ ಸುಖ ಮತ್ತು ದೇಶಕ್ಕೂ ಆದಾಯ ಹೆಚ್ಚುತ್ತದೆ. ಕೂಲಿಕಾರರ ಯಾವುದೇ ಕುಂದುಕೊರತೆಗಳು ಇದ್ದಾಗ್ಯೂ ಅದನ್ನು ನ್ಯಾಯ ಕಾನಸ್ಟಿಟ್ಯೂಷನಲ್ಲಾಗಿ ಹೋಗಬೇಕೆಂದು ಈ ಸಮಯದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಏಕೆಂದರೆ, ಕಂಟ್ರೋಲ್ ಇರಬೇಕಾದ ಕಡೆ ಒಂದು ಸರಿಯಾದ ರೀತಿಯಲ್ಲಿ ಸರ್ಕಾರದವರು ಕಾನೂನನ್ನು ಚಲಾಯಿಸಬೇಕು. ಆಗ ಲಂಚಕ್ಕೆ ಅವಕಾಶ ಇಲ್ಲದಂತೆ ನೋಡಿಕೊಳ್ಳಬಹುದು. ಕೆಲವು ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ. ಆದರೆ ಲಂಚ ತಿನ್ನತಕ್ಕವರೂ ಇದ್ದಾರೆ. ಇದಕ್ಕೆ ನಮ್ಮ ಸಾರ್ವಜನಿಕರು ಕೆಲವುಸಟ್ಟಿಗೆ ಕಾರಣರಾಗಿರುತ್ತಾರೆ. ಇಲ್ಲಿ ಸಾರ್ವಜನಿಕರು ಲಂಚವನ್ನು ಏಕೆ ಕೊಡುವುದಕ್ಕೆ ಹೋಗುತ್ತಾರೆ ಎನ್ನುವುದನ್ನು ನೋಡಬೇಕಾಗಿದೆ ಇವರಿಗೂ ಲಂಚವನ್ನು ಕೊಡುವುದರಿಂದ ಒಂದಂಶ ಲಾಭ ಬರುತ್ತದೆ. ಲಂಚವನ್ನು ಕೊಡದ ರೀತಿಯಲ್ಲಿ ವಿತರಣೆಯನ್ನು ಮಾಡಿದರೆ ಇದರಿಂದ ಸಮಾಜಕ್ಕೆ ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೆ ಸಹಕಾರವನ್ನೂ ಕೊಟ್ಟಂತಾಗುತ್ತದೆ. ಆದ್ದರಿಂದ ಈ ಹೊಣೆಗಾರಿಕೆ ಸರ್ಕಾರದ ಮೇಲೆ ಅಷ್ಟೇ ಅಲ್ಲ, ಅಧಿಕಾರಿಗಳ ಮೇಲೂ ಇದೆ, ಮತ್ತು ನಮ್ಮಂಥ ಸಾರ್ವಜನಿಕರ ಮೇಲೂ ಇದೆ, ಎನ್ನುವುದನ್ನು ಪ್ರತಿಯೊಬ್ಬರೂ ವಿರೋಧ ಪಕ್ಷದವರೂ ಸೇರಿ ಅರಿತು ಕೊಳ್ಳಬೇಕು.

ಇನ್ನೊಂದು ವಿಷಯವನ್ನು ಮಾನ್ಯ ಶಾಮಣ್ಣನವರು ಹೇಳಿದರು. ಏನೆಂದರೆ, ಜನಸಂಖ್ಯೆ ನಮ್ಮ ದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತಿದೆ ಎಂದು. ಇನ್ನು ಮೂವತ್ತು ವರ್ಷಗಳಲ್ಲಿ ಈಗ ಇರತಕ್ಕ ರೀತಿಯಲ್ಲಿ ಮುಂದುವರಿದರೆ, ೫೬ ಕೋಟಿ ಇದ್ದದ್ದು ಅದರ ಎರಡರಷ್ಟು ಆಗುವುದರಲ್ಲಿ ಸಂಶಯವಿಲ್ಲ ಎಂದು ತಜ್ಞರು ಹೇಳುತ್ತಿದ್ದಾರೆ. ಈ ರೀತಿಯಾದರೆ, ಎಷ್ಟು ತೊಂದರೆಯಾಗುತ್ತದೆ ಎನ್ನುವುದು ಊಹಿಸಿಕೊಳ್ಳುವುದೂ ಕಷ್ಟವಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ಫ್ಯಾಮಿಲಿ ಪ್ಲಾನಿಂಗ್ ಯೋಜನೆಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಕೆಲವು ವಿದ್ಯಾವಂತ ಜನರು ಇದನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಆದರೆ ಅವಿದ್ಯಾವಂತರು, ಕೂಲಿಗಾರರು ಏನು ಇದ್ದಾರೆ ಅವರ ಕಡೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ ಆದ್ದರಿಂದ ಜನಸಂಖ್ಯೆ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ಇದರ ಕಡೆ ಸರ್ಕಾರದವರು ತೀವ್ರವಾಗಿ ಗಮನ ಕೊಡಬೇಕು. ಕೇಂದ್ರದವರು ಪಾಪ್ಯುಲೇಷನ್ ಕಂಟ್ರೋಲ್ ಎನ್ನುವ ಒಂದು ಯೋಜನೆಯನ್ನು ತಂದಿದ್ದಾರೆ, ರಾಜ್ಯಸರ್ಕಾರದವರು ಆದನ್ನು ಪಡೆದುಕೊಂಡು ಜನಸಂಖ್ಯೆ

(ಶ್ರೀ ಕ. ಎಂ. ರುದ್ರಪ್ಪ)

ಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ನಾನು ಈ ಸಮಯದಲ್ಲಿ ಆಶಿಸುತ್ತೇನೆ.

ಆ ಮೇಲೆ, ಮುಖ್ಯವಾಗಿ, ಆಹಾರಪದಾರ್ಥಗಳು ಸರಿಯಾದ ರೀತಿಯಲ್ಲಿ ಸಿಕ್ಕದೆ ಇರುವುದಕ್ಕೆ ಕಾರಣ ಈ ಅಡಲ್ಟರೇಷನ್. ಯಾವ ಪದಾರ್ಥವನ್ನು ತೆಗೆದು ಕೊಂಡರೂ ಸಹ ಅದು ಸರಿಯಾದ ರೀತಿಯಲ್ಲಿ. ಆದಕ್ಕೆ ಬೆರೆಕೆಯನ್ನು ಮಾಡುತ್ತಾರೆ. ಲಾಭ ಸಂಪಾದನೆ ಮಾಡುವ ದೃಷ್ಟಿಯಿಂದ ವರ್ತಕರು ಜನಗಳ ಆರೋಗ್ಯವನು ಹಾಳು ಮಾಡುತ್ತಿದ್ದಾರೆ. ಮೊನ್ನೆ ಪತ್ರಿಕೆಯಲ್ಲಿ ಯಾವುದೋ ತಿಥಿ ಊಟದಲ್ಲಿ ಈಕಲಬೆರೆಕೆಯಿಂದ ಹತ್ತಾರು ಜನು ತಮ್ಮ ಪ್ರಾಣವನ್ನು ಕಳೆದು ಕೊಂಡರು. ಎಂದು ಬಂದಿದೆ ಅನೇಕ ಜನರು ಕಲಬೆರೆಕೆ ಆಹಾರಪದಾರ್ಥವನ್ನು ಸೇವನೆಮಾಡುವುದರಿಂದ ತಮ್ಮ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಾರೆ. ಸರ್ಕಾರದವರು ಈ ವಿಚಾರದಲ್ಲಿ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಂಡು ಕಲಬೆರಕೆ ಮಾಡುವವರನ್ನು ನಿರ್ಧಾಕ್ಷಣ್ಯವಾಗಿ ಶಿಕ್ಷೆಗೆ ಗುರಿ ಮಾಡಬೇಕು ಎಂದು ನಾನು ಈಸಮಯದಲ್ಲಿ ಹೇಳ ಬಯಸುತ್ತೇನೆ. ನಮ್ಮ ಜನಗಳಿಗೆ ಹಬ್ಬಹರಿದಿನಗಳನ್ನು, ಸಮಾರಂಭಗಳನ್ನು, ಮದುವೆ ಮುಂಜಿ ಇತ್ಯಾದಿಗಳನ್ನು ಮಾಡುವುದು ಬೆಳೆದು ಇಷ್ಟ ಕಷ್ಟಕಾಲ ಬಂದರೂ ನಡೆದು ಬಂದ ಪದ್ಧತಿ ಇಂಥ ಪದ್ಧತಿ ಗಳನ್ನು ನಾವು ಯಾವ ದೇಶದಲ್ಲಿಯೂ ನೋಡುತ್ತಿಲ್ಲ. ದೇವರ ಹೆಸರಿನಲ್ಲಿ ಇಂಥ ಸಮಾರಂಭಗಳನ್ನು ಮಾಡುತ್ತೇವೆ. ಇಂಥವುಗಳನ್ನು ನಾವು ಕಡಿಮೆ ಮಾಡುವಂತೆ ಜನಗಳಿಗೆ ಸರಿಯಾದ ರೀತಿಯಲ್ಲಿ ತಿಳುವಳಿಕೆ ಕೊಟ್ಟು, ನಾವು ಇಂಥ ಸಮಾರಂಭಗಳಿಗೆ ಹೋಗಬಾರದು. ವಿರೋಧಪಕ್ಷದವರು ಇದನ್ನು ಗಮನಿಸಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ ಹಾಸನದಲ್ಲಿ ಅವರ ಪಕ್ಷದವರೇ ೫೦—೬೦ ಜನಕ್ಕೆ ಊಟ ಹಾಕಿದ್ದಾರೆ. ಮಂತ್ರಿ ಮಹೋದಯರುಗಳು ಅಲ್ಲಿಗೆ ಆಗಮಿಸಿದ್ದಾರೆ ಅವರಿಗೆ ಏನು ಶಿಕ್ಷೆ ಮಾಡಿದ್ದೀರಿ? ಸುಮ್ಮನೆ ಇಲ್ಲಿ ಭಾಷಣ ಮಾಡಿದರೆ ಏನು ಪ್ರಯೋಜನ.

ಶ್ರೀ ಕೆ. ಎಂ. ರುದ್ರಪ್ಪ.—ಯಾರು ಮಾಡಿದರೂ ಅದು ಸರಿಯಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಜುಡಿಷಿಯಲ್ ಎನ್‌ಕ್ವಯರಿ ಮಾಡಿ ಅಪರಾಧಿಗಳನ್ನು ಶಿಕ್ಷೆ ಮಾಡಿ, ಆಗ ನಾವು ನಿಮ್ಮ ಹಿಂಬಾಲಕರಾಗುತ್ತೇವೆ.

ಶ್ರೀ ಕೆ. ಎಂ. ರುದ್ರಪ್ಪ.—ಆದ್ದರಿಂದ ಕಾನೂನನ್ನು ಸರಿಯಾದ ರೀತಿಯಲ್ಲಿ ಚಲಾಯಿಸಬೇಕು. ವಿರೋಧಪಕ್ಷದವರು ಈ ಒಂದುಹೊಣೆಗಾರಿಕೆಯನ್ನು ಸರ್ಕಾರದ ಮೇಲೆ ಹಾಕುವುದಕ್ಕಿಂತ ಸಲಹೆಗಳನ್ನು ಕೊಟ್ಟು ಸರ್ಕಾರದೊಡನೆ ಸಹಕರಿಸಿದರೆ ಸಮಸ್ಯೆಗಳನ್ನು ಹೆಚ್ಚಿನ ರೀತಿಯಲ್ಲಿ ಕಡಿಮೆ ಮಾಡಬಹುದು ಎಂದು ನಾನು ಹೇಳುತ್ತೇನೆ. ಈ ಸಮಸ್ಯೆ ನಮ್ಮ ಕರ್ನಾಟಕ ರಾಜ್ಯಕ್ಕೆ ಅಷ್ಟೆ ನೀಮಿತವಾಗಿಲ್ಲ, ಇದು ಇಡೀ ದೇಶದ ಮತ್ತು ಪ್ರಪಂಚದ ಸಮಸ್ಯೆ. ಇದನ್ನು ನಾವು ಅರಿತುಕೊಂಡು ಸರ್ಕಾರಕ್ಕೆ ಹೆಚ್ಚಿನ ಬೆಂಬಲಕೊಡುವ ರೀತಿಯಲ್ಲಿ ಕೆಲಸಮಾಡಬೇಕು. ನಮಗೆ ಅವಶ್ಯಕವಾದ ಪದಾರ್ಥಗಳನ್ನು ಎಷ್ಟು ಬೇಕೋ ಅಷ್ಟನ್ನು ಉಪಯೋಗಮಾಡಬೇಕು ಏಕೆಂದರೆ, ಕೆಲವರು ಕಂಟ್ರೋಲ್ ಎಂದರೆ, ಮುಂದೆ ಸಾಕಾದಷ್ಟು ಸಾಮಾನು ಸಿಕ್ಕುವುದಿಲ್ಲ ಎಂದು ಅಧಿಕಾರಿಗಳ ಸಹಾಯ ಪಡೆದು ಹೆಚ್ಚಿನ ಸಾಮಾನುಗಳನ್ನು ಹೊಂದು ವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದು ಸರಿಯಾದುದಲ್ಲ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(*Mr. Deputy Speaker in the Chair*)

† ಶ್ರೀ ಸಿ. ಬೈರೇಗೌಡ(ವೇಮಗಲ್).—ಸನ್ಮಾನ್ಯ ಉಪಾಧ್ಯಕ್ಷರೇ, ಈದಿನ ಮಾನ್ಯ ದೇವೇಗೌಡರು ಮತ್ತು ಶಾಮಣ್ಣನವರು ಸಂದರ್ಭಕ್ಕೆ ಉಚಿತವಾದಂಥ ನಿರ್ಣಯವನ್ನು ಸಭೆಯ ಮುಂದೆ ತಂದಿದ್ದಾರೆ. ಈ ವಿಷಯದಲ್ಲಿ ಮಾತನಾಡಬೇಕಾದರೆ ಮಾತನಾಡತಕ್ಕಂಥ ವಿಷಯಗಳು ಬೇಕಾದಷ್ಟು ಇವೆ. ಆದರೆ ಕಾಲದ ಮಿತಿಯಿಂದ ಕೆಲವು ಮುಖ್ಯ ಅಂಶಗಳನ್ನು ಮಾತ್ರ ಪ್ರಸ್ತಾಪಮಾಡುವುದಕ್ಕೆ ಇಚ್ಛಿಸುತ್ತೇನೆ. ಅಧ್ಯಕ್ಷರೇ, ಬೆಲೆಗಳು ಯಾವ ಮಟ್ಟದಲ್ಲಿ ಏರಿವೆ ಎನ್ನುವುದು ಇಡೀ ದೇಶಕ್ಕೆ ಗೊತ್ತಾಗಿದೆ. ಅದೇ ರೀತಿಯಲ್ಲಿ ಕೆಲವು ಪದಾರ್ಥಗಳ ಕೊರತೆ ಎಷ್ಟರಮಟ್ಟಿಗೆ ಇದೆ ಎನ್ನುವುದೂ ಎಲ್ಲರಿಗೂ ಗೊತ್ತಿದೆ. ಇದಕ್ಕೆ ಕಾರಣಕರ್ತರು ಯಾರು ಇದಕ್ಕೆ ಮೂಲಭೂತವಾದ ಕಾರಣ ಏನು ಎನ್ನುವುದನ್ನು ತಿಳಿಸಬೇಕಾದ್ದು ಸೂಕ್ತ ಎಂದು ನಾನು ಭಾವಿಸುತ್ತೇನೆ. ನಾಲ್ಕು ಪಂಚವಾರ್ಷಿಕ ಯೋಜನೆಗಳು ಮುಗಿದಿವೆ, ಈಗ ನಾವು ಐದನೆಯ

ಪಂಚವಾರ್ಷಿಕ ಯೋಜನೆಯಲ್ಲಿದ್ದೇವೆ. ಆದರೆ ಆಗಿರತಕ್ಕ ಅಭಿವೃದ್ಧಿ ಏನು ? ಪ್ರತಿಯೊಂದು ಪಂಚ ವಾರ್ಷಿಕ ಯೋಜನೆಯಲ್ಲಿಯೂ ಬೆಲೆಗಳನ್ನು ಏರಿಸುವುದರಲ್ಲಿ ಬಹಳ ಯಶಸ್ವಿಯಾಗಿದ್ದೇವೆ. ಅದೇ ರೀತಿಯಲ್ಲಿ ದೇಶದ ಸಂಪತ್ತನ್ನು ಅಭಿವೃದ್ಧಿ ಪಡಿಸುವುದರಲ್ಲಿ ಆಗಲೀ, ಅಥವಾ ದೇಶದಲ್ಲಿ ಜನತೆಯ ಆದಾಯವನ್ನು, ಅವರ ಸಂಪತ್ತನ್ನು ಹೆಚ್ಚಿಸುವುದರಲ್ಲಿಯಾಗಲೀ ಅದು ಯಾವುದೂ ಸಾಧ್ಯವಾಗಿಲ್ಲ. ಬೆಲೆಗಳು ಯಾವ ಮಟ್ಟದಲ್ಲಿ ಏರುತ್ತಿವೆ ಎನ್ನುವುದನ್ನು ಅಂಕಿ ಅಂಶಗಳ ಮೂಲಕ ಹೇಳಬೇಕಾದರೆ ೧೯೭೨-೭೩ನೆಯ ಇಸವಿಯಲ್ಲಿ ಪದಾರ್ಥಗಳ ಬೆಲೆ ೩.೮ ರಷ್ಟು ಜಾಸ್ತಿಯಾದರೆ ೧೯೭೩-೭೪ರಲ್ಲಿ ೨೨.೭ ರಷ್ಟು ಜಾಸ್ತಿಯಾಗಿದೆ. ನನ್ನ ಮಿತ್ರರೊಬ್ಬರು ಮಾತನಾಡುತ್ತಾ ಹೇಳಿದರು, ಪಾಕಿಸ್ತಾನದ ಯುದ್ಧದಿಂದ ಬೆಲೆಗಳು ಜಾಸ್ತಿಯಾದುವು ಎಂದುಹೇಳಿದರು. ಅವರಿಗೆ ಬಹುಶಃ ಅಂಕಿ ಅಂಶಗಳು ಗೊತ್ತಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ೧೯೭೧—೭೨ನೆಯ ಇಸವಿಯಿಂದ ಬೆಲೆಗಳು ಏರಿಕೆಯಾಗಿರತಕ್ಕದ್ದು ಕೇವಲ ೪ ರಷ್ಟು ಮಾತ್ರ. ಹಿಂದಿನ ವರ್ಷ, ೫.೫ ಮೂರನೆಯ ವರ್ಷ ೯.೯ ರಷ್ಟು ಬೆಲೆ ಏರಿಕೆಯಾಗಿದೆ. ಕದಕ್ಕೆ. ಯುದ್ಧ ಕಾರಣವಲ್ಲ. ಆಹಾರದ ಉತ್ಪಾದನೆಯೂ ಕೂಡ ಜಾಸ್ತಿಯಾಗಿದೆ ೧೯೭೩-೭೪ರಲ್ಲಿ ಆಹಾರದ ಉತ್ಪಾದನೆ ೧೧೦ ಮಿಲಿಯನ್ ಟನ್ ಆಗಿದೆ. ಇಷ್ಟೆಲ್ಲಾ ಆದರೂ ಕೂಡ ಇವತ್ತಿನದಿವಸ ಶೇಕಡ ೨೭ ರಷ್ಟು ಬೆಲೆಗಳು ಜಾಸ್ತಿಯಾಗದೆ. ಇದಕ್ಕೆ ಮೂಲಕ ಕಾರಣ ನಮ್ಮ ಆರ್ಥಿಕ ವ್ಯವಸ್ಥೆ. ನಮ್ಮ ದೇಶದಲ್ಲಿ ಸಮಾಜವಾದದ ಆರ್ಥಿಕ ವ್ಯವಸ್ಥೆ ಯಂತ್ರವನ್ನು ದೊಡ್ಡದಾಗಿ ಬೆಳೆಸುತ್ತಿದ್ದಾರೆ. ಯಾರು ಇವತ್ತಿನ ದಿವಸ ಶಕ್ತಿಯುತರಾಗಿ ಬೆಳೆಯುತ್ತಾರೆ ಎಂದರೆ, ಯಾರಿಗೆ ಹಣ ಇದೆ ಯಾರಿಗೆ ರಾಜಕೀಯದ ರಕ್ಷಣೆ ಇದೆ ಅವರು ಇವತಿದಿವಸ ಬೆಳೆಯುತ್ತಿದ್ದಾರೆ. ಅವರ ಅಂಕಿಅಂಶಗಳನ್ನು ಈ ಸಂದರ್ಭದಲ್ಲಿ ಕೊಡುವುದು ಅಪ್ರಕೃತ ಎಂದು ಭಾವಿಸುತ್ತೇನೆ. ಇಂದು ಸಾಮಾನ್ಯ ಜನರ ಪರಿಸ್ಥಿತಿ ಕಠೋರವಾಗಿದೆ. ದೇಶದಲ್ಲಿ ಗಂಡಾಂತರ ಪರಿಸ್ಥಿತಿ ಇದೆ. ಇಂಥ ಸ್ಥಿತಿಗೆ ತಂದ ದುರಂತ ನಾಯಕರು ದೇಶದ ಜವಾಬ್ದಾರಿಯನ್ನು. ಹೊಣೆಗಾರಿಗಿಯನ್ನು ಹೊರಬೇಕಾಗುತ್ತದೆ. ಇಂಥ ನಾಯಕರು ಗುಂಪು ನಮ್ಮ ಕಣ್ಣು ಮುಂದೆ.

ಚುನಾವಣೆಯಲ್ಲಿ ಏನು ಭಾಷಣ ಮಾಡಿದರು, ಪ್ರಣಾಳಿಕೆಯನ್ನೇನು ಹೊರಡಿಸಿದ್ದರು ಅದರಂತೆ ಕಾರ್ಯರೂಪಕ್ಕೆ ತಂದಿದ್ದರೆ ಈ ದುರಂತವಾಗುತ್ತಿರಲಿಲ್ಲ. ಅದನ್ನೆಲ್ಲಾ ಮರೆತು ಅದಕ್ಕೆ ಬದಲಾಗಿ ಬಂಡವಾಳ ಶಾಹಿಗಳ ಮಾರ್ಗವನ್ನನುಸರಿಸಿ ಅವರ ದಾಸರಾಗಿ ಆಡಳಿತ ನಡೆಸುತ್ತಿರುವುದರಿಂದ ಈ ಪರಿಸ್ಥಿತಿ ಬಂದಿದೆ. ಕೇಂದ್ರ ಸರಕಾರದವರು ಆಹಾರದ ಸಗಟು ವ್ಯಾಪಾರಕ್ಕಿಳಿದದ್ದು ಶುದ್ಧ ಮೋಸ ಎಂದು ಹೇಳುತ್ತಿದ್ದಾರೆ, ಅದರಂಥ ದುರಂತ ಇದುವರೆಗೆ ನಡೆದಿಲ್ಲ. ಗೋಧಿ ಸಗಟು ವ್ಯಾಪಾರವನ್ನು ಕೈ ಬಿಟ್ಟರು. ರಾಷ್ಟ್ರಾಧ್ಯಕ್ಷರ ಚುನಾವಣೆ ಮಾಡಲು ಸರಿಯಾದ ಅರ್ಹತೆ ಉಳ್ಳ ಅಭ್ಯರ್ಥಿಯನ್ನು ಆರಿಸಿದ್ದೀರಾ ?

Mr. DEPUTY SPEAKER.—All those things cannot be discussed here. The scope may be wide, but I cannot permit the hon. member to be so much imaginative. The inference of the hon. member is wrong and fallacious to the core.

ಶ್ರೀ ಸಿ. ಬೈರೇಗೌಡ —ಕಳ್ಳದಾಸ್ತಾನುಗಾರರು, ಕಲಬೆರಕೆ ಮಾಡುವವರು ಯಥೇಚ್ಛವಾಗಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ. ೧೯೭೩ನೆಯ ಇಸವಿ ಜನವರಿಯಲ್ಲಿ ಬೆಂಗಳೂರಿನಲ್ಲಾದ ಘಟನೆಯೊಂದನ್ನು ತಿಳಿಸಬೇಕಾಗಿದೆ. ಈ ದಿವಸ ಕೇಸರಿಬೇಳೆಯನ್ನು ಪಯೋಗಿಸಿದರೆ ತೊಂದರೆಯಾಗುವುದು, ಪೆರ್ಯಾಲಿಸಿಸ್ ಬರುತ್ತದೆ ಎಂದು ಡಾಕ್ಟರುಗಳು ಹೇಳುವರು. ಕೇಂದ್ರ ಸರಕಾರದವರು ಎಸ್‌ನಿಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಇದರ ಬಗ್ಗೆ ನಿರ್ಬಂಧ ಮಾಡಿದ್ದಾರೆ ಇದರ ಬಗ್ಗೆ ನಮ್ಮ ರಾಜ್ಯ ಸರಕಾರದವರೂ ಕೂಡ ಒಂದು ನೋಟಿಫಿಕೇಷನ್ ೧೯೭೩ರಲ್ಲಿ ಹೊರಡಿಸಿ ನಿರ್ಬಂಧಮಾಡಿದ್ದಾರೆ. ಕೇಸರಿ ಬೇಳೆಯನ್ನು ಮಾರಾಟ ಮಾಡುವುದು ಅಥವ ಸ್ಟೋರ್ ಮಾಡುವುದು ಕಾನೂನಿಗೆ ವಿರುದ್ಧವಾದ ದು ಎಂದು ತಿಳಿಸಿದ್ದಾರೆ. ಆದರೆ ಸುಮಾರು ೬ ಸಾವಿರ ಮೂಟೆ ಕೇಸರಿಬೇಳೆಯನ್ನು ಬೆಂಗಳೂರು ತುಮಕೂರು ಮುಂತಾದ ಕಡೆಗಳಲ್ಲಿ ಪೋಲೀಸರು ಹಿಡಿದಿದ್ದರು, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಈ ಸರಕಾರಕ್ಕೆ ಸ್ವಲ್ಪವಾದರೂ ನಾಚಿಕೆಯಿಂದೆಯೋ ಎಂದು ಕೇಳಬೇಕಾಗಿದೆ. ಅವರು ನಿಜವಾಗಿಯೂ ಜನರ ಪ್ರತಿನಿಧಿಗಳಾಗಿದ್ದರೆ ಕೇಸರಿಬೇಳೆಗೆ ಸಂಬಂಧಪಟ್ಟಂತೆ ಅಪರಾಧ ಮಾಡಿದವರನ್ನು ಗಲ್ಲಿಗೆ ಹಾಕಬೇಕಾಗಿತ್ತು. ಸುಮಾರು ೬ ಸಾವಿರ ಮೂಟೆ ಕೇಸರಿಬೇಳೆಯನ್ನು ತೊಗರಿಬೇಳೆಗೆ ಕಲಬೆರಿಕೆ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟವರಿಗೆ ತಕ್ಕ ಶಿಕ್ಷೆ ವಿಧಿಸ ಬೇಕಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಪೋಲೀಸಿನವರು ಹಿಡಿದ ೬ ಸಾವಿರ ಮೂಟೆಯನ್ನು ವಾಪಸು ಕೊಟ್ಟುಬಿಟ್ಟರು

(ಶ್ರೀ ಸಿ. ಬೈರೇಗೌಡ)

ನನ್ನ ಹತ್ತಿರ ಕೆಲವು ಸರಕಾರಿ ಆಜ್ಞೆಗಳ ಕಾಪಿಗಳಿವೆ. ಅದರ ನಂಬರನ್ನು ಹೇಳುತ್ತೇನೆ, ಆರ ಜ ಶ ವರ್ತಕರು ೬ ಸಾವಿರ ಮೂಟೆ ಕೇಸರಿಬೇಳೆಯನ್ನಿಟ್ಟಿದ್ದಾರೆ. ಅವರು ಯಾರೆಂದರೆ ಮೆಸರ್ಸ್ ಷಹ ಮೇಗರಾಜ್ ಅಂಡ್ ಕಂಪೆನಿ, ನಂಬರು ೪೩೩, ಸಂತೆ ಪೇಟೆ. ಮೈಸೂರು. ಶ್ರೀ ಆದಿನಾರಾಯಣ ಟ್ರೇಡಿಂಗ್ ಕಂಪನಿ, ನಂ ೧೪೨. ಹಳೆತರಗುಪೇಟೆ, ಬೆಂಗಳೂರು—೩. ದಶರಥರಾಮ ರೋಲರ್ ಫ್ಲೋರ್ ಮಿಲ್ಸ್, ಹಳೆ ತರಗುಪೇಟೆ, ಬೆಂಗಳೂರು ೨ ಮೋತಿರಾಂ ಗೋಯಲ್ ಅಂಡ್ ಸನ್ಸ್ ಕಂಪೆನಿ, ೫೧, ಹಳೆತರಗುಪೇಟೆ, ಬೆಂಗಳೂರು-೨. ಮೋತಿರಾಂ ಗೋಯಲ್ ಅಂಡ್ ಸನ್ಸ್, ಸಂತೆಪೇಟೆ, ಮೈಸೂರು-೧ ಶ್ರೀ ವಿಜಯಲಕ್ಷ್ಮಿ ಗ್ರಾಂ ಫ್ಲೋರ್ ಮಿಲ್ಸ್ ೩೩-೩೫, ಸೌರಾಷ್ಟ್ರಪೇಟೆ. ಬೆಂಗಳೂರು-೨ ಈ ಸಂಬಂಧದಲ್ಲಿ ಹೋಂ ಸೆಕ್ರೆಟರಿಯವರಿಂದ ಐ. ಜಿ. ಪಿಗೆ ಒಂದು ಆಜ್ಞೆ ಹೋಗಿದೆ. ಅದನ್ನು ಹೇಳುತ್ತೇನೆ.

Copy of D. O. No. HD 2 MWP 73 dated 8th May 1973 from Sri P. J. Fernandes, Commissioner for Home Affairs and Secretary to Government, Home Department, Bangalore; addressed to Sri C.V.S. Rao, Inspector Genereal of Police, Mysore State, Bangalore ;

SRI K. H. PATIL (Minister for Food and Forests) —Sir, when the hon. member makes a reference of a document it is incumbens on the part of the part of the member to produce it before thit House.

MR. DEPUTY SPEAKER.— Since the hon. member is making a charge, full facts and figures may be given so that it could be effectively dealt with.

SRI D. DEVARAJ URS (Chief Minister). Sir, he must also disclose the source from where he got it.

ಶ್ರೀ ಕೋಣಂದೂರು ಲಿಂಗಪ್ಪ.— ಸರಕಾರದವರು ಅವರಿಗೆ ಎಲ್ಲಿಂದ ಸುದ್ದಿ ಬರುತ್ತದೆ ಎಂಬುದನ್ನು ಹೇಳಿದರೆ ಅವರೂ ಹೇಳುವರು.

SRI C. BYRE GOWDA.—It is as follows.—

"Government have considered this matter very carefully and had also deputed an Officer from the Agriculture Department to Madhya Pradesh to ascertain the position there."

Notification No. PLM 195 PNP 62 dated 30the April 1963 is as follows.

"In exercise of the powers Conferred by Rule 44-A of the prevention of Food Adulteration Rules, 1955, the Government of Mysore hereby specifics 15th May 1963, as the date from which no person shall or offer or expose for sale or have in his possession for the purpose of sale, under any description or for use as in ingredient in the preparation of any article of food intended for sale."

the Kerala High Court judgement is as follows.—

"In the result we dismiss the criminal revision petitions. We allow the appeal and convict both accused therein under Sec. 16 (1) (a) of the Prevecntion of Food Adulterstion Act read with R. 44-A of the Rules made thereunder. We sentence each of them to pay a fine of 100 in defaurlt to suffer rigorous imprisonment of one month. We further direct that the Kaesaridhal sezed from the accused be destroyed."

ಮಧ್ಯಪ್ರದೇಶಕ್ಕೆ ಯಾವ ಆಧಾರದಮೇಲೆ ಕಳಿಸಿದರು ? ಇದು ಅರ್ಥವಾಗುವುದಿಲ್ಲ. ಕೇಂದ್ರ ಸರಕಾರದ ಕಾನೂನಿನ ಮೇರೆಗೆ ನೋಟಿಫಿಕೇಷನ್ ಇಷ್ಯೂ ಆಗಿದೆ. ಕೇಸರಿಬೇಳೆ ಉಪಯೋಗ ಮಾಡಬಾರದು, ಅದು ಅನಾರೋಗ್ಯಕ್ಕೆ ಕಾರಣ ಎಂದು ನಿರ್ಬಂಧ ಹಾಕಿದ್ದಾರೆ. ಹಾಗಿರುವಾಗ ಅದನ್ನು ಸೀಜ್ ಮಾಡದವಮೇಲೆ ತಪ್ಪಿತಸ್ಥರಮೇಲೆ ಕ್ರಮ ಕೈಕೊಳ್ಳಬೇಕಾಗಿತ್ತು. ಆದರೆ ಹಾಗೆ ಮಾಡದೆ ಪುನಃ ಹಿಡಿದುದನ್ನು ವಾಪಸು ಕೊಟ್ಟು ಸಂಬಂಧಪಟ್ಟವರಮೇಲೆ ಯಾವ ಕ್ರಮವನ್ನೂ ಕೈಕೊಳ್ಳಬಾರದೆಂದು ಐ ಜಿ ಪಿ ಗೆ ನಿರ್ದೇಶನ ಕೊಟ್ಟಿದ್ದಾರೆ. ಇದರ ಅರ್ಥವೇನು ? ಇದರಿಂದ ಸರಕಾರ ಅಕ್ಯೂಸ್ಡ್ ನಂಬರ್ ಒನ್ ಎಂದು ಹೇಳಬೇಕಾಗಿದೆ. ಈ ಪರಿಸ್ಥಿತಿ ಇಂದಿದೆ. ಒಂದು ಕಡೆ ಹೇಳುವರು ಯಾರು ಹೋರ್ಡ್ ಮಾಡುವರೋ, ಯಾರು ಆಡಲ್ಟರೇಟ್ ಮಾಡುವರೋ ಅವರನ್ನು ತೋರಿಸಿ ಎಂದು. ಆದರೆ ಹಿಡಿದವರನ್ನು ಬಿಟ್ಟುಬಿಡುವರು. ಮತ್ತೊಂದು ಕಡೆ ಸಾಮೂಹಿಕವಾಗಿ ತಪ್ಪಿತಸ್ಥರಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಇದರ ಬಗ್ಗೆ ಸರಕಾರ ಪೂರ್ಣ ಜವಾಬ್ದಾರಿಯನ್ನು ಹೊರಬೇಕಾಗಿದೆ. ಮತ್ತು ಈ ದಿವಸ ಕಳ್ಳ ಹಣದ ಪ್ರಭಾವವಿದೆ.

ಸುಮಾರು ೭ ಸಾವಿರ ಕೋಟಿಯಿಂದ ಹಿಡಿದು ೧೫ ಸಾವಿರಕೋಟಿ ರೂಪಾಯಿಂತನಕ ಈ ಕಲಬೆರೆಕೆಯ ವಸ್ತುಗಳನ್ನು ಕಳ್ಳದಾಸ್ತಾನಿನಲ್ಲಿಟ್ಟಿದ್ದಾರೆಂದು ಹೇಳಲಾಗುತ್ತಿದೆ. ಆ ಚಿಕ್ಕಬಳ್ಳಾಪುರದಲ್ಲಿ ಇಂಥ ಕಲಬೆರೆಕೆಯ ವಸ್ತುಗಳನ್ನು ಮಾರಾಟ ಮಾಡುತ್ತಿದ್ದುದರಿಂದಲೇ ಅಲ್ಲಿ ಅದನ್ನು ಪ್ರತಿಭಟಿಸುವುದಕ್ಕೆ ಹೋದ ಜನರಲ್ಲಿ ಇಬ್ಬರನ್ನು ಪೋಲೀಸರು ಗುಂಡಿಟ್ಟು ಕೊಂದಿದ್ದಾರೆ ; ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ, ಆದರೆ ಇಲ್ಲಿಯುವರೆಗೆ ಯಾರು ಕಲಬೆರೆಕೆಯ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ ಅಂಥ ಗುಂಡಿಟ್ಟು ಜನರನ್ನು ಕೊಂದ ನಿದರ್ಶನಗಳಿಲ್ಲ ; ಅಂಥ ಪರಿಸ್ಥಿತಿ ಕೂಡ ಇಲ್ಲಿ ಉಂಟಾಗುವಂತಿಲ್ಲ. ಕಾರಣ ಏನೆಂದರೆ ಇಲ್ಲಿ ಇರತಕ್ಕ ಸರ್ಕಾರ ಜನತೆಯುಪರವಾಗಿಲ್ಲ. ಈ ಸರ್ಕಾರವೇ ನಿದರೂ ಸಮಾಜಘಾತುಕ ಶಕ್ತಿಗಳಿಗೇ ಉತ್ತೇಜನ ಕೊಡುತ್ತಿದೆ. ಈ ಸರ್ಕಾರಕ್ಕೆ ಜನರಹಿತಸಾಧನೆ ಬೇಕಾಗಿಲ್ಲವೆಂದು ಕಾಣುತ್ತಿದೆ. ಈಗಲೂ ಕೂಡ ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ— ಎಂದಿನವರೆಗೆ ಸರ್ಕಾರ ಈ ಸಮಾಜಘಾತುಕ ಶಕ್ತಿಗಳನ್ನು ಹತ್ತಿಕ್ಕುವುದಿಲ್ಲವೋ ಅಂದಿನವರೆಗೆ ಇಲ್ಲಿ ಜನರಿಗೆ ಸುಖವಿಲ್ಲ. ಆದಕಾರಣ ಸರ್ಕಾರ ಈ ಸಮಾಜಘಾತುಕ ಶಕ್ತಿಗಳನ್ನು ಹತ್ತಿಕ್ಕಲು ಕೂಡಲೇ ಸೂಕ್ತ ಕ್ರಮಗಳನ್ನು ಕೈಗೊಳ್ಳದಿದ್ದರೆ ಮುಂದೆ ದೇಶದಲ್ಲಿ ಉಂಟಾಗಬಹುದಾದ ಗಂಡಾಂತರಗಳಿಗೆ ಸರ್ಕಾರವೇ—ಈಗ ಆಡಳಿತ ನಡೆಸಲು ಯಾರೂ ಜವಬ್ದಾರಿಹೊತ್ತಿದ್ದಾರೋ ಅವರೇ ಕಾರಣರಾಗಬೇಕಾಗುವುದೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

11 30 A.M.

† ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ):—ಮಾನ್ಯ ಸಭಾಧ್ಯಕ್ಷರೇ: ಈ ಹೊತ್ತಿನ ದಿವಸ ಈ ಸಭೆಯಲ್ಲಿ ಏನು ಒಂದು ನಿರ್ಣಯ ಚರ್ಚೆಗೆ ಬಂದಿದೆ ಅದು ಕಾಲಕ್ಕೆ ತಕ್ಕಸಾಗಿದೆ ಎಂದು ಹೇಳದೆ ಗತ್ಯಂತರವಿಲ್ಲ. ಆದರೆ ನಾನೀಗ ದೇಶದ ಮೂಲೆ ಮೂಲೆಗಳಲ್ಲಿ ಏನು ಲೀಲಾಜಾಲವಾಗಿ ನಡೆಯುತ್ತಿದೆ ಆ ಕಳ್ಳ ಸಂತೆಯು ವ್ಯಾಪಾರ ಬಗ್ಗೆ ಮಾತನಾಡುವುದಕ್ಕೆ ಮುಂಚೆ, ಪ್ರಸಕ್ತ ಆಹಾರಸಚಿವರ ಬಗ್ಗೆ ಎರಡು ಪ್ರಶಸ್ತಿಯ ಮಾತುಗಳನ್ನಾಡಬೇಕಾಗಿದೆ. ಪಸಕ್ತ ಆಹಾರ ಸಚಿವರು ತಮ್ಮ ಬಿಗಿಮುಷ್ಟಿಯಿಂದ ಶಾಸನ ಬದ್ಧವಾದ ಕಾರ್ಯಕ್ರಮಗಳನ್ನು ಸಕ್ರಮವಾಗಿ ತೆಗೆದುಕೊಳ್ಳುತ್ತ ಬಂದುದರಿಂದ ದೇಶದಲ್ಲಿ ಇಂದು ಈ ಕಾಳಸಂತೆ ಹಾವಳಿ ಬಹಳಮಟ್ಟಿಗೆ ಧಮನವಾಗಿದೆ ಎಂದರೆ ಅದನ್ನು ಎಲ್ಲರೂ ಒಪ್ಪಲೇಬೇಕು.

(ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್)

ಆದರೆ ಈ ದಿವಸ ಇಲ್ಲಿ ನಾವು ಮಾಡುತ್ತಿರುವ ಚರ್ಚೆಯನ್ನು ನೋಡಿದಾಗ ನಮ್ಮ ಶಾಸಕರು ಕೆಲವರು ಹಿಡಿಯುತ್ತಿರುವ ದಾರಿಯನ್ನು ನೋಡಿದರೆ ದಾರಿಯಲ್ಲಿ ಹೋಗುತ್ತಿದ್ದವನೊಬ್ಬನಿಗೆ ಗಡ್ಡಕ್ಕೆ ಬೆಂಕಿ ಬಿದ್ದಾಗ ಅದನ್ನು ಆರಿಸುವುದಕ್ಕೆ ಪ್ರಯತ್ನ ಮಾಡದೆ, ಅತನಿಗೆ ಸ್ವಲ್ಪ ತಾಳು, ನನ್ನ ಕೈಲಿರತಕ್ಕ ಬೀಡಿಯನ್ನು ಅಂಟಿಸಿಕೊಳ್ಳುತ್ತೇನೆ —ಎನ್ನುವಂತಿದೆ. ಇಂದು ನಾವು ದೇಶದಲ್ಲಿ ಕಾಣುತ್ತಿರುವ ಈ ಒಂದು ಹಣದ ಉಬ್ಬರ ಪರಿಸ್ಥಿತಿ ಏನಿದೆ ಅದು ಇಂದು ದೇಶದಲ್ಲಿ ಯಾವ ಸರ್ಕಾರವಿದ್ದರೂ ಬಂದೇ ಬರುತ್ತಿತ್ತು. ಇದಕ್ಕೆ ಯಾರೂ ಹೊರತಲ್ಲ. ಯಾರು ದೇಶದ ಸ್ವಾತಂತ್ರ್ಯ ಸಾಧನೆಗಾಗಿ ಒಂದಾನೊಂದು ಕಾಲದಲ್ಲಿ ಬಹಳ ಗುರುತರವಾದ ಜವಬ್ದಾರಿಯನ್ನ ಹೊತ್ತು ಹೋರಾಟ ನಡೆಸಿದ್ದರೋ ಅಂಥ ಜನರನ್ನೇ ಈ ದಿವಸ ಜನರು ಅಂದರೆ ಆ ಜಯಪ್ರಕಾಶನಾರಾಯಣರಂಥ ದೇಶಪ್ರೇಮಿಗಳನ್ನು ಜನತಗೆ ದೇಶದಲ್ಲಿ ಅಲ್ಲಸಲ್ಲದ ಚಳುವಳಿ ನಡೆಸುವುದರತ್ತ ಎಳದಿದೆ. ಇದು ದೇಶದ ದೌರ್ಭಾಗ್ಯ. ದೇಶದಲ್ಲಿ ಉಂಟಾಗಿರತಕ್ಕ ಇಂಥ ಕಷ್ಟಕಾಲದ ಪರಿಸ್ಥಿಯನ್ನು ತಮ್ಮ ಸ್ವಾರ್ಥದ ಉಪಯೋಗಕ್ಕೆ ಬಳಸಿಕೊಂಡು ವಿರೋಧಪಕ್ಷಗಳು ಅವರನ್ನು ಹೀಗೆ ದೇಶದಲ್ಲಿ ಮತ್ತೊಂದು ಚಳುವಳಿ ಎಬ್ಬಿಸಲು ಮತ್ತು ಉಂಟಾಗಿರತಕ್ಕ ಪರಿಸ್ಥಿಯನ್ನು ಮತ್ತಷ್ಟು ಉಲ್ಬಣಗೊಳಿಸಲು ಹೊರಟಿರುವುದು ನಾಚಿಗೆಗೇಡಿನ ಕೆಲಸ. ದೇಶದಲ್ಲಿ ಎದ್ದಿರತಕ್ಕ ಪರಿಸ್ಥಿತಿ ಯನ್ನು ಮತ್ತು ಜನತೆಗೆ ಉಂಟಾಗಿರತಕ್ಕ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಜನರನ್ನು ಹೊಂದಾವಣಿಕೆ ಮಾಡದೆ ಅವರಿಗೆ ಹುಚ್ಚೆಬ್ಬಿಸಿ — ರೊಚ್ಚೆಬ್ಬಿಸಿ ದೇಶದ ನೆಮ್ಮದಿಯನ್ನು ಅಲ್ಲೋಲ ಕಲ್ಲೋಲ ಮಾಡತಕ್ಕ ಜನಕ್ಕೆ ಏನು ಹೇಳಬೇಕೋ ಗೊತ್ತಿಲ್ಲ ಈ ದಿವಸ ದೇಶದಲ್ಲಿ ಅಭಾವ ಪರಿಸ್ಥಿತಿ ಉಂಟಾಗಿರುವುದು ಆಡಳಿತಪಕ್ಷಕ್ಕೇನು ಸಂತೋಷವನ್ನು ಉಂಟುಮಾಡಿಲ್ಲ. ಪ್ರತಿಒಬ್ಬರ ಮನೆಯಲ್ಲೂ ಮುಂದೆ ಹೇಗೆ ಜೀವನ ಮಾಡುವುದು ಎಂದು ಆಡತಕ್ಕ ಮಾತುಗಳನ್ನು ಕೇಳಿದರೆ ನಾವು ತಲೆಯೆತ್ತಿ ತಿರುಗುವಂತಿಲ್ಲ. ನಮ್ಮ ಸಂಸಾರಗಳಲ್ಲೂ ನಾವು ಬೈಗಳನ್ನು ಕೇಳುತ್ತಿದ್ದೇವೆ. ಆದರೆ ದೇಶದಲ್ಲಿ ಇಂದು ಇಂಥ ಒಂದು ಪರಿಸ್ಥಿತಿ ಉಂಟಾಗುವುದಕ್ಕೆ ಯಾರು ಹೊಣೆ ? ಇದಕ್ಕೆ ನಮ್ಮ ಸರ್ಕಾರ ಹೊಣೆಯೇ ? ದೇಶದಲ್ಲಿ ಯಾವತ್ತೂ ಈ ಪೂರೈಕೆ ಮತ್ತು ಬೇಡಿಕೆಗಳು ಒಂದು ಸಮತೋಲನದಲ್ಲಿರಬೇಕು ಅದು ತಪ್ಪಿದಾಗ ಇಂಥ ಒಂದು ಗುರುತರವಾದ ಪರಿಸ್ಥಿತಿ ಎದ್ದೇ ಏಳುತ್ತದೆ ಹಿಂದೆ ಒಂದಾನೊಂದು ಕಾಲ ದಲ್ಲಿ ಮೈತುಂಬ ಬಟ್ಟೆಹಾಕದ ಜನರೆಷ್ಟಿರುತ್ತಿದ್ದರು, ಅದರೆ ಈ ದಿವಸ ಅವರಲ್ಲ ಹೇಗಿದ್ದಾರೆ ? ಹಿಂದೆ ತಲೆಗೆ ಎಂದೂ ಎಣ್ಣೆಯನ್ನು ಕೇಳಿದಿದ್ದ ಜನರೆಲ್ಲಾ ಇಂದು ಎಣ್ಣೆಯನ್ನು ಕೇಳುತ್ತಿದ್ದರೆ ಹೇಗೆ ? ಹೀಗೆ ವಸ್ತುಗಳನ್ನು ಕೇಳತಕ್ಕ ಜನರ ಸಂಖ್ಯೆ ಏರುತ್ತಹೋಗುತ್ತದೆ—ಆದರೆ ಅದಕ್ಕೆ ತಕ್ಕಂತೆ ಸಾಮಾನುಗಳ ಉತ್ಪನ್ನವನ್ನೂ ಸಹಾ ಹೆಚ್ಚಿಸದಿದ್ದರೆ, ಅಥವಾ ಉತ್ಪನ್ನ ಕಡಿಮೆಯಾದರೆ ಇಂಥ ಪರಿಸ್ಥಿತಿ ಉದ ವಾಗಲೇಬೇಕು ; ಇದು ಸ್ವಾಭಾವಿಕ. ನಾವು ಈಗ ಉದಾಹರಣೆಗೆ ಸೀಮೆಗೊಬ್ಬರದ ವಿಚಾರ ತೆಗೆದು ಕೊಳ್ಳೋಣ : ಹಿಂದೆ ಒಂದು ಕಾಲದಲ್ಲಿ ರೈತರು ಆ ಗೊಬ್ಬರವನ್ನು ಹಾಕಿದರೆ ಭೂಮಿ ಹಾಳಾಗುತ್ತ ದೆಂದು ಹೇಳುತ್ತಿದ್ದರು. ಅದರೆ ಈ ದಿವಸಪ್ರತಿಯೊಬ್ಬ ರೈತನಿಗೆ ಸೀಮೆ ಗೊಬ್ಬರ ಬೇಕೇ ಬೇಕು. ಹೀಗೆ ಒಂದಾನೊಂದು ಕಾಲಕ್ಕೆ ಇದರ ಅಗತ್ಯ ನೂರಕ್ಕೆ ನೂರಕ್ಕೆ ಹೆಚ್ಚುತ್ತೆ ಆಗ ಇದನ್ನು ಬಳಸತಕ್ಕ ಜನರ ಸಂಖ್ಯೆ ಜಾಸ್ತಿಯಾಗುತ್ತದೆ ಎಂಬುದನ್ನು ಆಲೋಚನೆಮಾಡಿ ಈ ಗೊಬ್ಬರದ ಉತ್ಪತ್ತಿಯನ್ನು ಜಾಸ್ತಿಮಾಡದೆ ಇದ್ದಂಥ ಸರ್ಕಾರವನ್ನು ನಡೆಸಿದ ಜನರು ಇಂದು ನಮ್ಮ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಅವರಿಗೆ ನಾಚಿಕೆಯಾಗುವುದಿಲ್ಲವೇ ? ಇಂಥ ಒಂದು ಪರಿಸ್ಥಿತಿಯನ್ನು ತಪ್ಪಿಸಲು ಹಿಂದೆ ಇದ್ದ ಸರ್ಕಾರಗಳು ಎಷ್ಟು ಸೀಮೆ ಗೊಬ್ಬರದ ಕಾರ್ಖಾನೆಗಳನ್ನು ರಾಜ್ಯದಲ್ಲಿ ಸ್ಥಾಪನೆಮಾಡಿವೆ ? ಹಿಂದೆ ಸರ್ಕಾರ ನೀವು ಸೀಮೆ ಗೊಬ್ಬರವನ್ನು ಹಾಕಿ ಎಂದು ರೈತರಿಗೆ ಉತ್ತೇಜನ ಕೊಟ್ಟಿತೇವಿನಃ ಆ ಪ್ರಚಾರಕಾರ್ಯವನ್ನು ಬಿಟ್ಟರೆ ಅದು ಇದರ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೇನು ಪ್ರಯತ್ನಗಳನ್ನು ಮಾಡಿದೆ ? ಹಿಂದೆ ಇದ್ದ ಸರ್ಕಾರ ಇದನ್ನು ಒಂದು ನಿಮಿಷ ಕಾಲ ಯೋಚನೆ ಮಾಡಿದ್ದರೆ—ಇದರ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದರೆ ದೇಶದಲ್ಲಿ ಇಂದು ಇಂಥ ಕಷ್ಟದ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ.

ಇನ್ನು ದೇಶದಲ್ಲಿ ಕಾಳಸಂತೆಕೋರರ ಹಾವಳಿ ಹೆಚ್ಚಾಗಿದೆ ಎಂದು ಹೇಳುತ್ತಿದ್ದಾರೆ. ಈ ದಿವಸ ಈ ಗೊಬ್ಬರ ವಗೈರೆ ಅನೇಕ ಅಗತ್ಯವಸ್ತಗಳ ವಿತರಣೆಯ ಕಾರ್ಯ ಸಹಾಕಾರ ಸಂಘಗಳಲ್ಲಿ ನಿಂತಿದೆ. ರಾಜ್ಯದಲ್ಲಿ ರತಕ್ಕ ಸಹಕಾರ ಸಂಘಗಳಲ್ಲಿ ಬಳವಂಟ್ಟಿ ಅವುಗಳೆಲ್ಲಾ ಈ ದಿವಷ ಯಾವ ಪಕ್ಷದವರ ಕೈಲಿವೆ ? ದೇಶದಲ್ಲಿ ಇಂದು ಆ ವಸ್ತುಗಳ ವಿತರಣೆ ಸರಿಯಾಗಿ ನಡೆಯದೆ-ತೊಂದರೆ ಉಂಟಾಗಿದ್ದರೆ ಅದಕ್ಕೆ ಯಾರು ಹೊಣೆ ? ನಮ್ಮ ಸರ್ಕಾರ ಅದಕ್ಕೆ ಹೊಣೆಯೇ ? ಆದಕಾರಣ ನಾನು ಮೊದಲೇ ಹೇಳಿದಂತೆ ನಮ್ಮ ಸಮಾಜದಲ್ಲಿ ಮಾರಸಾಧಕ ಜನರು ಎಲ್ಲಿಯವರಗೆ ಇರುತ್ತಾರೆ ಅಲ್ಲಿಯವರೆಗೆ ನಮಗೆ ಸರ್ಕಾರವನ್ನು ಸುಲಲಿತವಾಗಿ ನಡೆಸುವುದಕ್ಕಾಗುವುದಿಲ್ಲ. ಹಿಂದೆ ನಡೆದ ಮಹಾ ಚುನಾವಣೆಗಳಲ್ಲಿ ನಮ್ಮ ಸರ್ಕಾರ ಆಡಳಿತಕ್ಕೆ ಬರಲು ವಂತಕೊಡದಿದ್ದ ಜನರು ಇದ್ದಾರೆ. ಅವರು ಯಾರು ಎಂದರೆ ಬಂಡವಾಳಷಾಹಿ ಜನರು. ಅವರು

ಯಾವತ್ತೂ ನಮ್ಮ ಸರ್ಕಾರ ಮುರಿದುಬೀಳುವುದಕ್ಕೋಸ್ಕರ ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಮುರಿದುಬಿದ್ದ ಕಾಲಕ್ಕೆ ಅವರು ಹಾಲನ್ನುಕುಡಿಯುತ್ತಾರೆ. ಈ ದಿವಸ ಸಮಾಜದಲ್ಲಿ ಯಾರು ಕಷ್ಟಕ್ಕೆ ಒಳಗಾಗಿರತಕ್ಕವರು ಎಂದರೆ ಮಧ್ಯಮವರ್ಗದ ಜನರು. ಎಂದಿನವರೆಗೆ ಸಮಾಜದಲ್ಲಿ ಈ ಕಳ್ಳಹಣ ಕಪ್ಪುಹಣ ಸರಿಯಾದ ಹಣದ ಜೊತೆಯಲ್ಲಿ ಸಮತೋಲನವಾಗಿ ಕೆಲಸಮಾಡುತ್ತದೆ ಅಂದಿನವರೆಗೆ ಈ ಉಬ್ಬರ ತಗ್ಗುವುದಿಲ್ಲ. ಅಲ್ಲದೆ ಈ ಹಣದುಬ್ಬರ ತಲೆಯೆತ್ತಿದ್ದು ಇಲ್ಲಿಗೆ ವರ್ಷ ಎರಡು ವರ್ಷಗಳಲ್ಲಿ ಅಲ್ಲ. ನಮ್ಮ ಸರ್ಕಾರ ಬಂದು ಇಲ್ಲಿಗೆ ೨ ವರ್ಷಗಳಾಯಿತು. ಇದಕ್ಕೆಲ್ಲಾ ಹಿಂದೆ ಇದ್ದ ಸರ್ಕಾರಗಳು ಬೆಳೆಯುವುದಕ್ಕೆ ಅವಕಾಶಮಾಡಿಕೊಟ್ಟವು. ಅಂದಾಗ ಇದಕ್ಕಾಗಿ ನಮ್ಮ ಸರ್ಕಾರವನ್ನು ಟೀಕೆ ಮಾಡಿದ್ದರಿಂದ ಪ್ರಯೋಜನವಿಲ್ಲ ಎಲ್ಲಿನೋಡಿದರೆ ಅಲ್ಲಿ ಎಲ್ಲರೂ ಈ ಉಬ್ಬರವನ್ನು ತಪ್ಪಿಸಲು ಡೀಮಾನಿಟೈಜ್ ಮಾಡಿ ಎಂದು ಹೇಳುತ್ತಿದ್ದಾರೆ. ಆದರೆ ಎಲ್ಲಿಯತನಕ ಈ ಬಿಳೀ ಹಣದ ಜೊತೆಯಲ್ಲಿ ಆ ಕಪ್ಪು ಹಣ ಹೋರಾಟ ನಡೆಸುತ್ತದೆ ಅಲ್ಲಿಯತನಕ, ಇದರ ಪೈಪೋಟಿ ನಿಲ್ಲುವತನಕ ಈ ಉಬ್ಬರವನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ.

ಡಿಮ್ಯಾಂಡ್ ಅಂಡ್ ಸಪ್ಲೈ ಎಂಬ ತಿಯರಿ ಬಗ್ಗೆ ನಾವು ಯೋಚನೆ ಮಾಡುವುದಾದರೆ ಇವತ್ತಿನ ದಿವಸ ದೇಶದಲ್ಲಿ ಏನು ಬೇಡಿಕೆ ಇದೆಯೆಂಬುದನ್ನು ನೋಡಬೇಕು. ನಾನು ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇದರಲ್ಲಿರತಕ್ಕ ನ್ಯೂನತೆಗಳನ್ನು ನಾವು ಹೋಗಲಾಡಿಸದ ಹೊರತು ಕೆಲವು ನಿಯಂತ್ರಣಗಳನ್ನೂ ಕೂಡ ಜಾರಿಗೆ ತರುವುದು ಕಷ್ಟವಾಗುತ್ತದೆ. ನಾನು ಮೊನ್ನೆ ಟ್ರಾವಂಕೂರಿಗೆ ಹೋಗಿದ್ದೆ. ನಾನು ಹೋಗಿ ಬರುತ್ತಿರುವಾಗ ಮಂಜೇಶ್ವರ ಎಂಬ ಸ್ಥಳದಲ್ಲಿ ನಮ್ಮ ಇಬ್ಬರು ಪೋಲೀಸ್ ಕಾನ್‌ಸ್ಟೇಬಲ್ ಅವರನ್ನು ಅಲ್ಲಿನ ಜನರು ಹಿಡಿದು ಹೊಡೆದರು. ಅದರ ಬಗ್ಗೆ ನಾನು ಕಾಲ್ ಅಟೆನ್ಷನ್ ನೋಟೀಸನ್ನು ಸಹ ಕಳುಹಿಸಿದ್ದೇನೆ. ಅದು ಈ ಸಭೆಯಲ್ಲಿ ಎಂದು ಬರುತ್ತದೋ ಗೊತ್ತಿಲ್ಲ. ಇಲ್ಲಿಂದ ಅಕ್ಕಿ ಗಡಿ ಧಾಟಿ ಅಲ್ಲಿಗೆ ಸಾಗಾಣಿಕೆಯಾಗುತ್ತಿತ್ತು. ಅಲ್ಲಿ ಮಂಜೇಶ್ವರದಲ್ಲಿಯೇ ಕಳ್ಳಸಾಗಾಣಿಕೆಯನ್ನು ಹಿಡಿದುಕೊಂಡು ಹೋಗುವ ವ್ಯವಸ್ಥೆ ಅಲ್ಲಿ ಆಗುತ್ತಿದೆ ಅದರೆ ಕೇರಳ ಪೋಲೀಸಿನವರಿಗೂ ಮತ್ತು ನಮ್ಮ ಪೋಲೀಸಿನವರಿಗೂ ಇದರಲ್ಲಿ ಒಂದು ರೀತಿಯ ಪೈಪೋಟಿ ಇದೆ. ಆದರೆ ಅಲ್ಲಿ ಅಕ್ಕಿ ಹಿಡಿದದ್ದನ್ನು ಸರ್ಕಾರಕ್ಕೆ ಕೊಡುತ್ತಾ ಇಲ್ಲ ಅದನ್ನು ಅವರೇ ತೆಗೆದುಕೊಳ್ಳುವುದಕ್ಕೆ ಹೋಗುತ್ತಿದ್ದಾರೆಂಬ ಮಾತನ್ನು ನಾನು ಕೇಳಿದೆ. ಇದರಿಂದೇನು ಗೊತ್ತಾಗುತ್ತದೆಂದರೆ ಸರ್ಕಾರದ ಪ್ರೊಕ್ಯೂರ್‌ಮೆಂಟಿನಲ್ಲಿಯೂ ಕೂಡ ಕೆಲವು ಇಂತಹ ನ್ಯೂನತೆಗಳು ಆಗುತ್ತಾ ಇರುತ್ತವೆಂಬ ಅಂಶವನ್ನು ಮಾನ್ಯ ಆಹಾರ ಮಂತ್ರಿಗಳು ಗಮನಿಸಬೇಕಾಗಿದೆ. ಬಹಳ ಕಡೆಗಳಲ್ಲಿ ಹೀಗೆ ಕಳ್ಳಸಾಗಾಣಿಕೆಯಿಂದ ಹಿಡಿದಂಥ ಅಕ್ಕಿ ಸರ್ಕಾರಕ್ಕೆ ಬರುತ್ತಲೆ ಇಲ್ಲ. ನಮ್ಮ ಪಕ್ಷದ ಕೆಲವು ಮಿತ್ರರು ಹಾಗೂ ಕೇರಳಿಕ್ಕೆ ಸೇರಿದಂಥ ಶಾಸಕರೂ ಸಹ ಈ ಮಾತನ್ನು ಹೇಳಿದರು. ಇದು ಈಗ ಪ್ರತಿದಿನವೂ ಅಲ್ಲಿ ನಡೆಯುತ್ತಲೆ ಇದೆ. ಬಹುತೇಕವಾಗಿ ಕಳ್ಳಸಾಗಾಣಿಕೆಯಿಂದ ಬಂದಂಥ ಪಧಾರ್ಥಗಳನ್ನು ಮಾತ್ರ ಸರ್ಕಾರಕ್ಕೆ ಕೊಡುವುದುಂಟು. ಕೇವಲ ಒಂದೆರಡು ಮೂಟೆಗಳು ಸಿಕ್ಕಿದರೆ ಅವು ಹೇಗೆಯೋ ದುರುಪಯೋಗವಾಗುತ್ತದೆ. ಇನ್ನೊಂದು ಪರಿಸ್ಥಿತಿಯನ್ನು ಇದರಲ್ಲಿ ನಾವು ಗಮನಿಸಬೇಕಾಗಿದೆ. ನಾವು ಕೆಲವು ವಸ್ತುಗಳಿಗೆ ಕಂಟ್ರೋಲ್ ಮಾಡಿರುತ್ತೇವೆ. ಜೊತೆಗೆ ಓಪನ್ ಮಾರ್ಕೆಟ್ಟಿನಲ್ಲಿಯೂ ಕೂಡ ಆ ವಸ್ತುಗಳು ದೊರೆಯುತ್ತವೆ. ನಮ್ಮ ಸರ್ಕಾರದಲ್ಲಿ ಇಂತಹ ಒಂದು ದ್ವಂದ್ವ ನೀತಿಯನ್ನು ಮುಂದು ವರಿಸುವುದನ್ನು ಕೈಬಿಡಬೇಕು, ಕಂಟ್ರೋಲ್ ಅಂದರೆ ಸಂಪೂರ್ಣವಾಗಿ ಕಂಟ್ರೋಲ್ ಇರಬೇಕು. ಸಾಮಾನ್ಯವಾಗಿ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಸಕ್ಕರೆ ಈಗ ಕಂಟ್ರೋಲ್‌ನಲ್ಲಿ ಸಿಗುತ್ತದೆ ಮಾರ್ಕೆಟ್ಟಿನಲ್ಲಿಯೂ ಸಹ ಸಕ್ಕರೆ ಸಿಗುತ್ತದೆ. ಕಂಟ್ರೋಲ್‌ನಲ್ಲಿ ಸಕ್ಕರೆ ಬೆಲೆ ಒಂದೆರಡು ರೂಪಾಯಿ ಚಿಲ್ಲರೆ ಇದ್ದರೆ ಓಪನ್ ಮಾರ್ಕೆಟ್ಟಿನಲ್ಲಿ ನಾಲ್ಕು ರೂಪಾಯಿ ಚಿಲ್ಲರೆಯಾಗಿ ಮಾರುತ್ತಾರೆ, ಒಂದಕ್ಕೆ ಮೂರರಷ್ಟು ಕೇವಲ ಮೂರನೆಯ ಒಂದು ಭಾಗದ ಬೆಲೆಗೆ ಕೊಡಬೇಕಾಗಿದೆ. ಆ ರೀತಿ ಕೊಟ್ಟರೂ ಅನೇಕ ಕಡೆಗಳಲ್ಲಿ ಸಕ್ಕರೆ ಸಿಗದೇ ತೊಂದರೆಗೆ ಅನೇಕ ಜನರು ಈಡಾಗುತ್ತಾ ಇರತಕ್ಕ ಪರಿಸ್ಥಿಯನ್ನು ನಾವು ಈಗ ಪ್ರತಿದಿನವೂ ನೋಡುತ್ತಿದ್ದೇವೆ. ಇದರಿಂದ ವ್ಯಾಪಾರಸ್ಥರಿಗೆ ಅದರಲ್ಲಿಯೂ ಹೆಚ್ಚಿಗೆ ದುಡ್ಡು ಮಾಡಿಕೊಳ್ಳಬೇಕೆಂಬ ಆಸೆಯುಳ್ಳ ವ್ಯಾಪಾರಸ್ಥರಿಗೆ ಹೆಚ್ಚು ಹಣವನ್ನು ಸಂಪಾದನೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆಗ ಹೇಗಾದರೂ ಮಾಡಿ ಅಂತಹವರು ಕಂಟ್ರೋಲ್‌ನಲ್ಲಿ ಕೊಟ್ಟಿರತಕ್ಕ ಸಕ್ಕರೆಯನ್ನು ತಾನು ತೆಗೆದುಕೊಂಡು ಹೆಚ್ಚು ಲಾಭ ಪಡೆಯುವುದಕ್ಕೆ ಪ್ರಯತ್ನಪಡುತ್ತಾರೆ. ಇವತ್ತು ಸಕ್ಕರೆಯನ್ನು ಉಪಯೋಗಿಸುವ ಜನರು ಕೇವಲ ಸೇಕಡ ೨೦ರಷ್ಟು ಮಾತ್ರ ಇದ್ದಾರೆ. ಆದರೆ ರೇಷನ್ ಕಾರ್ಡ್‌ಗಳನ್ನು ನೂರಕ್ಕೆ ನ. ರರಷ್ಟು ಜನರಿಗೆ ಕೊಡುವುದರಿಂದ ಅವಲ್ಲಿ ಸೇಕಡ ೨೦ ಭಾಗದ ಜನರು ಮಾತ್ರ ರೇಷನ್ ಕಾರ್ಡ್‌ನಲ್ಲಿ ಸಕ್ಕರೆಯನ್ನು ತೆಗೆದುಕೊಂಡು ಇನ್ನುಳಿದ ಸೇಕಡ ೮೦ರಷ್ಟು ಜನರು ತೆಗೆದುಕೊಳ್ಳುವ ಸಕ್ಕರೆಯನ್ನು ವ್ಯಾಪಾರಸ್ಥರು ತೆಗೆದುಕೊಂಡು ಸಕ್ಕರೆ ದರದ ಮೂರರಷ್ಟನ್ನು ಸಂಪಾದನೆ ಮಾಡುವ ಅವಕಾಶವನ್ನು ಕಲ್ಪಿಸಿಕೊಳ್ಳುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ

(ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್)

ಈಗ ಕಂಟ್ರೋಲ್ ರೇಟಿನಲ್ಲಿ ಇರತಕ್ಕ ಎಲ್ಲಾ ವಸ್ತುಗಳನ್ನೂ ಓಪನ್ ಮಾರ್ಕೆಟ್ಟಿನಲ್ಲಿ ವ್ಯಾಪಾರ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಪೂರ್ಣವಾಗಿ ಎಲ್ಲ ಪದಾರ್ಥಗಳನ್ನು ಕಂಟ್ರೋಲ್ ರೇಟಿನಲ್ಲಿಯೇ ಜನರಿಗೆ ಕೊಡಬೇಕು ಅಥವಾ ಸರ್ಕಾರದವರೇ ಸೊಸೈಟಿಗಳ ಮುಖಾಂತರ ಕಂಟ್ರೋಲ್ ರೇಟಿನಲ್ಲಿ ಎಲ್ಲ ಪದಾರ್ಥಗಳನ್ನೂ ವ್ಯಾಪಾರ ಮಾಡಿಸಬೇಕು,

ಕೊನೆಯದಾಗಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI B. B. SAYANAK (Belgaum).— Mr. Deputy Speaker Sir, I rise to speak on the resolution tabled by Sri T. R. Shamanna and Sri H. D. Deve Gowda, the Leader of the Opposition. First I ask why there is scarcity ? I am putting this simple question When there was parliamentary election in the year 1971, the Prime Minister of India said 'Gareebi Hatao.' After 3 or 4 years the prices of essential commodities are rising to cent percent I do not understand whether this is Gareebi hatao or gareebi Badavo. I am very sorry to say that when there is budget ordinances will be issued. The prices all commodities are increasing by 25 per cent. There is an ordinance regarding the essential commodities. The price of rice is increasing by 25%. Why this is so ? I am of the opinion that this is due to mismanagement by Government. The would-be President Mr. Fakhruddin Ali Ahmed has stated in Parliament that the production of rice is increasing, If that is the case why there is this scarcity ? if there is scarcity why the Government of India is sending 20,000 tonnes of Banumathi rice to Iron.

(Some Hon. Member said this is in-exchange of oil)

I know it is an international policy. I know these scarcities are not artificial scarcities. The price of butter is Rs. 16 per Kilo. There is cent cent per increase in the price of fertilisers. There is cent per cent increase in the price of tyres. We do not find a single person who has not practiced adulteration in this country. When that is the thing, what the Government is doing ? A man who had adulterated the fertiliser has got golden medal from the commercial Institutions. His case is pending before the Court in Belgaum; The Government know all these things. The Government machinery it self is supporting the black marketeers. This is my charge. Sri Khidwai, the then Food Minister of India, had once stated that when there is control there is black marketing and when there is black marketing there is corruption. There is corruption in every walk of life. What is the Government doing, I do not understand. It is doing nothing, If the Government wants to do justice to the agriculturists and the downtrodden, they should take prompt action to check corruption. We are also corrupt. The man who is encouraging corruption is also corrupt. But we must do some justice to the poor people. But we are not doing it. Some of the people from our areas have become millionaires.

You are not taking action against the big people of your party. Merchants are bringing jowar from Bijapur to Belgaum. But what are the police doing ? They must pay the charges of Rs. 50 to 200 per tonne. Does the Government exist in the State ? The Government have no control over the Police.

The Police are taking money from the merchants. When this is the attitude of the Police how can there be any improvement?

SRI D. B. KALMANKAR.— If the hon. Member yields for a minute, "Everybody is corrupt including us" This is what you said during your speech, If that is the case, how can a solution be found?

SRI B. B. SAYANAK.— I did not say that The Government machinery-the persons who are ruling the State, they are most corrupt. Why have the prices been increasing? It is due to the inconsistent policy of the Central Government.

SRI K.H. PATIL.—My hon. friend is making a very wild allegation that every one in the Government is corrupt. I do welcome his statement provided he has any charges to be proved. When an allegation is made on the floor of the House, especially by hon. Members, with full responsibility, it is better they are armed with facts and figures. Otherwise, mere denial by a Minister is not sufficient. I have to take action. If charges are there, let him level the charges on the floor of the House, so that I can take action.

SRI S. BANGARAPPA.— On several occasion, we have heard the Hon. Chief Minister Saying that corruption is there in the State, of course in varying degrees.

SRI K. H. PATIL.— He said every one in the Ministry is corrupt

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಹೇಳುವುದರಲ್ಲಿ ಅರ್ಥ ಇದೆ. ಈಗ ಏನಾಗಿದೆ ಎಂದರೆ ಕೇಂದ್ರದಲ್ಲಿ ಲೋಕಸಭೆಯಲ್ಲಿ ನಮ್ಮ ನಾಯಕರಾದ ಶ್ರೀ ಮಧುಲಿಮಯೆ ಅವರು ನಿರ್ದಿಷ್ಟವಾಗಿ ಚಾರ್ಜ್ ಮಾಡಿದರೂ ಕೂಡ ವಿಚಾರಣೆ ಮಾಡುವುದಕ್ಕೆ ಆಗದೇ ಇರುವಂತಹ ಸ್ಥಿತಿಯಲ್ಲಿರುವಾಗ ಇಲ್ಲಿ ಹೇಳಿ ಏನು ಪ್ರಯೋಜನ?

MR. DEPUTY SPEAKER.— What Mr. Madhu Limaye referred to was something higher up. We are at a lower stage. Referring to that, I have once said while referring to Mr. Puttaswamy, if anybody wants to make a charge, it should be well substantiated. It should be just like impeachment of Warren Hastings by W. Burke. Otherwise, it becomes stray talk. If the hon. Members have got certain facts and figures against certain officials, it can very well be done. Simply because Mr. Konandur Lingappa is coming from a taluk having higher rain-fall says, a judicial committee cannot be formed.

ಶ್ರೀ ಎಸ್. ಬಂಗಾರಪ್ಪ.— ಅಂಕಿ ಸಂಕೆಗಳನ್ನು ಕೇಳುವುದಕ್ಕೆ ನಮ್ಮ ಹತ್ತಿರ ಅಧಿಕಾರ ಇದ್ದಿದ್ದರೆ ಇಷ್ಟು ಹೊತ್ತಿಗೆ ಎಷ್ಟೋ ಜನ ಜೈಲಿನಲ್ಲಿ ಇರಬೇಕಾಗಿತ್ತು. ಆದರೆ ನಮಗೆ ಅಧಿಕಾರ ಇಲ್ಲ.

MR. DEPUTY SPEAKER.— ಫ್ಯಾಕ್ಟ್ಸ್ ಕಲೆಕ್ಟ್ ಮಾಡುವುದಕ್ಕೆ ಅಧಿಕಾರ ಬೇಡ. It requires only a tenacious outlook.

SRI B. B. SAYANAK.— Regarding corruption, if you visit the goldsmith's shop and if you ask the goldsmith who is purchasing gold, you will find out only the Government seavant is doing it Shall I ask the Minister: What are you doing? If you have guts and are serious about eradicating corruption, you can send your C.I.Ds. or any officer to the shop of the goldsmiths.

Regarding fertilisers, in Maharashtra there is ample fertilisers. Fertiliser is coming from border area in Maharashtra to theb order area of the Karnataka. why is there shortage of fertilisers in Karnataka and why only 6 KGs or 10 KGs per hectore you are supplaing? why are people purchasing these fertilisers in the black market? you are asking the agricu'turists to raise the production of rice, wheat and other foodgrains How can the agriculturists produce more? The agriculturist is the back-bone of the nation. You must help the agriculturist and you must give him fertilisers for grow more food campaign. What is the position now? One of the Hon. Ministers Sri Siddaveerappa last time said in the Assembly that you should not use fertilisers.

MR. DEPUTY SPEAKER — I know what Mr. H. Siddaverappa referred to. That is a book by an American woman. He relied upon the contents of the book stating that insecticides and fungicides should not be unnecessarily used but shold be used where it should be reasonable used. I asked for the book and huriedly went through the book. He referred that fertilisers should beused in a very economic, balanced way. His main allegation was against fungicides and insecticides.

SRI B. B. SAYANAK.— You are quoting the case of Japan. Why is Japan producing more? Because they are using fertilisers You are preaching the opposite thing in our area. Is it a good thing on the part of the Ministers?

Another thing: now a days, according to my information, the Government of Karnataka has not given indent to the Central Government for fertilisers. That is why there is shortage of fertilisers. why has not the Government of Karnataka sent indent last year, when there is scarcity? I want to say that every scarcity is artifical scarcity. I can understand the scarcity regarding rice, Jowar, etc. what about the paper scarcity? what about other things? Is it not an artificial scarcity? what is your machinery doing? I want to ask the Government this question. Your machinery is supporting these black marketers.

But according to me, this is a socialistic pattern of Government.,

12 NOON

SRI B.B. SAYANAK.—We must provide house to reside, food to live, clothes to put and medicine for the health. There is an adulteration in the madicine also. I am very sorry to mention here that everywhere there is a corruption I request the hon. Minister, who is an able Minister, atleast to eradicate the adulteration.

I thank the Chair for having given me an opportunity to express my views.

† SRI PRABHAKAR TELKAR (Kelgi), —Hon. Deputy Speaker, I would like to submit before this hon'ble August House the present situation regarding the supply of food grains and essential commodities in the State and in particular what is happening in Gulbarga District.

Regarding the supply of food grains, particularly in the rural areas, I would like to state that even though the Government officials are trying their best to supply with food grains, but what we see is that food grains are notsupplied properly because the agency between the Government and the purchaser is not working properly. I would like to mention that there is abundant supply of Milo in our area but the rules and regulations which are being adopted for supplying the same through the Panchayats or Societies are coming in the way of proper distribution The Societies and the Panchayats are not coming forward to lift the Milo, which is the cheaper variety of Jowar They only come forward to lift Sugar. Wheat and Rice with the result the poorer classes are not getting the Milo properly. Therefore, I would suggest that in rural areas, some ration cards should be supplied to the people and any other proper agency or even individuals who are willing and ready to supply Milo and cheaper variety of food grains should be allowed to distribute the food grains As regards the ration cards to be supplied in the rural areas, I feel that there should be of two types of ration cards. one should be of green colour and the should be of red colour. I feel that people in the rural areas who are possessing more than 25 30 acres of agricultural land, do not need Jowar or the other food grains. They want only the Sugar, Wheat and Rice. To such people the green coloured ration card should be given. In the case of labourers or the persons having less than 10 acres of agricultural land should be supplied with the red coloured ration card so that sufficient food grains could be given to them. It would also enable the Government to supply double the quantity of the food grains like Milo and Jowar to the poorer sections in the rural areas. If this distinction is made I feel that the food grains which are in the possession of the Government can be distributed properly and hope that the needy persons will be benefited to a great extent.

The difficulty in getting the other essential commodity which the people are facing to- day in Gulbarga District, in urban area, is the

(SRI PRABHAKAR TELKAR)

Soap. The Soap which was available at 0-90 Paise per cake or Re.1/- per cake has gone up to Rs. 2/- and more than that also. I would like to mention here that Soap is also not availale in the market. What has happened to this? God alone knows, because I came to know that the Soap has not been included in the list of Essential Commodities. If that is the fact. I feel that the Soap should also be included in the list of the Essential Commodities, and proper distribution of Soap should me made in urban areas wherever the scarcity is felt by the people.

Regarding the general position in the ruaral area in Gulbarga, I would like to mention that, even though we have received sufficint rains, but lately, the position of the agricultural labourers has not been improved because of the failure of rains in the earlier part of the monsoons, they have absolutely no work. I therefore suggest the Government to start some work in these rural areas because the people in the rural areas, on account of failure of rains, are leaving the villages. Though the Govecnmet has provided sufficient funds for minor irrigation purposes, no irrigation works are going on.

MR. DEPUTY SPEAKER.— That matter Could have been dealt with bythe hon. member in the motion. Taken up Yesterday.

SRI PRABHAKAR TELKAR—I am making a suggestion to Government.

MR. DEPUTY SPEAKER.— The suggestion is alright but it mast be within the context of things. The hon. member can express his views on the rates and other things.

SRI PRABHAKAR. TELKAR.— What I said earlier was one of the reasons for the rise in prices because people have no work in my place. They have no money with the result the purchasing capacity has come down. Therefore, I suggest it is essential that the agricultural labourers should get some work so that they can purchase their requirements I therefore submit that, because of want of work, they have no money, naturally, financial stringency is there. I once again request the Covernment to start some work in Gulbarga District, at least the soil conservation work.

Then, I would like to submit about the improper work of the Govertment officiais in this sphere which is casing difficulty to the people. that is one of the causes for this rising prices of essential commodities. Therefore, strict vigilence should be mantained over thh distribution of these commodities. If proper action is taken in this matter feel that the Covernment can stop this rising prices. With these few words, I thank the Chair for having given me an opportunity to speak and conclude.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಉಪಾಧ್ಯಕ್ಷರೇ, ಈ ಸಭೆ ಎರಡು ಪ್ರಮುಖವಾದ ವಿಷಯಗಳನ್ನು ಚರ್ಚೆಮಾಡುತ್ತಾ ಇದೆ. ಒಂದು ಅಗತ್ಯವಾದ ವಸ್ತುಗಳ ಅಭಾವ ಇನ್ನೊಂದು ಅಗತ್ಯ ವಸ್ತುಗಳ ಬೆಲೆಗಳ ಏರಿಕೆ ಬಗ್ಗೆ ಚರ್ಚೆಮಾಡುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರನೇಕರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಹಣ ದುಬ್ಬರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮದೇ ಆದಂಥ ಒಂದು ಧಾಟಿಯಲ್ಲಿ ಉತ್ತರ ಕೊಟ್ಟಿದ್ದಾರೆ. ನೋಟ್ ಪ್ರಿಂಟ್‌ಮಾಡುವ ಬಗ್ಗೆ ಪೇಪರ್‌ನಲ್ಲಿ ಮೊನ್ನೆದಿವಸ ಏನು ಬಂತೋ ಅದನ್ನು ಬೇರೆ ಸಂದರ್ಭ ಒಂದಾಗ ಹೇಳುತ್ತೇನೆ. ಈ ದೇಶದ ಹಣಕಾಸಿನ ಪರಿಸ್ಥಿತಿ ಗೊತ್ತಿದ್ದವರಿಗೆ ಮಾತ್ರ ಈ ವಿಷಯ ಗೊತ್ತಾಗುತ್ತದೆ. ಬೇರೆಯವರಿಗೆ ಅರ್ಥವಾಗುವುದಿಲ್ಲ. ದೇಶದಲ್ಲಿ ಫೈನಾನ್ಸಿಂಗ್ ಡಿಫಿಸಿಟ್ ಏನು ಇದೆ ಅದರ ಬಗ್ಗೆ ಮಾತನಾಡಬೇಕಾದರೆ ಆರ್ಥಿಕ ಪರಿಸ್ಥಿತಿಯಲ್ಲಿ ಜ್ಞಾನ ಯಾರಿಗೆ ಇರುತ್ತದೋ ಅವರಿಗೆ ಗೊತ್ತಾಗುತ್ತದೆ. ಅವರು ಆ ವಿಷಯದಲ್ಲಿ ಮಾತನಾಡಬಹುದು. ಆದರೆ ಮುಖ್ಯ ಮಂತ್ರಿಗಳು ಬಿಜಾಪುರದಲ್ಲಿ ಈ ಬಗ್ಗೆ ಏನು ಒಂದು ಹೇಳಿಕೆ ಕೊಟ್ಟರೋ ಅದರ ಬಗ್ಗೆ ಒಂದು ಥೀಸೀಸ್ ಕೊಡುತ್ತಬಿಟ್ಟರೆ ಅವರಿಗೆ ದೇಶವೇ ಋಣಿಯಾಗಿರುತ್ತದೆ ಅಲ್ಲದೇ ನಾವೂ ಕೂಡ ಋಣಿಯಾಗಿರುತ್ತೇವೆ. ಆದುದರಿಂದ ಈ ಹಣದ ದುಬ್ಬರವನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಆ ಬಗ್ಗೆ ಸರ್ಕಾರದ ಪತಿಯಿಂದ ಒಂದು ಉತ್ತರ ಬಂದುಬಿಟ್ಟರೆ ನಾವು ಕೂಡ ಅವರಿಗೆ ಋಣಿಯಾಗಿರುತ್ತೇವೆ.

ಇನ್ನು ಅಗತ್ಯ ವಸ್ತುಗಳ ಅಭಾವ ಮತ್ತು ಬೆಲೆ ಏರಿಕೆ ಈ ಎರಡು ವಿಷಯಗಳನ್ನೂ ಕೂಡ ಸಂಪೂರ್ಣವಾಗಿ ಹತೋಟಿಯಲ್ಲಿಟ್ಟುಕೊಂಡಿರತಕ್ಕಂಥ ಒಂದು ವರ್ಗವನ್ನೇ ಆಡಳಿತದವರೇ ಸೃಷ್ಟಿ ಮಾಡಿದ್ದಾರೆ. ಅದರಲ್ಲೂ ತಮ್ಮ ೨ ೧/೨ ವರ್ಷಗಳ ಆಳ್ವಿಕೆಯಲ್ಲಿ ಈ ಗರೀಬಿ ಹಟಾವೊ ಅನ್ನುವ ಒಂದು ನಾಟಕವನ್ನು ಹಾಡಿ ಜನಗಳಿಗೆ ಏನೇನು ಮಾಡಿದ್ದೀರಿ ಎಂದರೆ ಆ ಬಗ್ಗೆ ಒಂದೊಂದಾಗಿ ಹೇಳುತ್ತೇನೆ.

ಮೊದಲನೆಯದಾಗಿ ಹೇಳುವುದಾದರೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಭಾರಿ ಭಾರಿ ಜನರಿಗೆ ಸಾಲದ ರೂಪದಲ್ಲಿ ಹೆಚ್ಚು ಹಣ ಹೋಗಿದೆ. ಈ ಕಪ್ಪು ಹಣವನ್ನು ನಾವು ಎದುರಿಸಬೇಕು ಎಂದು ಶ್ರೀಮಾನ್ ವೈ.ಬಿ. ಚವ್ಹಾಣರವರೆ ಪಾರ್ಲಿಮೆಂಟಿನಲ್ಲಿ ಒಪ್ಪಿಕೊಂಡಿದ್ದಾರೆ. ನೀವು ಯಾವ ಒಂದು ಸದುದ್ದೇಶವನ್ನಿಟ್ಟುಕೊಂಡು ಈ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದಿರೋ ಅದರ ಉದ್ದೇಶ ಸಫಲವಾಗಿಲ್ಲ. ಆ ಹಣ ಸರಿಯಾದ ರೂಪದಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಹೋಗಿಲ್ಲ. ಆ ಹಣ ಮಾಧ್ಯಮ ವರ್ಗದವರಿಗೆ ಸರಿಯಾಗಿ ಮುಟ್ಟಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಈಗ ಹಣವಂತೂ ಬ್ಯಾಂಕಿನಲ್ಲಿಲ್ಲ. ಅದೆಲ್ಲ ಡ್ರೈ ಅಪ್ ಆಗಿ ಹೋಗಿಬಿಟ್ಟಿದೆ. ಈವೊತ್ತಿನ ದಿವಸ ಆ ಹಣ ಎಲ್ಲಿ ಹೋಗಿದೆ ಎಂದರೆ ಭಾರಿ ಭಾರಿ ಜನರ ಹತ್ತಿರ ಸೇರಿಹೋಗಿಬಿಟ್ಟಿದೆ. ಅವರು ಈ ಕಪ್ಪುಹಣವನ್ನಿಟ್ಟುಕೊಂಡು ಈ ಪದಾರ್ಥಗಳ ಬೆಲೆಯನ್ನು ಸಂಪೂರ್ಣವಾಗಿ ಯದ್ವಾತದ್ವಾ ಹೆಚ್ಚಿಸಿಬಿಟ್ಟಿದ್ದಾರೆ. ಆದುದರಿಂದ ಈ ಕೃತಕ ಅಭಾವಕ್ಕೆ ಸರ್ಕಾರವೇ ಕಾರಣ ಎಂದು ನಾನು ಹೇಳುತ್ತೇನೆ. ಅವರು ರಾಷ್ಟ್ರೀಕೃತ ಬ್ಯಾಂಕುಗಳಿಂದ ಶೇಕಡ ೧೫ ಪರ್ಸೆಂಟ್‌ನಂತೆ ಬಡ್ಡಿಗೆ ಹಣ ತೆಗೆದುಕೊಂಡು ಆ ವ್ಯವಹಾರದಿಂದಲೇ ೪೦–೫೦ ಪರ್ಸೆಂಟ್ ಅಷ್ಟು ಹೆಚ್ಚು ಲಾಭ ಪಡೆಯುತ್ತಾರೆ. ನಮ್ಮ ಹಣದಲ್ಲೇ ಅಗತ್ಯ ವಸ್ತುಗಳನ್ನು ಮೊದಲು ಕಡಿಮೆದರದಲ್ಲಿ ಕೊಂಡುಕೊಂಡು ನಂತರಕೊರತೆ ಎಂದು ಕೃತಕ ಅಭಾವವನ್ನು ಸೃಷ್ಟಿಮಾಡಿ ನಂತರ ಜಾಸ್ತಿ ಬೆಲೆ ಆದಾಗ ಮಾರಿಕೊಂಡು ಹೆಚ್ಚು ಹಣವನ್ನ ಸಂಪಾದನೆ ಮಾಡುತ್ತಿದ್ದಾರೆ. ಅವರುಗಳಿಗೆ ಸಂಪೂರ್ಣ ಸಹಕಾರ ಕೊಟ್ಟಿರುವುದರಿಂದ ಈ ಅಗತ್ಯವಸ್ತುಗಳ ಬೆಲೆಗಳ ಏರಿಕೆಗೆ ಆಡಳಿತ ಸರ್ಕಾರವೇ ಕಾರಣ ಎಂದು ಹೇಳುತ್ತೇನೆ. ಏತಕ್ಕೆಂದರೆ ಅವರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಹಣವನ್ನು ಕೊಡಿಸಿ ಈ ಅಗತ್ಯ ವಸ್ತುಗಳ ಬೆಲೆಯನ್ನು ಹೆಚ್ಚಿಸಿದ್ದೀರಿ. ಅಲ್ಲದೆ ಪ್ರತಿಯೊಂದು ಅಂಗಡಿಯವರೂ ಅಗತ್ಯ ವಸ್ತುಗಳ ಬೆಲೆಯನ್ನು ತಮ್ಮ ಅಂಗಡಿ ಮುಂದೆ ಪ್ರಕಟಣೆ ಮಾಡಬೇಕು ಮಾಡದಿದ್ದರೆ ಎಸೆನ್ಸಿಯಲ್ ಕಮಾಡಿಟೀಸ್ ಕಾನೂನು ಪ್ರಕಾರ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದ್ದೇವೆ ಎಂದು ಹೇಳುತ್ತೀರಿ. ಆದರೆ ಒಂದು ಮಾತನ್ನು ಅಧ್ಯಕ್ಷರ ಮುಖಾಂತರ ತಮ್ಮನ್ನು ಕೇಳುತ್ತೇನೆ. ಶ್ರೀಮಾನ್ ಕೆ. ಹೆಚ್. ಪಾಟೀಲರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಅವರು ಎಷ್ಟು ಪ್ರಕರಣಗಳಲ್ಲಿ ಕೈಹಾಕಿ ಹಿಡಿದಿದ್ದಾರೆ. ಅವರಲ್ಲಿ ಅಗತ್ಯ ವಸ್ತುಗಳನ್ನು ಎಷ್ಟು ಮಟ್ಟಿಗೆ ಗೋಲು ಹಾಕಿದ್ದಾರೆ. ಈ ಕಾನೂನಿಂದ ವಿಷ್ಟು ಪರಿಣಾಮಕಾರಿಯಾಗಿವೆ ಎನ್ನುವುದನ್ನು ತಿಳಿಸಬೇಕು. ಇಂತಹ ಪ್ರಕರಣಗಳು ಬಂದಾಗ ನಾವು ಕೇಳಿದರೆ ಅವರು ಏನು ಹೇಳುತ್ತಾರೆ ಎಂದರೆ ಇಂತಹ ವಿಷಯವನ್ನು ನನ್ನ ಗಮನಕ್ಕೆ ತನ್ನಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಒಂದು ಬುದ್ಧಿವಂತಿಕೆಯ ಉತ್ತರವನ್ನು ಹೇಳುತ್ತಾರೇ ಹೊರತು ಅವರು ಎಂದು ಪೇಟೆಗೆಹೋಗಿ ನೋಡುವುದಿಲ್ಲ. ಮಲ್ಲಿಕಾರ್ಜುನ ಸ್ಟೋರ್ಸ್‌ನವರು ಏನು ಮಾಡುತ್ತಿದ್ದಾರೆ ಎಂದು ನಮ್ಮನ್ನು ಕೇಳುತ್ತಾರೇ ಹೊರತು ಅವರು ಹೋಗಿ ನೋಡುವುದಿಲ್ಲ. ಅದಕ್ಕೆ ನಾನು ಕೇಳುವುದು ಏನೆಂದರೆ What for your Department is there. what for your Act is there, and what for your Government is there?

(ಶ್ರೀ ಎಸ್. ಬಂಗಾರಪ್ಪ)

ನಾವು ಎಂ. ಎಲ್. ಎ. ಆಗಿದ್ದರೂ ಕೂಡ ಈ ವಿವರಣೆಯನ್ನು ಒದಗಿಸಲಿಕ್ಕೆ ನಾವು ಅಷ್ಟು ಶಕ್ತಿ ಪಡೆದಿಲ್ಲ. ನಿಮಗಾದರೆ ನಿಮ್ಮ ಕೈಗೆ ಒಬ್ಬರು, ಕಾಲಿಗೊಬ್ಬರು ಜನರು ಇದ್ದಾರೆ ನಿಮ್ಮ ಹತ್ತಿರ ಬಂದು ಹೇಳುವುದಕ್ಕೆ ಬೇಕಾದಷ್ಟು ಜನರನ್ನು ಇಟ್ಟು ಕೊಂಡಿದ್ದೀರಿ. ಹೀಗಿರುವಾಗ ನಮ್ಮನ್ನು ಏನು ಅಂತ ನೀವು ತಿಳಿದು ಕೊಂಡಿದ್ದೀರಿ. ಆದುದರಿಂದ ಈ ಜವಾಬ್ದಾರಿಯನ್ನು ನಮ್ಮ ತಲೆಮೇಲೆ ಹಾಕಿಕೊಳ್ಳುವುದಕ್ಕಾಗುವುದಿಲ್ಲ ಈವೊತ್ತಿನ ದಿವಸ ಅಗತ್ಯ ವಸ್ತುಗಳ ಬೆಲೆ ಸಿಕ್ಕಾಪಟ್ಟೆ ಏರಿದೆ ಅಲ್ಲದೆ ಕಲಬೆರಿಕೆಯೂ ಕೂಡ ಸಿಕ್ಕಾಪಟ್ಟೆ ಏರಿದೆ. ಈವೊತ್ತಿನ ದಿವಸ ಚಿಕ್ಕಬಳ್ಳಾಪುರದಲ್ಲಿ ಗುಂಡುಹಾರಿಸಿ ಒಬ ಹುಡುಗನನ್ನು ಕೊಂದರು. ಈ ರೀತಿ ಗುಂಡು ಹಾರಿಸುವುದರಲ್ಲಿ ಅವರು ಬಹಳ ನಿಪುಣರು. ಆ ಅಂಗಡಿಯಲ್ಲಿ ಆಹಾರದ ಪದಾರ್ಥಗಳು ಕಲಬೆರಿಕೆಯಾಗಿವೆ ಎಂದು ಜನಗಳು ಹೇಳಿದ್ದು ತಪ್ಪೇ? ಹಾಗೆ ಕೇಳಿದ್ದಕ್ಕೆ ಅದಕ್ಕೆ ಗುಂಡು ಹಾರಿಸಿದ್ದಾರೆ ಆ ಗುಂಡಿನಿಂದ ಪಿ.ಯು.ಸಿ.ಯಲ್ಲಿ ಓದುತ್ತಿದ್ದ ೧೬-೧೭ ವರ್ಷದ ಹುಡುಗ ಸತ್ತಿದ್ದಾನೆ. ಈ ರೀತಿ ಎಷ್ಟೋ ಸಂದರ್ಭಗಳಲ್ಲಿ ಜನರ ಮೇಲೆ ಗುಂಡು ಹಾರಿಸಿದ್ದಾರೆ.

MR. DEPUTY SPEAKER.—I do not think an M.L.A. is powerless. If any hon member wants to make any charge must be well establish ed like the one which Mr Edmund B rk made against Warren Hastin gs in the House of Commons. The late Feroz Gmnandhi made certain grave charges against Mr Mundhra. So I feel that sometimes M L.A. is more powerfull than a Minister.

SRI D. DEVARAJ URS.—He know only one power i.e , making a speech here. ತಮಗೆ ಏನು ಪವರ್ ಇದೆ ಎಂದು ತಮಗೆ ಗೊತ್ತಿಲ್ಲ ಎಂದು ಕಾಣುತ್ತದೆ?

ಶ್ರೀ ಎಸ್. ಬಂಗಾರಪ್ಪ.—ಫೆರೋಜ್ ಗಾಂಧಿಯವರು ಮತ್ತು ಶ್ರೀ ಟಿ. ಟಿ. ಕೃಷ್ಣಮಾಚಾರಿ ಯವರು ಏನು ಮಾಡಿದರು ಎಂಬುದು ತಮಗೂ ಗೊತ್ತಿದೆ. ಅವರು ಮಾಡಿದ್ದಾರೆ ಎಂದು ನಾವು ಎಲ್ಲರೂ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಉಪಾಧ್ಯಕ್ಷರು ಹೇಳಿದರು ಕೆಲವು ಸಮಯದಲ್ಲಿ ಶಾಸನ ಸಭಾ ಸದಸ್ಯರು ಮಂತ್ರಿಗಳಿಗಿಂತ ಪವರ್‌ಫುಲ್ ಇರುತ್ತಾರೆ ಎಂದು. ನಾನು ಹೇಳುವುದು ಇಷ್ಟೆ ತಾವು ಯಾರ ನ್ನಾದರೂ ಒಬ್ಬರನ್ನು ಕರೆದರೆ ೧೦ ಜನರು ತಮ್ಮ ಹತ್ತಿರ ಓಡಿಬರುತ್ತಾರೆ. ಅದೇ ನಾವು ಕರೆದರೆ ಯಾರು ಬರುತ್ತಾರೆ ಎಂದು ಕೇಳುತ್ತೇನೆ. ಮಾನ್ಯ ದೇವರಾಜ್ ಅರಸ್‌ರವರ ಸರ್ಕಾರಕ್ಕೆ ನಾನು ಹೇಳುತ್ತೇನೆ ಯಾವಾಗ ನಮಗೆ ಅಂದರೆ ಸದಸ್ಯರಿಗೆ ಪವರ್ ಬರುತ್ತದೆ ಎಂದು ಆ ಕಾಲವನ್ನು ಕಾಯುತ್ತಿದ್ದೇವೆ ಅದನ್ನೇ ಜನರ ಕಾಯುತ್ತಿದ್ದಾರೆ. ಜನರು ಏನು ತಪ್ಪು ಮಾಡಿದರು ಎಂದು ಚಿಕ್ಕಬಳ್ಳಾಪುರದಲ್ಲಿ ಜನರ ಮೇಲೆ ಗುಂಡು ಹಾರಿಸಿದರು? ರಾಗಿ ಹಿಟ್ಟಿಗೆ ಮತ್ತೊಂದು ಸೇರಿಸಿ ಜನರನ್ನು ಶೋಷಣೆಮಾಡಿದರೆ ಅದು ತಪ್ಪು ಎಂದು ಕೇಳಿದ್ದಕ್ಕೆ ತಮ್ಮ ಪೋಲೀಸಿನವರು "ಅನ್ ರೂಲಿ ಮಾಬ್" ಎಂದು ಗುಂಡು ಹಾರಿಸಿದ್ದೇವೆಂದು ಹೇಳುತ್ತಾರೆ. ಆದರೆ ಅವರು ಏತಕ್ಕೋಸ್ಕರ ಸೇರಿದ್ದರು ಎಂಬುದು ಗಣನೆಗೆ ತೆಗೆದುಕೊಳ್ಳುವುದಿಲ್ಲ ಅವರಿಗಾದ ಅನ್ಯಾಯವನ್ನು ಕೇಳಲು ಹೋದರೆ ಅವರ ಮೇಲೆ ಗುಂಡು ಹಾರಿಸುತ್ತಾರೆ ನಿಮ್ಮ ಪೋಲೀಸಿ ನವರು. ಅದಕ್ಕೋಸ್ಕರ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗುವುದಕ್ಕೆ ನೀವು ಕಾರಣರು ಆಗಿದ್ದೀರಿ ಎಂದು ನಾನು ಹೇಳುತ್ತೇನೆ. ಪ್ರತಿಯೊಂದು ವಿಷಯ ವನ್ನು ನನ್ನ ಭಾಷಣದಲ್ಲಿ ಹೇಳಲು ಸಾಧ್ಯವಾಗುವುದಿಲ್ಲ ಕಾರಣವಾದರೂ ಇಷ್ಟೆ ಕಾಲಾವಕಾಶ ಕಡಿಮೆ ಇರುವುದರಿಂದ ಹೆಚ್ಚಿನ ವಿಷಯ ಹೇಳಲು ಸಾಧ್ಯವಾಗುವುದಿಲ್ಲ. ಇನ್ನು ೧೯೭೧ರಲ್ಲಿ ಮಧ್ಯಂತರ ಚುನಾ ವಣಾ ಕಾಲಕ್ಕೆ ಮತ್ತು ೧೯೭೨ರ ಶಾಸನ ಸಭಾ ಚುನಾವಣೆ ಕಾಲದಲ್ಲಿ ಗರೀಬಿ ಹಟಾವ್ ಭಾಷಣ ಮಾಡಿ ದಾಗ ಅಗತ್ಯ ವಸ್ತುಗಳ ಬೆಲೆ ಏನು ಇತ್ತು, ಈ ದಿವಸ ಏನು ಇದೆ ಎಂಬುದನ್ನು ಅವಲೋಕನೆಮಾಡಿ ನೋಡಿದರೆ ಗೊತ್ತಾಗುತ್ತದೆ. ಇದರಲ್ಲಿ ಒಂದು ವಿಚಾರ ಪತ್ರಿಕೆಯಲ್ಲಿ ಓದಿದ್ದೇನೆ ಕೇವಲ ಸೋಪಿಗೋ ಸ್ಕರ ಹೊಡೆದಾಟ ಮಾಡಿ ಸತ್ತು ಹೋಗಿದ್ದಾರೆ. ೧೯೭೧-೭೨ರಲ್ಲಿ ಕೋಕನಟ್ ಆಯಿಲ್ ಬೆಲೆ ಎಷ್ಟಿತ್ತು ಎಂಬುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಒಂದು ತೆಂಗಿನಕಾಯಿ ರೇಟು ಎಷ್ಟಿತ್ತು ಎಂಬುದು ಗೊತ್ತಿದೆ. ಕೊಬರಿ ಎಣ್ಣೆ ಒಂದು ಕೇಜಿಗೆ ಆರೂವರೆ ರೂಪಾಯಿಂದ ೭ ರೂಪಾಯಿವರೆಗೆ ಇದ್ದುದು ಇವತ್ತಿನದಿವಸ ೧೫ ರೂಪಾಯಿಯಿಂದ ಹಿಡಿದು ೧೮ ರೂಪಾಯಿಯಾಗಿದೆ. ನಮ್ಮ ಹಳ್ಳಿಗಾಡಿಗೆ ಹೋಗಬೇಕು ಅಲ್ಲಿ ಇನ್ನು ಜಾಸ್ತಿಯಾಗಿದೆ. ನಿಮ್ಮ ಗರೀಬಿಹಟಾವ್ ಸರ್ಕಾರ ಬಂದಮೇಲೆ ತೊಗರಿಬೇಳೆ ಬೆಲೆ ಎರಡೂ ವರೆ ರೂಪಾಯಿಂದ ಇವೊತ್ತು ಮೂರೂವರೆ ರೂಪಾಯಿಗೆ ಹೋಗಿದೆ. ಇದನ್ನು ಸಾಮಾನ್ಯ ಮನುಷ್ಯ

ಉಪಯೋಗಿಸಲೇಬೇಕು. ಇಂಥ ಪರಿಸ್ಥಿತಿಯಲ್ಲಿ ಸಾಮಾನ್ಯ ಪ್ರಜೆ ಹೇಗೆ ಜೀವನ ನಡೆಸಬೇಕು ಎಂಬುದನ್ನು ತಾವು ಯೋಚನೆ ಮಾಡಿದ್ದೀರಾ? ಇದೆಲ್ಲ ಮಂತ್ರಿಗಳಿಗೆ ಅರ್ಥವಾಗುವುದಿಲ್ಲ. ಅವರಿಗೆ ಕೈತುಂಬಾ ಸಂಬಳ ಬರುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಮಂತ್ರಿಗಳಿಗಿಂತ ಜಾಸ್ತಿ ನೀವು ಗಿಟ್ಟಿಸಿಕೊಳ್ಳುತ್ತೀರಿ? ತಾವು ಏನು ತಿಂದರೂ ಸಣ್ಣಕ್ಕೆ ಇದ್ದೀರಿ ಅದಕ್ಕೆ ನಾವು ಏನು ಮಾಡುವುದು?

ಶ್ರೀ ಎಸ್. ಬಂಗಾರಪ್ಪ:—ತಾವು ಏನೂ ತಿನ್ನದೆ ಇದ್ದರೂ ದಪ್ಪಗಾಗುತ್ತಲೇ ಇದ್ದೀರಿ? ತಾವು ಏನು ಮಾಡುತ್ತೀರಿ ಎಂದರೆ ಅಡಲ್ಟ್ರೇಷನ್ ಫುಡ್ ನಮಗೆ ಕೊಟ್ಟು ತಾವು ಒಳ್ಳೆಯ ಫುಡ್‌ನ್ನು ತೆಗೆದುಕೊಳ್ಳುತ್ತೀರಿ ಅದರಿಂದ ಬಜಾಯಿಸಿಕೊಂಡು ಬಂದಿದ್ದೀರಿ? ಹೆಸರು ಕಾಳು ೧-೭೦ ಇದ್ದದ್ದು ಇವೊತ್ತು ಸುಮಾರು ಎರಡೂವರೆ ರೂಪಾಯಿನಿಂದ ಮೂರು ರೂಪಾಯಿವರೆಗೆ ಹೋಗಿದೆ: ಇನ್ನು ಅಕ್ಕಿ ದಪ್ಪ ಅಕ್ಕಿ ೧-೨೦ ಅಥವಾ ೧-೩೦ ಪೈಸೆ ಇದ್ದದ್ದು ೨ ೫೦ ರಿಂದ ೨-೬೦ ಪೈಸೆ ಇದೆಯೆಂದು ಕೇಳಿದ್ದೇನೆ. ಇನ್ನು ಸಣ್ಣ ಅಕ್ಕಿ ೧-೫೦ ಇದ್ದದ್ದು ಈಗ ೨-೮೦, ೩-೦೦ ರೂಪಾಯಿ ಇದೆಯೆಂದು ಶ್ರೀಮಾನ್ ಶಾಮಣ್ಣನವರು ಹೇಳಿದರು. ತೆಂಗಿನಕಾಯಿ ೭೫ ಪೈಸೆ ಇದ್ದದ್ದು ಇವೊತ್ತು ೧.೩೫ ಪೈಸ ಎರಡು ರೂಪಾಯಿ ಕೂಡ ಆಗಿದೆ ತಮ್ಮ ಗರೀಭಿ ಹಟಾವ್ ಸರ್ಕಾರ ಬಂದಮೇಲೆ ಬೆಲೆ ಏರಿಕೆ ಯಾವ ರೀತಿ ಇದೆಯೆಂದು ತಾವೇನಾದರೂ ಯೋಚನೆ ಮಾಡಿದ್ದೀರಾ? ಮೆಣಸಿನಕಾಯಿ ಕೇಜಿಗೆ ೯ ರೂಪಾಯಿನಿಂದ ೧೦ ರೂಪಾಯಿಯಾಗಿದೆ. ಕಾಫಿ ಪುಡಿ ಕೆಜಿಗೆ ೮ ರೂಪಾಯಿ ತಾವು ಗರೀಬಿ ಹಟಾವ್ ಭಾಷಣಮಾಡುವ ಕಾಲಕ್ಕೆ ಇದ್ದದ್ದು ಇವೊತ್ತು ೧೪ವರೆ ರೂಪಾಯಿ ಟೀ ಪೌಡರ್ ೫ ರೂಪಾಯಿ ಇದ್ದದ್ದು ಈಗ ೧೦ ರೂಪಾಯಿ ಆಗಿದೆ. ಅದೂ ಇರಲಿ ಕೇವಲ ಒಬ್ಬ ಗರೀಬನೂ ಉಪಯೋಗಿಸುವಂಥ ಬೆಂಕಿಪೆಟ್ಟಿಗೆ ೬ ಪೈಸೆ ಇದ್ದದ್ದು ಇವೊತ್ತಿನ ದಿವಸ ೧೨ ಪೈಸೆಯಿಂದ ಹಿಡಿದು ೧೫ ಪೈಸೆಯವರೆಗೆ ಏರಿದೆ ಎಂದರೆ ಸಾಮಾನ್ಯ ಮನುಷ್ಯನ ಜೀವನ ಎಷ್ಟು ದುಸ್ತರವಾಗಿದೆ ಎಂಬುದನ್ನು ಯೋಚನೆಮಾಡಿ ಇದೇ ರೀತಿ ಪ್ರತಿಯೊಂದನ್ನು ಹೇಳುತ್ತಾ ಹೋದರೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಲಿಸ್ಟನ್ನು ಹೇಳುತ್ತಾ ಹೋಗುವುದಿಲ್ಲ. ಏತಕ್ಕಾಗಿ ಈ ವಿಷಯ ಪ್ರಸ್ತಾಪ ಮಾಡುತ್ತಾ ಇದ್ದೇನೆಂದರೆ ತಾವು ಅಧಿಕಾರಕ್ಕೆ ಬಂದಮೇಲೆ ಒಂದು ಇದ್ದದ್ದು ಎರಡರಷ್ಟು ಐದರಷ್ಟು ಆಗಿದೆ ತಮ್ಮ ದುರಾಡಳಿತ ಇದಕ್ಕೆ ಕಾರಣವೆಂದರೆ ತಪ್ಪಾಗಲಾರದು. ಶ್ರೀ ಕೆ. ಎಚ್. ಪಾಟೀಲರು ಬಹಳ ಶಕ್ತಿವಂತ ಮಂತ್ರಿಗಳೆಂದು ಹೇಳುತ್ತಾರೆ ಯಾವುದರ ಬಗ್ಗೆ ಶಕ್ತಿವಂತರೋ ಗೊತ್ತಿಲ್ಲ?

ಶ್ರೀ ದೇವರಾಜ ಅರಸರ ಮಂತ್ರಿಮಂಡಲ ದೇಶಕ್ಕೋಸ್ಕರ ಹಗಲು ರಾತ್ರಿ ಬಹಳ ಕಷ್ಟ ಪಡುತ್ತಿದೆ ಅಗತ್ಯ ವಸ್ತುಗಳ ಅಭಾವದ ಕೊರತೆಯನ್ನು ನೀಗುವುದರಲ್ಲಿ ಬೆಲೆಗಳನ್ನು ಕಡಿಮೆ ಮಾಡುವುದರಲ್ಲಿ ನಿರ್ಣಯ ತೆಗೆದುಕೊಂಡು ಕೆಲಸ ಮಾಡಿದ್ದರೆ ಅವರ ಬಗ್ಗೆ ನಾವು ಅನುಕಂಪ ತೋರಿಸಬಹುದಿತ್ತು. ಆದರೆ ಹಿಂದಿನ ಸರ್ಕಾರಕ್ಕೂ ಇವರ ಸರ್ಕಾರಕ್ಕೂ ಹೋಲಿಸಿದರೆ ಏನೂ ವೆತ್ಯಾಸ ಕಾಣುವುದಿಲ್ಲ. ಎಲ್ಲಾ ಒಂದೇ ತರಹ ಇರತಕ್ಕುದ್ದು ಒಂದೇ ಆಡಳಿತ.

12-30 P.M.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಸದಸ್ಯರೊಬ್ಬರು ಮುಂದೆ ಏನು ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಮುಂದೆ ದೊಡ್ಡ ಕ್ರಾಂತಿಯೇ ಆಗಬೇಕಾಗುತ್ತದೆ. ನಾನು ಹೇಳುತ್ತೇನೆ ಜನರು ಅಂಗಡಿಗಳಿಗೆ ನುಗ್ಗಿ ಲೂಟಿ ಮಾಡುವುದಕ್ಕೆ ತಯಾರಾಗಿದ್ದಾರೆ. ನೀವು ಎಷ್ಟು ಗುಂಡು ಬೇಕಾದರೂ ಹಾರಿಸಿ ಜನರು ಸಾಯುವುದಕ್ಕೆ ತಯಾರಿದ್ದಾರೆ, ಅದಕ್ಕೆ ಅವಕಾಶ ಕೊಡಬೇಡಿ ಎಂದು ನಾನು ಹೇಳುತ್ತೇನೆ.

MR. DEPUTY SPEAKER.—I Canot permit the Hon. Member to make a provocative speech here to create violence outside. It is an indirect way of incising violence.

ಶ್ರೀ ಎಸ್. ಬಂಗಾರಪ್ಪ.—ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಏನೆಂದರೆ ನಾಳೆ ಜನ ರೋಡಿಗೆ ಬರುತ್ತಾರೆ ಅವರನ್ನು ರಸ್ತೆಯಲ್ಲಿ ನಿಲ್ಲಿಸತಕ್ಕ ಪರಿಸ್ಥಿತಿ ಬರುತ್ತದೆ ಎಂದು. ದೇಶದಲ್ಲಿ ಆಗುವುದನ್ನು ಮುಚ್ಚಿಟ್ಟು ಮಾತನಾಡುವುದಕ್ಕಾಗುತ್ತದೆಯೇ? We will have to reflect that aspect also It cannot be a provocative speech.
ಶಾಂತಿ ಮಂತ್ರ, ರುದ್ರಾಕ್ಷಿ ಜಪ ಇಲ್ಲಿ ಮಾಡುವುದಕ್ಕಾಗುವುದಿಲ್ಲ. ಇಡೀ ದೇಶದಲ್ಲಿ ಇಂಥಾದ್ದು ನಡೆಯುತ್ತಾ ಇರಬೇಕಾದರೆ ಅದಕ್ಕೆ ಅವಕಾಶ ಕೊಡಬೇಡಿ ಎನ್ನುವ ಅಭಿಪ್ರಾಯವನ್ನು ನಾನು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಮೊದಲು ಹೇಳಿದ್ದರಲ್ಲಿ ಸ್ವಲ್ಪ ವ್ಯತ್ಯಾಸ ಇದೆ.

ಶ್ರೀ ಎಸ್. ಬಂಗಾರಪ್ಪ.—ಆ ಒಂದು ದೃಷ್ಟಿಯಿಂದ ನಾನು ಆ ವಿಷಯವನ್ನು ಹೇಳಿದ್ದೇನೆ. ಮಾನ್ಯ ಮಂತ್ರಿಗಳು ಇದಕ್ಕೆ ಅವಕಾಶಕೊಡದೆ ಅಭಾವವನ್ನು ನೀಗುವುದಕ್ಕೆ ಬೆಲೆ ಏರಿಕೆಯನ್ನು ತಡೆಹಿಡಿಯುವುದಕ್ಕೆ ಸ್ವಪ್ರಯತ್ನ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಎರಡುಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್.—(ವರ್ತೂರು) ಸನ್ಮಾನ್ಯ ಉಪಾಧ್ಯಕ್ಷರೇ, ಸಭೆಯಲ್ಲಿ ನಡೆದ ವಿಪುಲವಾದ ಚರ್ಚೆಯ ಸಾರಾಂಶ ಏನೆಂದರೆ, ಜೀವನದಅಗತ್ಯ ವಸ್ತುಗಳ ಬೆಲೆ ಪ್ರಜಾಕೋಟಿಗೆ ನಿಲುಕದೆ ದಾರುಣ ಪರಿಸ್ಥಿತಿ ಬಂದಿದೆ; ಎನ್ನುವ ಚಿತ್ರದಿಂದ ಕೂಡಿದೆ. ಸರ್ಕಾರ ಯಾವುದೇ ಇರಲಿ, ಯಾರೇ ರಾಜ್ಯಭಾರ ಮಾಡಲೀ, ಇರತಕ್ಕ ಸನ್ನಿವೇಶ, ವಾಸ್ತವಾಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಎಷ್ಟರ ಮಟ್ಟಿಗೆ ಕಾರ್ಯಸಾಧನೆಯನ್ನು ನಾವು ಮಾಡಬಹುದು ಎನ್ನುವುದರ ಬಗ್ಗೆ ಎಲ್ಲರ ಸಹಕಾರವನ್ನು ಹೇಗೆ ಪಡೆಯಬೇಕು ಎನ್ನುವುದನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಅಗತ್ಯ ವಸ್ತುಗಳ ಉತ್ಪನ್ನ ಸಾಲದು, ದಸ್ತಾನು ಕಡಿಮೆ ಇರುವುದರಿಂದ ಇನ್‌ಫಾರ್ಮಲ್ ರೇಷನಿಂಗ್ ಅನ್ನು ಕೆಲವು ಕಡೆ ಇಟ್ಟಿದ್ದಾರೆ ಎನ್ನುವುದು ವೇದ್ಯವಾದ ವಿಚಾರ. ಲೆವಿ ಸಿಸ್ಟಂನಿಂದ ಪದಾರ್ಥಗಳನ್ನು ವಸೂಲು ಮಾಡುವಾಗ ಜನರು ಸರ್ಕಾರಕ್ಕೆ ಪೂರ್ಣ ಸಹಕಾರವನ್ನು ನೀಡಬೇಕು. ಸಹಕಾರವನ್ನು ನೀಡಿ, ರೈತರು ಕೊಡತಕ್ಕ ಎಲ್ಲಾ ವಸ್ತುಗಳನ್ನು ನಾವು ತೆಗೆದುಕೊಂಡರೆ ಆಗಲೂ ಕೂಡ ಅದನ್ನು ಹಂಚುವುದಕ್ಕೆ ಸಾಲದೆ ಬರಬಹುದು. ಆ ಪದಾರ್ಥಗಳನ್ನು ನಾವು ಕೊಂಡುಕೊಳ್ಳತಕ್ಕ ಬೆಲೆ ಕಡಿಮೆ ಇದ್ದರೆ, ರೈತ ಬೇಸಾಯ ಮಾಡುವುದಕ್ಕೆ ಬೇಕಾಗಿರತಕ್ಕ ಗೊಬ್ಬರ, ಉಪಕರಣಗಳು ಇತ್ಯಾದಿಯ ಬೆಲೆಯೂ ಕೂಡ ಜಾಸ್ತಿಯಾಗಿದೆ. ಮರ ಮುಟ್ಟುಗಳು, ಕೂಲಿ ಜಾಸ್ತಿ ಯಾಗಿರುವುದರಿಂದ, ರೈತನು ದವಸವನ್ನು ಮಾರಿ ಜೀವನ ಮಾಡುವುದರಿಂದ, ಅವನು ಕಡಿಮೆ ಬೆಲೆಗೆ ತಾನು ಬೆಳೆದ ದವಸವನ್ನು ಮಾರಿ ಜೀವನ ಮಾಡುವುದು ಕಷ್ಟವಾಗುತ್ತದೆ. ಪರ್ಚೇಸಿಂಗ್ ಪ್ರೈಸ್ ಇಷ್ಟು ಎಂದು ನಾವು ಇಟ್ಟುಕೊಂಡರೆ ಬೆಲೆ ಜಾಸ್ತಿಯಾಗಲೀ ಕಡಿಮೆಯಾಗಲಿ ಅಷ್ಟಕ್ಕೆ ನಾವು ಅವನಿಂದ ಕೊಳ್ಳುತ್ತೇವೆಂದರೆ ಅದರ ಮೇಲೆ ಇನ್ನಷ್ಟು ಬೆಲೆ ಬೇಕು ಎಂದು ಕೇಳುವುದು ಸ್ವಾಭಾವಿಕ. ಅವನಿಗೆ ದವಸವನ್ನು ಮಾರುವುದರಿಂದ ಮಾತ್ರ ದುಡ್ಡು ಬರುತ್ತದೆ. ಬೇರೆ ವಸ್ತುಗಳನ್ನು ಕೊಳ್ಳುವುದಕ್ಕೆ ಅವನಿಗೆ ಹಣ ಇರುವುದಿಲ್ಲ. ಇಂಥ ಕಠಿಣವಾದ ಸಮಸ್ಯೆಯನ್ನು ಬಿಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಗೊಬ್ಬರ, ಬೇಕಾದಂಥ ವಸ್ತುಗಳನ್ನು ಸಬ್ಸಿಡೈಸ್ಡ್ ಬೆಲೆಗೆ ಕೊಡಲಿ ಎಂದು ಕೆಲವರು ಹೇಳುತ್ತಾರೆ. ಇನ್ನೊಂದು ಚಿತ್ರವಿಚಿತ್ರವೆಂದರೆ, ದೇಶದಲ್ಲಿ ಗೊಬ್ಬರ ಉತ್ಪನ್ನ ಮಾಡುವ ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತಿದೆ ಎಂದು ಒಬ್ಬ ಸದಸ್ಯರು ಹೇಳಿದರು. ಇದು ಸ್ವಲ್ಪ ಆಶ್ಚರ್ಯ. ಒಂದು ಕಾರ್ಖಾನೆಯನ್ನು ಮುಚ್ಚುವುದರಿಂದ ಏಕಾಏಕಿಯಾಗಿ, ಗೊಬ್ಬರವನ್ನು ಉತ್ಪಾದನೆ ಮಾಡುವುದಕ್ಕಾಗುವುದಿಲ್ಲ. ಮತ್ತೊಂದು ದೊಡ್ಡದೊಂದು ಕಾರ್ಖಾನೆಯನ್ನು ಇಟ್ಟುಕೊಳ್ಳುತ್ತೇವೆಂದರೆ, ಆ ತತ್ವ ಸರಿ, ಇಲ್ಲದಿದ್ದರೆ, ಅದನ್ನು ಮುಚ್ಚಬಾರದು. ಇನ್‌ಫಾರಮಲ್ ರೇಷನಿಂಗ್ ಇಟ್ಟಿರುವಂಥ ಸರ್ಕಾರದ ಉದ್ದೇಶ ಏನೆಂದರೆ, ಸಮಾಜದಲ್ಲಿರತಕ್ಕ ವಲ್ನರಬ್ ರೇಷನಿಂಗ್ ಇಟ್ಟಿರುವಂಥ ವಲ್ನರಬಲ್ ಸೆಕ್ಷನ್ಸ್‌ಗೆ ದವಸ ಕೊಡುವುದು ಮೂಲ ಉದ್ದೇಶ ದುಡ್ಡು ಇರುವವರಿಗೆ ಇದು ಬೇಕಾಗಿಲ್ಲ, ಗಂಜಿ ಕಾಯಿಸುವುದಕ್ಕೂ ನುಚ್ಚು ಇಲ್ಲದೆ ಇರತಕ್ಕವರಿಗೆ ನಾವು ಆಹಾರ ಕೊಡುತ್ತೇವೆಂದು ಹೇಳುವುದು ಸರಿ. ವಲ್ನರಬಲ್ ಸೆಕ್ಷನ್ಸ್ ಇದುವರೆಗೆ ಎಷ್ಟು ಜನ ಇದ್ದಾರೆ ಎಂದು ಒಂದು ಸರ್ವೆ ಮಾಡಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆ. ಅದನ್ನು ಮಾಡಬೇಕಾಗಿದೆ ಇದಕ್ಕೆ ನಾನು ಒಂದು ಮಾರ್ಗವನ್ನು ಸಲಹಾ ರೂಪದಲ್ಲಿ ಮಾಡುವುದಾದ , ರೂರಲ್ ಲ್ಯಾಂಡ್‌ಲೆಸ್ ಎನ್ನುವವರು ಮೊದಲನೆಯ ಕೆಟಗರಿ ಇನ್‌ಸಫಿಸಿಯಂಟ್ ಲ್ಯಾಂಡ್ ಹೋಲ್ಡರ್ಸ್ ಎನ್ನುವವರು ಎರಡನೆಯ ಕೆಟಗಿರಿ. ಅರ್ಬನ್ ಏರಿಯಾದಲ್ಲಿ ಗವರ್ನಮೆಂಟ್ ನೌಕರರು, ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕವರು ಸ್ಯಾಲರೀಡ್ ಪರ್ಸನ್ಸ್ ಒಂದು ಗುಂಪಿನಲ್ಲಿ ಬರುತ್ತಾರೆ. ಹೈಯರ್ ಸ್ಯಾಲರೀಡ್ ಪೀಪಲ್ಸ್‌ನ್ನು ಬೇರೆ ಗುಂಪುಮಾಡಿ, ಎನ್‌ಜಿಒ ಮತ್ತು ಸಂಬಳ ಸಾಲದೆ ಇರತಕ್ಕಂಥವರನ್ನು ಬೇರೆ ಮಾಡಬೇಕು ಫಿಕ್ಸೆಡ್ ಇನಕಂ ಬರತಕ್ಕ ಫ್ಯಾಮಿಲಿಗಳು, ಇನಕಂಟ್ಯಾಕ್ಸ್ ಕೊಡತಕ್ಕವರು ಕಂಟ್ರ್ಯಾಕ್ಟರ್ಸ್ ಇವರನ್ನೆಲ್ಲಾ ತೆಗೆದು ನಿಜವಾಗಿ ಬಡವರು ಸ್ಲಂ ಏರಿಯಾದಲ್ಲಿ ಗುಡಿಸಲುಗಳಲ್ಲಿ ವಾಸ ಮಾಡತಕ್ಕವರನ್ನು ಒಂದು ಕೆಟಗಿರಿ ಮಾಡಬೇಕು. ಇಂಥ ಒಂದು ಸರ್ವೆಯನ್ನು ಸರ್ಕಾರದವರು ಮಾಡಬೇಕು. ಫಂಡ್ ಸ್ಟಾಕನ್ನು ಇಂಪ್ರೂವ್ ಮಾಡುವುದಕ್ಕೆ ಬೇರೆ ಸಲಹೆಯನ್ನು ಕೊಡಬಹುದು. ಬೆಂಗಳೂರಿನ ಜನಸಂಖ್ಯೆ ೨೦ಲಕ್ಷ ಎಂದು ಇಟ್ಟುಕೊಂಡರೆ, ಅದರಲ್ಲಿ ನಾಲ್ಕು ಲಕ್ಷ ಜನಕ್ಕೆ ರೇಷನ್ ಕಾರ್ಡ್ಸ್ ಬರತಕ್ಕದ್ದು ಸಹಜ. ಕಾರ್ಡ್ ಹೋಲ್ಡರ್ಸ್ ಕಾರ್ಡ್‌ಮೂಲಕ ರೇಷನ್ ಕೊಡುತ್ತಾ ಇರುವುದರಿಂದ, ಕಾರ್ಡ್‌ನವನು ಜೋಳ ಬೇಡ ಎಂದರೆ ಅಂಗಡಿಯವನು ಜೋಳವನ್ನು ಬ್ಲಾಕ್ ಮಾರ್ಕೆಟ್ ಮಾಡಿಕೊಳ್ಳುತ್ತಾನೆ.

Government policy may breed the blackmarkcting system, ಆದ್ದರಿಂದ ಆರು ಡಿವಿಷನ್‌ಗಳನ್ನು ಒಂದು ಡಿವಿಜನ್ ಆಗಿ ಮಾಡಿ, ೧೭೫ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಅನ್ನುವೀಕರ್‌ಸೆಕ್ಷನ್ ಮಾಡಿ ಅದಕ್ಕೆ ಏನು ಸಹಾಯ ಮಾಡಬೇಕೋ ಅದನ್ನು ಮಾಡಿ. ಸರ್ಕಾರಕ್ಕೆ ಶಕ್ತಿ ಇತ್ತು ಎಂದರೆ, ಅದನ್ನು ಬೇರೆ ಕಡೆಗೂ ಸಪ್ಲೈಮಾಡಿ. ಸ್ವಲ್ಪ ತಾತ್ಸಾರದಿಂದಿರುವ ಮನೋಭಾವವನ್ನು ಬಿಡಬೇಕು. ಹಾಗಿದ್ದೀರಿ ಎಂದಲ್ಲ. ಹೊಸ ಸಮಸ್ಯೆ ಬಂದಿದೆ. ಇದು ಸಂದಿಗ್ಧ ಸಮಯ. ಹೇಳುವುದು ಸುಲಭ ಮಾಡುವುದು ಕಷ್ಟ. ರಿಸರ್ಚ್ ಮಾಡಬೇಕು. ಶೀಘ್ರವಾಗಿ ಕೆಲಸ ಮಾಡಬೇಕು. ವಲ್ನರೆಬಲ್ ಸೆಕ್ಷನ್ನಿಗೆ ಇನ್ನೂ ಸಹಾಯ ದೊರೆತಿಲ್ಲ. ನೂರು ರೂಪಾಯಿ ದವಸ ಬೇಕಾದರೆ ೫೦ ರೂಪಾಯಿನದು ಸಿಕ್ಕುವುದು, ಇನ್ನುಳಿದ ೫೦ ರೂಪಾಯಿಗಳಷ್ಟನ್ನು ಓಪನ್ ಮಾರ್ಕೆಟ್ಟಿನಲ್ಲಿ ಕೊಳ್ಳಬೇಕು. ಹಣವಿರುವವರು ಎಲ್ಲಿ ಬೇಕಾದರೂ ಎಷ್ಟು ಬೇಕಾದರೂ ಕೊಳ್ಳಬಹುದು. ಸ್ಟಾಕ್ ಪೊಸಿಷನ್ ಇಂಪ್ರೂವ್ ಆಗಬೇಕಾದರೆ ಹೋರ್ಡರ್ಸ್‌ನ್ನು ಪತ್ತೆಮಾಡಬೇಕು. ಲಾರಿಗಳಲ್ಲಿ ಸಾಮಾನು ಬಂದರೆ ಚೆಕ್ ಮಾಡದೆ ಬಿಡುವುದು ಸರಿಯಲ್ಲ. ಡಬ್ಬಲ್ ಕ್ರಾಪ್ ಸಿಸ್ಟಂ ಜಾರಿಗೆ ತರಬೇಕು. ಕೆರೆಕಟ್ಟೆಗಳಿಗೆ ಕಾಲುವೆ ಇಲ್ಲದಿರುವ ಕಡೆ ಮಾಡಬೇಕು, ಅಪೂರ್ಣವಾಗಿರುವ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯವರು ನೋಡಿ ಪೂರ್ಣ ಮಾಡಬೇಕು. ವೇಸ್ಟೇಜ್ ತಪ್ಪಿಸಬೇಕು. ಆಹಾರ ಪದಾರ್ಥಗಳನ್ನು ಸ್ಮಗಲ್ ಆಗುವುದನ್ನು ತಪ್ಪಿಸಲು ೧೦ ಸಾವಿರ ಮೂಟೆ ಮಾರುವ ಕಡೆಗೆ ೫ ಸಾವಿರ ಮೂಟೆ ಒದಗಿಸಬೇಕು. ಹಾಗೆ ಮಾಡಿದರೆ ಕೊಳ್ಳುವವರಲ್ಲೂ ಹಾಹಾಕಾರವಿರುವುದಿಲ್ಲ ಮತ್ತು ಕಾಳಸಂತೆಗೂ ಹೆಚ್ಚು ಅವಕಾಶವಿರುವುದಿಲ್ಲ. ಹಂಚಿಕೆಗೆ ಚಿಕ್ಕ ಚಿಕ್ಕ ಅಂಗಡಿಗಳಲ್ಲಿ ಅವಕಾಶ ಮಾಡಿದರೆ ಬಚ್ಚಿಡಲು ಅವಕಾಶವಿರುವುದಿಲ್ಲ. ವಲ್ನರೆಬಲ್ ಸೆಕ್ಷನ್ ಸರ್ವೆ ಮಾಡಿ ಅವರಿಗೆ ಸಹಾಯ ನೀಡಬೇಕು. ವಲ್ನರೆಬಲ್ ಸೆಕ್ಷನ್ ಅಂದರೆ ಬಹಳ ಬಡತನದಲ್ಲಿರುವರು. ಎನ್‌ಜಿಓಗಳಿಗೆ ನಿಗದಿಯಾದ ಸಂಬಳವಿದೆ. ಅವರನ್ನೂ ಈ ಸರ್ವೆಯಲ್ಲಿ ಸೇರಿಸಬೇಕು. ಇಷ್ಟನ್ನು ಮಾಡಿದರೆ ಒಳ್ಳೆಯದಾಗಬಹುದು ಎಂದು ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಪದಾರ್ಥಗಳ ಅಭಾವ ಮತ್ತು ಬೆಲೆ ಏರಿಕೆ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ದೇವೇಗೌಡರು ಮತ್ತು ಶ್ರೀ ಶಾಮಣ್ಣನವರು ಮಂಡಿಸಿರುವ ಸೂಚನೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಈ ಬಗ್ಗೆ ರಾಜ್ಯಸರಕಾರಕ್ಕೆ ಏನು ಹೇಳಿದರೂ ಪ್ರಯೋಜನವಿಲ್ಲ ಎಂದು ಭಾವಿಸುತ್ತೇನೆ. ಏಕೆಂದರೆ ಯಾವುದನ್ನು ಇಲ್ಲಿ ಹೇಳಿದರೂ ಕೇಂದ್ರ ಸರಕಾರದಮೇಲೆ ಹಾಕುವರು. ಕೇಂದ್ರ ಸರಕಾರದ ವಿಷಯ ಇಲ್ಲಿ ಪ್ರಸ್ತಾಪಮಾಡಬಾರದು ಎಂದು ಹೇಳುವರು. ಇಡೀ ದೇಶದಲ್ಲಿ ಆಹಾರದ ಅಭಾವವಾಗಿ ಬೆಲೆಗಳು ಏರಿವೆ. ಇದನ್ನು ತಡೆಗಟ್ಟುವುದಕ್ಕೆ ಯಾವ ಯಾವ ಕ್ರಮವನ್ನು ಕೈಕೊಳ್ಳಲಾಗಿದೆಯೆಂಬುದನ್ನು ಸರಕಾರ ಹೇಳುವುದಿಲ್ಲ. ಈ ದಿವಸ ಆಹಾರ ಮಂತ್ರಿಗಳು ಕೇವಲ ೫–೧೦ ಕೆಜಿ ಬ್ಲಾಕ್ ಮಾರ್ಕೆಟ್ ಮಾಡುವವರನ್ನು, ಹೋರ್ಡ್ ಮಾಡುವವರನ್ನು ಹಿಡಿಯುತ್ತಿರುವರೇ ಹೊರತು ೫೦೦–೧೦೦೦ ಕ್ವಿಂಟಾಲ್ ಹೋರ್ಡ್‌ಮಾಡಿ ಕಾಳಸಂತೆಯಲ್ಲಿ ತೊಡಗುವವರನ್ನು ಹಿಡಿಯುತ್ತಿಲ್ಲ. ದೊಡ್ಡದೊಡ್ಡವರು ಸಿಕ್ಕಿದಾಗ ಎಷ್ಟೋ ಜನರನ್ನು ಬಿಟ್ಟಿದ್ದಾರೆ. ದೊಡ್ಡವರ ಬಗ್ಗೆ ತಪಶೀಲು ಕೊಡಿ, ಯಾರನ್ನು ಹಿಡಿದು ಶಿಕ್ಷೆ ಮಾಡಲಾಗಿದೆ ತಿಳಿಸಿ ಎಂದರೆ ತಿಳಿಸುತ್ತಿಲ್ಲ. ಸರಕಾರ ನೋಡಿದರೆ ಒಂದೇ ನಾಣ್ಯದ ಎರಡು ಮುಖಗಳಂತೆ ಕಂಡು ಬರುವುದು. ಹಿಂದಿದ್ದವರೇ ಇಂದೂ ಇದ್ದಾರೆ. ಈ ಸರಕಾರ ಬಂದ ಎರಡೂವರೆ ವರ್ಷದಲ್ಲಿ ಗರಿಬಿ ಹಟಾವೋ ಎಂದು ಹೇಳಿಕೊಂಡು ಬಡವರ ಹೊಟ್ಟೆಯಮೇಲೆ ಕಲ್ಲು ಹಾಕಿದೆ. ಇಂದು ಸುಮಾರು ೨೨೫ ಪಟ್ಟಣಗಳಿವೆ, ರಾಜ್ಯದಲ್ಲಿ ೨೬೮೨೬ ಹಳ್ಳಿಗಳಿವೆ. ಹಳ್ಳಿಯ ಬಡವರ ಬಗ್ಗೆ ಸರಕಾರಕ್ಕೆ ಕಳಕಳಿಯಿಲ್ಲ. ಇಂದು ಹಳ್ಳಿಗಳಲ್ಲಿ ಆಹಾರದ ಅಭಾವ ಹೆಚ್ಚಾಗಿದೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ೨ ರೂಪಾಯಿಗೆ ಒಂದು ಕೆಜಿ ಅಕ್ಕಿ ಕೊಡುತ್ತಿದ್ದಾರೆ. ಭತ್ತದ ಕಣಜವೆಂದ ಹೆಸರಾದ ಪ್ರದೇಶದಲ್ಲೇ ಈ ಬೆಲೆಯಿದೆ. ಹೀಗಾದರೆ ಇನ್ನು ಎರಡುಮೂರು ತಿಂಗಳಲ್ಲಿ ಹಳ್ಳಿ ಬಡವರ ಗತಿಯೇನಾಗುವುದು ಎಂಬುದನ್ನು ಊಹೆ ಮಾಡಬಹುದು. ಕೂಲಿ ಸಿಕ್ಕುವುದಿಲ್ಲ, ಮಳೆಯ ತೊಂದರೆ ಬೇರೆ, ದೀಪ ಹಚ್ಚಲು ಸೀಮೆಎಣ್ಣೆ ಸಿಕ್ಕುತ್ತಿಲ್ಲ, ೨ ರೂಪಾಯಿಗೆ ಲೀಟರ್‌ನಂತೆ ಸೀಮೆಎಣ್ಣೆ ಮಾರಾಟವಾಗುತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಕಡೆ ಕೂಲಿ ಎಷ್ಟು ಕೊಡುತ್ತಿದೆಯೆಂಬುದನ್ನು ನೋಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಇದಕ್ಕೆ ಅಗ್ರಿಕಲ್ಚರಲ್ ಲೇಬರರ್ಸ್ ಆಕ್ಟ್ ಫಾರಂ ವರ್ಕರ್ಸ್ ಆಕ್ಟ್—ಎಂದರೇನು ಕೇರಳದಲ್ಲಿ ತಂದಿದ್ದಾರೆ ಅದರಂತೆ ಇಲ್ಲೂ ತನ್ನಿ. ಈಗ ಐಎಎಸ್ ಅಧಿಕಾರಿಗಳು ಮತ್ತು ಐಸಿಎಸ್ ಅಧಿಕಾರಿಗಳು ಹೇಳಿದಂತೆ ಮಾಡುತ್ತಿದ್ದೀರಿ. ಸ್ವಂತವಾಗಿ ನಿರ್ಧಾರಮಾಡಿ ಅಧಿಕಾರಿಗಳ ಮೇಲೆ ಅಧಿಕಾರ ಚಲಾಯಿಸುತ್ತಿಲ್ಲ. ಮೂರು ಪೇ ಕಮಿಷನ್ನುಗಳಾದುವು ಆದರೆ ಅದರಂತೆ ಅಗ್ರಿಕಲ್ಚರಲ್ ಲೇಬರರ್ಸ್ ಬಗ್ಗೆ ಏನೂ ಮಾಡಲಿಲ್ಲ. ಅದು ಯಾರಿಗೂ ಬೇಕಾಗಿಲ್ಲ. ಈ ಸರಕಾರ ಅಧಿಕಾರಕ್ಕೆ

(ಶ್ರೀ ಕೋಣಂದೂರು ಲಿಂಗಪ್ಪ)

ಬಂದಮೇಲೆ ಜಯಪ್ರಕಾಶ ನಾರಾಯಣ್‌ರವರ ಸುದ್ದಿ ಹೇಳಿದರು. ಯಾರ ಹೆಸರನ್ನು ಉಚ್ಚಾರ ಮಾಡುವುದಕ್ಕೆ ಯೋಗ್ಯತೆಯಿಲ್ಲವೋ ಅಂಥವರು ಹೇಳಿದರು. ಅವರ ಹೆಸರನ್ನು ಎತ್ತಲು ಯೋಗ್ಯತೆ ಇಲ್ಲದಂಥ ಜನರಲ್ಲಿದ್ದಾರೆಂದು ಹೇಳಿದೆ, ಕುಂಬಳಕಾಯಿ ಕಳ್ಳ ಎಂದರೆ ಇವರೇಕೆ ಹೆಗಲು ಮುಟ್ಟಿ ನೋಡಿಕೊಂಡರು? ಎಂದಹಾಗೆ,.........

SRI S. M. SEERNALI CHANDRASEKHER.—I take strong objection to the remarks of the hon. member.

MR. DEPUTY SPEAKER.—The hon. member can interrupt another hon. member if he yields Unless it is a point of order, I cannot help him,

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್,— ಸ್ವಾಮಿ ನಾನು ಆ ಜಯಪ್ರಕಾಶ್‌ನಾರಾಯಣರ ಬಗ್ಗೆ ಯಾವತರಹದ ಯ ಅಗೌರವದ ಪದಗಳನ್ನೂ ಬಳಸಲಿಲ್ಲ. ನಾನು ಹೇಳಿದ್ದು ದೇಶದಲ್ಲಿ ಶಾಂತಿ ಸ್ಥಾಪನೆಗೆ ಅವರ ಸೇವೆಯನ್ನು ಉಪಯೋಗ ಮಾಡಿಕೊಳ್ಳದೆ ಅವರನ್ನು ದೇಶದಲ್ಲಿ ಕ್ರಾಂತಿಯೆಬ್ಬಿಸುವುದಕ್ಕೆ ಬಳಸುತ್ತಿದ್ದಾರೆ, ಎಂದು ಅಷ್ಟನ್ನು ಮಾತ್ರ ಹೇಳಿದೆ. ಆದರೆ ಅಷ್ಟಕ್ಕೇ ಅವರ ಹೆಸರನ್ನೆತ್ತಲೂ ಸಹಾ ಯೋಗ್ಯತೆ ಇಲ್ಲದಂಥ ಜನರು ಇಲ್ಲದಂಥ ಜನರು ಇಲ್ಲಿದ್ದಾರೆಂದು ಹೇಳುವುದು ಸರಿಯಲ್ಲ.

MR. DEPUTY SPEAKER.—He has certain feelings about him and we have certain estimates about him. He has araised him.

ಶ್ರೀ ಸಿ. ಬೈರೇಗೌಡ.— ಮಾನ್ಯ ಉಪಾಧ್ಯಕ್ಷರೇ ತಾವು ದಯಮಾಡಿ ಈಗ ಮಾತನಾಡುತ್ತಿದ್ದ ಮಾನ್ಯ ಸದಸ್ಯರ ಬಾಯಿಗೆ ಬೀಗಹಾಕಬೇಕು. ಇಲ್ಲವಾದರೆ ಬಹಳ ರಾದಾಂತವಾದೀತು. ಅವರು ಈಗತಾನೆ ನಾನ್‌ಸೆನ್ಸ್ ಮಾತನಾಡುತ್ತಿದ್ದಾರೆ. ಆ ಶಬ್ದವನ್ನು ರೆಕಾರ್ಡಿನಿಂದ ಕಿತ್ತುಹಾಕಿಸಬೇಕೆಂದು ಕೇಳಿಕೊಳ್ಳುತ್ತೇನೆ

MR. DEPUTY SPEAKER.— The hon. member is introducing an issue which is otherwise clear. The rule is that on cannot make an allegation against a person who is not present to defend himself in the House.

SRI S. M. SEERNALI CHANDRASHEKAR.—My submission it that he is castieg aspersions against me ಇದೇ ತರಹ ಈ ಮಾನ್ಯ ಸದಸ್ಯರು ನನ್ನ ಬಗ್ಗೆ ಕಳೆದ ಎರಡುವರೆ ವರ್ಷಗಳಿಂದಲೂ ಮಾತನಾಡುತ್ತಿದ್ದಾರೆ.

SRI D. DEVARAJ URS.—They are political rivals. ಮಾನ್ಯ ಚಂದ್ರಶೇಖರ ಅವರಿಗೂ ಹೀಗೆ ಮಾತನಾಡಲು ಮತ್ತೆ ಅವಕಾಶ ಸಿಕ್ಕಿದಾಗ ಅವರು ಇಂಥ ಸದಸ್ಯರಿಗೆ ಇಂದಿರಾ ಗಾಂಧಿಯವರ ಹೆಸರನ್ನೆತ್ತಲು ಯೋಗ್ಯತೆ ಇಲ್ಲ ವಿಂದು ಹೇಳಿದರಾಯಿತು.

ಶ್ರೀ ಕೋಣಂದೂರೂ ಲಿಂಗಪ್ಪ.— ಹೇಳಿ. ಅದಕ್ಕೆ ನನಗೇನೂ ವಿರೋಧವಿಲ್ಲ. ಏಕೆಂದರೆ ನಾನು ಎಂದೂ ಆ ಇಂದಿರಾಗಾಂಧಿಯವರ ಹೆಸರೆತ್ತಲು ಇಷ್ಟಪಡುವುದಿಲ್ಲ. ಅವರನ್ನು ಸ್ತೋತ್ರಮಾಡತಕ್ಕ ಹವ್ಯಾಸ ನನಗಿಲ್ಲ. ದೇಶದಲ್ಲಿ ಈಗ ಎದ್ದಿರತಕ್ಕ ಗೊಂದಲ ತಗ್ಗಬೇಕಾದರೆ ಬೆಲೆಗಳ ಏರುವಿಕೆಯನ್ನು ತಪ್ಪಿಸಬೇಕಾಗಿದ್ದರೆ ದೇಶದಲ್ಲಿರತಕ್ಕ ಭ್ರಷ್ಟಾಚಾರವನ್ನು ನಿಲ್ಲಿಸಬೇಕಾದರೆ. ದೇಶದಲ್ಲಿರತಕ್ಕ ಲಂಚಗೊಳಿತನವನ್ನು ನಿಲ್ಲಿಸಬೇಕಾಗಿದ್ದರೆ ಆ ಗುಜರಾತಿನಲ್ಲಿ ಯುವಕರೇನು ಒಂದು ದೊಡ್ಡ ಅಂದೋಳನ ನಡೆಸಿದರು ಅದನ್ನು ನಾವೂ ಕೂಡ ನಡೆಸಿದರೇ ಇವು ನಿಲ್ಲುತ್ತವೆ. ಆ ಬಿಹಾರಿನಲ್ಲಿ ಹೇಗೆ ಒಂದು ದೊಡ್ಡ ಅಂದೋಳನ ನಡೆಯುತ್ತಿದೆಯೋ ಅಂಥಾದ್ದು ಇಲ್ಲಿಯೂ ನಡೆಯಬೇಕು. ಇಲ್ಲದೆ ಹೋದರೆ ಕವಿಗಳು ಹೇಳಿರತಕ್ಕ ಆ ಅನ್ನದ ಇಂದ್ರವಾದ ಹೊಟ್ಟೆಗೆ ಅತ್ಯಗತ್ಯವಾದ ಆಹಾರಧಾನ್ಯಗಳ ಅಭಾವಕಾಲದಲ್ಲಿ ಈ ಬೆಲೆಗಳು ಇಳಿಯದಿದ್ದರೆ ಬಹಳ ಕಷ್ಟವಾಗುತ್ತದೆ. ಅಲ್ಲದೆ ಮುಖ್ಯವಾಗಿ ಈ ಆಹಾರದ ಅಭಾವಕ್ಕೆ ನಮ್ಮಲ್ಲಿ ಇನ್ನೂ ಒಂದು ಕಾರಣ ಇದೆ, ಅದನ್ನು ಯಾರೂ ಹೇಳಲಿಲ್ಲ. ಅದು ಯಾವುದೆಂದರೆ. ನಮ್ಮ ರಾಷ್ಟ್ರದಲ್ಲಿ ಒಟ್ಟು

ಇಲಿಗಳ ಸಂಖ್ಯೆ ೧೫೦ ಕೋಟಿಗೆ ಏರಿದೆ. ಒಂದು ಇಲಿಗೆ ಒಂದು ದಿನಕ್ಕೆ ಅರ್ಧ ಕೆ. ಜಿ, ದವಸ ಬೇಕು. ಇಂಥ ಇಲಿಗಳನ್ನು ಹಿಡಿದು ದೇಶಕ್ಕೆ ಉಪಕಾರ ಮಾಡತಕ್ಕ ಶಕ್ತಿಯಿಲ್ಲದ ಈ ಇಂದಿರಾ ಗಾಂಧಿ ಮತ್ತು ದೇವರಾಜ ಅರಸರ ಸರ್ಕಾರಕ್ಕೆ ಈ ಬ್ಲಾಕ್ ಮಾರ್ಕೆಟಿಯರುಗಳನ್ನು ಹಿಡಿಯುವುದಕ್ಕೆಲ್ಲಿಂದ ಶಕ್ತಿಬರಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ).— ಸ್ವಾಮಿ : ಅಧ್ಯಕ್ಷರೇ : ಈಗ ಸಭೆಯ ಮುಂದೆ ಚರ್ಚೆಗೆ ಬಂದಿರತಕ್ಕ ನಿರ್ಣಯದ ವಿಚಾರದಲ್ಲಿ ನಾನು ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಈಗ ಚರ್ಚೆಗೆ ಬಂದಿರತಕ್ಕ ವಿಷಯ ಬಹಳ ಮುಖ್ಯವಾದುದು ಈ ದಿವಸ ಪ್ರತಿ ಒಬ್ಬ ಪ್ರಜೆಯೂ ಕಷ್ಟದಲ್ಲಿ ಸಿಕ್ಕಿ ಏನೇನು ಕಷ್ಟಗಳನ್ನು ಅನುಭವಿಸುತ್ತಿದ್ದಾನೆಂಬ ವಿಷಯವನ್ನು ನಾವೀಗ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ ಪ್ರತಿದಿವಸ, ಪ್ರತಿ ತಿಂಗಳು ಮತ್ತು ಪ್ರತಿ ವರ್ಷವೂ ಇಲ್ಲಿ ದವಸಧಾನ್ಯಗಳ ಬೆಲೆ ಹಾಗೂ ಇನ್ನಿತರ ಅಗತ್ಯವಸ್ತುಗಳ ಬೆಲೆ ಏರುತ್ತಲೇ ಇದೆ. ಆದರೆ ಈ ವಿಚಾರದಲ್ಲಿ ಕೆಲವರು ಹೇಳುತ್ತಾರೆ ಹಿಂದಿದ್ದ ಸರ್ಕಾರಗಳು ಮಾಡಿದ ಅನ್ಯಾಯ ಮತ್ತು ಅಶ್ರದ್ಧೆಗಳು ಇದಕ್ಕೆ ಕಾರಣ ಎಂದು, ಆದರೆ ನನಗೆ ಕಂಡು ಬರುತ್ತಿರುವಂತೆ ಈ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದಲೂ ಇಲ್ಲಿ ಈ ದವಸ ಧಾನ್ಯಗಳ ಹಾಗೂ ಇನ್ನಿತರ ಅಗತ್ಯವಸ್ತುಗಳ ಬೆಲೆ ಏನು ಏರಿದೆ ಇಷ್ಟು ಹಿಂದೆ ಎಂದೂ ಏರಿರಲಿಲ್ಲ ಎಂದು ಹೇಳಿದರೆ ಅದನ್ನು ಎಲ್ಲರೂ ಒಪ್ಪುತ್ತಾರೆಂದು ಭಾವಿಸುತ್ತೇನೆ. ಮತ್ತು ಹಿಂದೆ ಎಂದೂ ಇಷ್ಟು ಅಭಾವ ಕೂಡ ಇರಲಿಲ್ಲ ಎಂದು ಹೇಳಬಲ್ಲೆ. ಈ ದಿವಸ ಇಲ್ಲಿ ಈ ೮ ದಿನಗಳಲ್ಲಿದ್ದ ಬೆಲೆ ಮುಂದಿನ ೮ ದಿನಗಳಲ್ಲಿ ಇರುವುದಿಲ್ಲ. ಆ ಮುಂದೆ ೮ ದಿನಗಳಲ್ಲಿದ್ದ ಬೆಲೆ ಅದರ ಮುಂದಿನ ೮ ದಿನಗಳಲ್ಲಿರುವುದಿಲ್ಲ. ಹೀಗೆ ಇದು ಏರುತ್ತಲೇ ಹೋಗುತ್ತಿದೆ. ಇದಕ್ಕೆ ಸರ್ಕಾರದ ನೀತಿಯೂ ಕೂಡ ಒಂದು ರೀತಿಯಲ್ಲಿ ಹೊಣೆ ಎಂದು ಹೇಳಿದರೆ ತಪ್ಪಿಲ್ಲ. ಇಲ್ಲಿ ಮೊದಲು ಆಹಾರ ಧಾನ್ಯಗಳ ಉತ್ಪನ್ನ ಜಾಸ್ತಿಯಾಗದ ವಿನಾ ಈ ಬೆಲೆಗಳು ತಗ್ಗುವುದಿಲ್ಲ. ಆಹಾರ ಪದಾರ್ಥಗಳನ್ನು ಹೆಚ್ಚು ಬೆಳೆಯಲು ಸರ್ಕಾರದವರು ರೈತರಿಗೆ ಸರಿಯಾಗಿ ಗೊಬ್ಬರವನ್ನು ಸರಬರಾಯಿ ಮಾಡುತ್ತಿಲ್ಲ, ಮತ್ತು ಅವರು ಬೆಳೆದ ಧಾನ್ಯಗಳನ್ನು ಜಿಲ್ಲೆಯಿಂದ ಜಿಲ್ಲೆಗೆ ಸಾಗಿಸಲು ಅವಕಾಶ ಕೊಡುತ್ತಿಲ್ಲ. ಇದೂ ಕೂಡ ಈ ಬೆಲೆಗಳ ಏರಿಕೆಗೊಂದು ಕಾರಣವಾಗಿದೆ. ರೈತರಿಗೆ ಸರ್ಕಾರದವರು ೬—೧೦ ಕೆ. ಜಿ. ಗೊಬ್ಬರ ಕೊಟ್ಟರೆ ಅವರೇನು ಬೆಳೆದಾರು ? ದೇಶದಲ್ಲಿ ಆಹಾರದ ಉತ್ಪನ್ನವಾದರೂ ಹೇಗೆ ಜಾಸ್ತಿಯಾದೀತು ?

1-00 P.M.

ಒಂದು ಕಡೆ ಅದನ್ನು ಸೊಸೈಟಿಗಳ ಮುಖಾಂತರ ಮಾರಿಸಬೇಕೆಂದು ಪ್ರಯತ್ನ ಮಾಡುತ್ತೀರಿ ಮತ್ತೊಂದು ಕಡೆ ಅದನ್ನು ಓಪನ್ ಮಾರ್ಕೆಟ್ಟಿನಲ್ಲಿ ಎಷ್ಟೋ ಜನರು ಬ್ಲಾಕ್‌ನಲ್ಲಿ ಮಾರುವುದಕ್ಕೆ ಅವಕಾಶವಿರುತ್ತದೆ. ಕಂಟ್ರೋಲ್ ರೇಟ್‌ನಲ್ಲಿ ಮಾರತಕ್ಕ ಪದಾರ್ಥಗಳನ್ನು ಬ್ಲಾಕ್‌ನಲ್ಲಿ ಮಾರುವುದಕ್ಕೆ ಎಂದೂ ಅವಕಾಶ ಕೊಡಬಾರದು, ಹೊರಗಡೆಯವರು ಯಾರೇ ಆಗಲೀ ಕಂಟ್ರೋಲ್ ರೇಟ್‌ನಲ್ಲಿ ಮಾರತಕ್ಕ ಪದಾರ್ಥಗಳನ್ನು ಬ್ಲಾಕ್‌ನಲ್ಲಿ ಮಾರುವುದಕ್ಕೆ ಸರ್ಕಾರದವರು ಅವಕಾಶ ಕೊಡಬಾರದು, ಸರ್ಕಾರದವರೇ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಇನ್ನುಮುಂದೆ ರೈತರಿಗೆ ಕೊಡತಕ್ಕ ಗೊಬ್ಬರವನ್ನು ಕಂಟ್ರೋಲ್ ರೇಟಿನಲ್ಲಿ ಒದಗಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು- ಬೇರೆ ಯಾರೂ ಅದನ್ನು ಡೀಲ್ ಮಾಡಬಾರದು ಇಲ್ಲವೇ ಓಪನ್ ಮಾರ್ಕೆಟ್‌ನಲ್ಲಿ ಅದನ್ನು ಮಾರುವುದಕ್ಕೆ ಅವಕಾಶ ಮಾಡಿಕೊಡಬೇಕು. ಆಗ ಎಷ್ಟು ಬೇಕಾದರೂ ಹೊರಗಡೆಯಿಂದ ಗೊಬ್ಬರವನ್ನು ಅಂತಹವರು ತರಿಸಿಕೊಂಡು ಕಡಿಮೆ ಬೆಲೆಯಲ್ಲಿ ಮಾರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಇದರಿಂದ ಎರಡು ಕಡೆಯವರಿಗೂ ಒಂದು ರೀತಿಯ ಅನುಕೂಲವುಂಟಾಗುತ್ತದೆ. ಈ ರೀತಿಯಾದ ವ್ಯವಸ್ಥೆ ಇಲ್ಲದೆ ರೈತರಿಗೆ ಬಹಳವಾಗಿ ಕಷ್ಟವಾಗಿದೆ, ರೈತರು ಗೊಬ್ಬರವನ್ನು ಸುಲಭವಾಗಿ ಮಾರುವುದಕ್ಕೆ ಅವಕಾಶವಿಲ್ಲ. ಕಾಸ್ಟ್ ಆಫ್ ಕಲ್ಟಿವೇಷನ್ ಈಗ ಜಾಸ್ತಿಯಾಗುತ್ತಿದೆ. ಗೊಬ್ಬರ ಕಂಟ್ರೋಲ್ ರೇಟ್‌ನಲ್ಲಿ ಸಿಗದೇ ಇರುವುದರಿಂದ, ಅದನ್ನು ಬ್ಲಾಕ್‌ನಲ್ಲಿ ಕೊಂಡು ಬೆಳೆಯಲು ಬಹಳ ಕಷ್ಟವಾಗುತ್ತಿದೆ. ಬೆಳೆದಂಥ ಧಾನ್ಯಗಳನ್ನೂ ಸಹ ಅವನು ಸುಲಭವಾಗಿ ಮಾರಲು ಅವಕಾಶವಿಲ್ಲ. ಹೆಚ್ಚಿನ ಬೆಲೆಗೂ ಮಾರುವುದಕ್ಕೆ ಅವಕಾಶವಿಲ್ಲ. ಇದೂ ಅಲ್ಲದೆ ಅವನು ತನ್ನ ಮನೆಯ ಆಸ್ತಿಯ ಬಗ್ಗೆ ಡಿಕ್ಲರೇಷನ್ ಕೊಡಬೇಕು, ಮತ್ತು ಅವನಲ್ಲಿರತಕ್ಕ ಸಾಮಾನುಗಳನ್ನು ಸೀಜ್ ಮಾಡುವ ಪರಿಸ್ಥಿತಿ ಬೇರೆ ಈಗ ಒದಗುತ್ತದೆ. ಆದ್ದರಿಂದ ಈಗ ಅವನು ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವುದಕ್ಕೆ ಹೋಗುತ್ತಾ ಇದ್ದಾನೆ. ಫುಡ್ ಕ್ರಾಪ್ಸ್ ಬೆಳೆಯುವುದನ್ನು ಕಡಿಮೆ ಮಾಡುತ್ತಿದ್ದಾನೆ.

(ಶ್ರೀ ಎಂ. ವೆಂಕಟಲಿಂಗಯ್ಯ)

ಆದ್ದರಿಂದ ಫುಡ್‌ಕ್ರಾಪ್ಸ್ ಬೆಳೆಯುವುದೂ ಕಡಿಮೆಯಾಗುತ್ತದೆ. ಇನ್ನು ಪಟ್ಟಣಗಳ ವಿಷಯ ಹೇಳುವುದಾದರೆ, ಒಂದು ಕಡೆ ಸೊಸೈಟಿಗಳಲ್ಲಿ ಹಾಗೂ ಡಿಪೋಗಳಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಕಂಟ್ರೋಲ್ ರೇಟ್‌ನಲ್ಲಿ ಅನೇಕ ಪದಾರ್ಥಗಳನ್ನು ಕೊಡುತ್ತಿದಾರೆ. ಹೊರಗಡೆಯೂ ಅಂತಹ ಪದಾರ್ಥಗಳನ್ನು ಮಾರುವುದಕ್ಕೆ ವರ್ತಕರಿಗೆ ಅವಕಾಶ ಕೊಡುತ್ತಿದ್ದಾರೆ. ಅವರು ಕಂಟ್ರೋಲ್ ಪದಾರ್ಥಗಳನ್ನು ಹೇಗೋ ಅನುಸರಿಸಿಕೊಂಡು ಪ್ರೈವೇಟ್ಟಾಗಿ ಕೊಂಡುಕೊಂಡು ತಂತಮ್ಮ ಅಂಗಡಿಗಳಲ್ಲಿ ಹೆಚ್ಚಿಗೆ ಸ್ಟಾಕ್‌ಮಾಡಿ ಬ್ಯಾಂಕ್‌ಗಳಿಂದ ಬಂದಂಥ ಫೆಸಿಲಿಟೀಸ್‌ನಿಂದ ಬ್ಲಾಕ್ ಮಾರ್ಕೆಟ್ಟಿನಲ್ಲಿ ಅನೇಕ ಪದಾರ್ಥಗಳನ್ನು ಮಾರುತ್ತಾ ಹೆಚ್ಚಿಗೆ ಹಣಸಂಪಾದನೆ ಮಾಡುತ್ತಿದ್ದಾರೆ ಇದು ನಿಜವಾಗಿಯೂ ಸರಿಯಲ್ಲ, ಆದ್ದರಿಂದ ಈಗ ಯಾವುದಾದರೂ ಒಂದು ವ್ಯವಸ್ಥೆಯನ್ನು ಸರ್ಕಾರದವರು ಕೂಡಲೇ ಮಾಡಬೇಕು. ಪೂರ್ಣವಾಗಿ ಸರ್ಕಾರವೇ ಜವಾಬ್ದಾರಿ ವಹಿಸಿಕೊಂಡು ಎಲ್ಲ ಪದಾರ್ಥಗಳನ್ನು ಕಂಟ್ರೋಲ್ ರೇಟಿನಲ್ಲಿ ಜನರಿಗೆ ಒದಗಿಸಬೇಕು. ಇಲ್ಲವಾದರೆ, ಹೊರಗಡೆ ಎಲ್ಲ ಪದಾರ್ಥಗಳನ್ನೂ ಓಪನ್ ಮಾರ್ಕೆಟ್ಟಿನಲ್ಲಿ ಮಾರುವುದಕ್ಕೆ ಅವಕಾಶವನ್ನು ಕೊಡಬೇಕು. ಆ ಮೂಲಕ ಯಥೇಚ್ಛವಾಗಿ ಎಲ್ಲ ಸಾಮಾನುಗಳನ್ನು ಬಹಿರಂಗವಾಗಿ ಮಾರ್ಕೆಟ್ಟಿನಲ್ಲಿ ಮಾರುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಿ, ಎಲ್ಲ ಪದಾರ್ಥಗಳಿಗೂ ಒಂದು ಕಂಟ್ರೋಲ್ ಪ್ರೈಸನ್ನು ನಿಗದಿಮಾಡಿ, ವರ್ತಕರು ಎಂತಹ ಸಂದರ್ಭದಲ್ಲಿಯಾದರೂ ಅವುಗಳ ಬೆಲೆಗಳನ್ನು ಹೆಚ್ಚು ಮಾಡದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಈ ಬಗ್ಗೆ ಸರ್ಕಾರದವರು ಯಾವುದಾದರು ಒಂದು ತೀರ್ಮಾನಕ್ಕೆ ಬರಬೇಕು. ಈ ರೀತಿಯಾಗಿ ಸರ್ಕಾರದವರು ಕಂಟ್ರೋಲ್ ಮಾಡುವುದರಿಂದ ಬೇರೆ ಯಾವರಿಗೆ ಅಂತಹ ಪದಾರ್ಥಗಳು ಸಿಗದಂತೆ ಆಗಿದೆ ಮತ್ತು ಅನೇಕ ಕಡೆಗಳಲ್ಲಿ ಈಗ ಆರ್ಟಿಫಿಷಿಯಲ್ ಸ್ಕೇರ್ಸಿಟಿ ಆಗಿವೆ. ಸರ್ಕಾರದವರು ಈಗ ಕಂಟ್ರೋಲನ್ನು ಆದಷ್ಟು ಜಾಗ್ರತೆಯಾಗಿ ತೆಗೆದರೆ ಧಾರಣೆ ವಾಸಿಗಳ ಬೆಲೆ ನಿಜವಾಗಿ ಇಳಿಯುವುದಕ್ಕೆ ಅವಕಾಶವಾಗುತ್ತದೆ. ಈಗ ಆರ್ಟಿಫಿಷಿಯಲ್ ಸ್ಕೇರ್ಸಿಟಿ ಇಂತಹ ಕಂಟ್ರೋಲ್‌ಗಳಿಂದಲೇ ಬಂದಿದೆ. ಜನಗಳು ಅನುಭವಿಸುತ್ತಿರುವ ಕಷ್ಟವನ್ನು ಪರಿಹಾರ ಮಾಡುವುದಕ್ಕಾಗಿ ಸರ್ಕಾರದವರು ಕೂಡಲೇ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು, ಆಗ ಮಾಮೂಲಾಗಿ ಎಲ್ಲ ಪದಾರ್ಥಗಳ ಬೆಲೆ ಇಳಿಯುವುದಕ್ಕೆ ಅವಕಾಶವಾಗುತ್ತದೆ ಇದೇ ರೀತಿಯಲ್ಲಿ ಸಿಮೆಂಟ್ ಆಗಲೀ ಅಥವಾ ಇನ್ನು ಯಾವ ಪದಾರ್ಥವೇ ಆಗಲ್ಲಿ ಹೊರಗಡೆಯಲ್ಲಿ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದರೆ, ಅಂಥಾದ್ದಕ್ಕೆ ಲೈಸೆನ್ಸ್ ತೆಗೆದು ಕೊಳ್ಳಬೇಕಾಗಿದ್ದರೆ, ಸಂಬಂಧಪಟ್ಟ ಇಲಾಖೆಗಳಲ್ಲಿ ಸಿಬ್ಬಂದಿಯವರಿಗೆ ಮಾಮೂಲು ಕೊಡುವುದನ್ನು ಕೊಟ್ಟು ತೆಗೆದು ಕೊಳ್ಳಬೇಕಾದ ಪರಿಸ್ಥಿತಿ ಈಗ ಬಂದೊದಗಿದೆ. ಅನೇಕ ಬಡವರಿಗೆ ಲೈಸನ್ ಇದರಿಂದ ಸಿಗುವುದಿಲ್ಲ ಪರ್ಮಿಟ್‌ಗಳನ್ನೂ ಸಹ ಅವರಿಗೆ ಕೊಡುತ್ತಿಲ್ಲ. ಕೇವಲವರಿಗೆ ಮಾತ್ರ ಅದು ಸಿಗುತ್ತದೆ. ಮತ್ತೆ ಕೆಲವರು ಅನೇಕರಿಗೆ ದುಡ್ಡು, ಕಾಸು ಕೊಟ್ಟು ಅದನ್ನು ತೆಗೆದು ಕೊಳ್ಳುವ ಪರಿಸ್ಥಿತಿ ಬಂದಿದೆ. ಪ್ರತಿಯೊಂದು ಪದಾರ್ಥಕ್ಕೂ ಈಗ ಸರ್ಕಾರದವರು ಕಂಟ್ರೋಲ್ ಮಾಡುತ್ತಾ ಇರುವುದರಿಂದ ಬಹಳವಾಗಿ ದೇಶದಲ್ಲಿ ಭ್ರಷ್ಟಾಚಾರ, ಅಕ್ರಮ, ಅನ್ಯಾಯ, ಲಂಚಕೋರತನಕ್ಕೆ ಅವಕಾಶವಾಗಿದೆ. ಆದ್ದರಿಂದ ಕೂಡಲೇ ಈಗ ಎಲ್ಲ ಪದಾರ್ಥಗಳಿಗೂ ಇರುವಂಥ ಕಂಟ್ರೋಲನ್ನು ತೆಗೆದು ಯಥೇಚ್ಛವಾಗಿ ಎಲ್ಲ ಪದಾರ್ಥಗಳನ್ನು ಓಪನ್ ಮಾರ್ಕೆಟ್ಟಿನಲ್ಲಿ ಮಾರುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಿಜವಾಗಿಯೂ ಈಗಿನ ಆರ್ಟಿಫಿಷಿಯಲ್ ಸ್ಕೇರ್ಸಿಟಿ ಹೋಗುತ್ತದೆ. ಅನೇಕ ಜನರಿಗೆ ಹೆಚ್ಚಿನ ಅನುಕೂಲವುಂಟಾಗುತ್ತದೆ.

ಕೊನೆಯದಾಗಿ ಒಂದು ಮಾತು, ಇಲ್ಲಿ ನನಗೆ ಸಾಕಷ್ಟು ಕಾಲಾವಕಾಶ ಇಲ್ಲದೇ ಇದ್ದುದರಿಂದ ನಾನು ಇನ್ನೂ ಹೆಚ್ಚಿಗೆ ಮಾತನಾಡಲು ಸಮಯ ಸಿಗದೇ ಇದ್ದುದರಿಂದ ಕೇವಲ ಒಂದೆರಡು ಮಾತುಗಳನ್ನು ಆಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Madam Speaker in the Chair

† ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಯವರು) :—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಶ್ರೀಮಾನ್ ಶಾಮಣ್ಣನವರು ಈ ಠರಾವನ್ನು ಮಂಡಿಸಿದಾಗ ಈ ಸಭೆಯಲ್ಲಿರಲಿಲ್ಲ. ಆದ್ದರಿಂದ ಅವರು ಏನು ಹೇಳಿದರೆಂಬುದು ನನಗೆ ಗೊತ್ತಾಗಲಿಲ್ಲ. ಆದರೆ ಬೇರೆ ಸದಸ್ಯರು ಇಲ್ಲಿ ಮಾತನಾಡಿದ ಧಾಟಿ ನೋಡಿದರೆ, ಅವರು ಹೇಳಿರುವುದು ಏನೆಂಬುದು ತಿಳಿಯುವುದಕ್ಕೆ ಸಾಧ್ಯವಾಗಿದೆ. ಅನೇಕ ವಿರೋಧಪಕ್ಷದ ಸದಸ್ಯರೂ ಸಹ ಈ ಒಂದು ಠರಾವಿನ ಬಗ್ಗೆ ಮಾತನಾಡಿದ್ದಾರೆ. ಮಾತನಾಡಿದವರೂ ಸಹ ಈಗಾಗಲೇ ಅಲ್ಲಿ ಮಾತನಾಡಿ ಹೊರಟುಹೋಗಿದ್ದಾರೆ. ಮಾತನಾಡಿದವರ ಪೈಕಿ ಇಲ್ಲಿ ಈಗ ಯಾರು ಇದ್ದಾರೋ ಅವರಿಗೆ ನಾನು ಅಭಿನಂದಿಸಬೇಕಾಗಿದೆ. ಇಲ್ಲಿ ಈಗ ಮಾನ್ಯ ಶ್ರೀ ಲಿಂಗಪ್ಪನವರೂ ಮತ್ತು ಶ್ರೀ

ಬಂಗಾರಪ್ಪನವರೂ ಸಹ ಇದ್ದಾರೆ. ಅವರಿಗೆ ತೋಚಿದ್ದು ಹೇಳಿ ನನ್ನ ಉತ್ತರಕ್ಕಾಗಿ ನಿರೀಕ್ಷಣೆ ಮಾಡುತ್ತಾ ಇರುವುದರಿಂದ, ಅವರಿಗೂ ನಾನು ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಇಲ್ಲಿ ಈಗ ಅನೇಕರು ಮಾತನಾಡಿದ್ದರಲ್ಲಿ ಇವರಿಗೆ ಪ್ರಪಂಚದಲ್ಲಿ ನಮ್ಮ ದೇಶದಲ್ಲಿ ಅದರಲ್ಲಿಯೂ ನಮ್ಮ ಸ್ಥಳದಲ್ಲಿ ಏನು ವಾಸ್ತವಾಂಶಗಳು ಇವೆಯೆಂಬುದು ಅವರಿಗೆ ಅರಿವು ಇಲ್ಲವೆಂಬುದು ಅವರ ಮಾತಿನಿಂದಲೇ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮಾನ್ಯ ಶ್ರೀ ಲಿಂಗಪ್ಪನವರು ಕವಿಗಳು. ಅವರಿಗೆ ಕವಿಗಳ ಪ್ರಪಂಚ. ಅವರಿಗೆ ವಾಸ್ತವವಾಗಿ ಕವಿಗಳ ಪ್ರಪಂಚವೇ ಬೇರೆಯಾಗಿರುವುದರಿಂದ ಅವರು ಕವಿಗಳ ಪ್ರಪಂಚದ ಕಡೆಯೇ ಎಲ್ಲವನ್ನೂ ಹಾಡುತ್ತಾರೆ. ಕಿಂದರಿ ಜೋಗಿ ಹಾಡಿದಂತೆ ಹಾಡುತ್ತಿದ್ದರೆ ಹೇಗೆ?

ಶ್ರೀ ಕೋಣಂದೂರು ಲಿಂಗಪ್ಪ :—ಕಿಂದರಿಜೋಗಿ ಇಲಿಗಳನ್ನು ಓಡಿಸಿದ್ದಾನೆ.

ಶ್ರೀ ಡಿ. ದೇವರಾಜ್ ಅರಸ್ :—ಮಾನ್ಯ ಸದಸ್ಯರಿಗೂ ಅವಕಾಶ ಕೊಡುತ್ತೇನೆ. ಅವರಿಗೆ ತಂಬೂರಿ ಕೊಟ್ಟು ಕಳುಹಿಸೋಣವೇ ? ಅವರಿಗೆ ಸೋಷಿಯಾಲಿಜಂ ಬಗ್ಗೆ ತುಂಬಾ ಅಭಿಮಾನ ಇರುವುದರಿಂದ ಅವರ ಒಂದು ತತ್ವಗಳ ಬಗ್ಗೆ ಅವರಿಗೆ ಎಷ್ಟು ಅಭಿಮಾನವಿದೆಯೋ ನನಗೂ ಅಷ್ಟೇ ಅಭಿಮಾನವಿದೆ. ಅವರ ತತ್ವಗಳ ಬಗ್ಗೆ ನನಗೂ ಗೌರವವಿದೆ. ಆದರೆ ವಾಸ್ತವಾಂಶಗಳನ್ನು ತಿಳಿಯದೆ ಈ ಸಭೆಯಲ್ಲಿ ಮಾತನಾಡುವುದು ಸರಿಯಲ್ಲ ಅನೇಕರು ಮಾತನಾಡುತ್ತಾ ಈ ದೇಶದಲ್ಲಿ ಬೆಲೆಗಳು ಜಾಸ್ತಿಯಾಗಿವೆಯೆಂದು ಒಂದೇ ಮಾತು ಹೇಳಿದರು. ಹಳ್ಳಿಗಳಲ್ಲಿ ಜನ ಬಹಳವಾಗಿ ಕಷ್ಟ ಪಡುತ್ತಿದ್ದಾರೆ. ಬಡವರು ಜೀವನಮಾಡುವುದೇ ಬಹಳ ಕಷ್ಟವಾಗಿದೆಯೆಂಬುದಾಗಿಯೂ ಹೇಳಿದರು. ಈ ದೇಶದಲ್ಲಿ ಕೂಲಿ ಮಾಡುವ ಜನ ಈಗ ಬಹಳ ಒಳ್ಳೆಯ ಕೂಲಿಯನ್ನು ಪಡೆಯುತ್ತಿದ್ದಾರೆ. ಅದರಿಂದಲೇ ರೈತರು ಜಮೀನು ಮಾಡುವುದಕ್ಕೆ ಈಗ ಹಿಂದುಮುಂದು ನೋಡುತ್ತಿದ್ದಾರೆ. ಕೂಲಿ ಮಾಡುವುದು ಒಳ್ಳೆಯದು ಎಂಬುದಾಗಿ ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಮಲೆನಾಡು ಪ್ರದೇಶ ಬಿಟ್ಟು ಬೇರೆ ಯಾವ ಹಳ್ಳಿಗೂ ಹೋಗಿಲ್ಲವೆಂದು ನನಗೆ ಕಾಣುತ್ತದೆ. ಅವರು ವ್ಯವಸಾಯ ಕ್ಷೇತ್ರದಲ್ಲಿ ಏನು ಕೂಲಿ ಕೊಡುತ್ತಿದ್ದಾರೆಂಬುದನ್ನು ಮಾನ್ಯ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ನೋಡಬೇಕು. ಇತ್ತೀಚೆಗೆ ಇವರು ಹೆಚ್ಚಿಗೆ ಬೆಂಗಳೂರಿನಲ್ಲಿಯೇ ಇದ್ದಾರೆ. ಅಸೆಂಬ್ಲಿ ಇಲ್ಲದೇ ಇರುವಾಗಲೂ ಸಹ ಇವರು ಗದ್ದೆಗೆ ಹೋಗುವುದೇ ಇಲ್ಲ. ಟಚ್ ಇನ್ ಟಚ್ ಇರಬೇಕೆಂದು ಎಲ್ಲೋ ಯಾವಾಗಲೋ ಒಂದೊಂದುಸಾರಿ ಅವರ ಕ್ಷೇತ್ರಕ್ಕೆ ಹೋಗಬಹುದು. ಅವರು ಹೆಚ್ಚಿಗೆ ಇರುವುದು ಬೆಂಗಳೂರಿನಲ್ಲಿಯೇ.

ಶ್ರೀ ಕೋಣಂದೂರು ಲಿಂಗಪ್ಪ :—ಅಲ್ಲಿಂದ ಮಾಹಿತಿಯನ್ನು ತರಿಸಿಕೊಳ್ಳಿ. ಎಲ್ಲವೂ ನಿಮಗೆ ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್ :—ಆದ್ದರಿಂದ ಇವರಿಗೆ ವಾಸ್ತವಾಂಶ ಸರಿಯಾಗಿ ಗೊತ್ತಿಲ್ಲ. ಕೇವಲ ಒಂದು ಆಳು ಒಂದು ಜೊತೆ ಎತ್ತುಗಳನ್ನು ಕಟ್ಟಿಕೊಂಡು ನೇಗಿಲು ಊಳಿದರೆ, ಬೆಳಿಗ್ಗೆ ಎಂಟೂವರೆ ಗಂಟೆಯಿಂದ ೨ ಗಂಟೆಯವರೆಗೆ ಕೆಲಸಮಾಡಿದರೆ ೧೦ ರೂಪಾಯಿಗಳ ಕೂಲಿಯನ್ನು ಪಡೆಯುತ್ತಾನೆ. ಅವನು ಕೇವಲ ಒಂದು ಜೊತೆ ಎತ್ತುಗಳನ್ನು ತೆಗೆದುಕೊಂಡು ಬಂದು ಉತ್ತರೆ........

ಅಧ್ಯಕ್ಷರು : ಜೊತೆಗೆ ಊಟ ಕೊಟ್ಟು.........

ಶ್ರೀ ಡಿ ದೇವರಾಜ್ ಅರಸ್ :—ನಾನು ಹೇಳುವುದೇನೆಂದರೆ, ಈಗ ಕೂಲಿ ಬಹಳ ಜಾಸ್ತಿಯಾಗಿದೆ. ಇವತ್ತು ಒಂದು ಸೇರು ರಾಗಿಯಾಗಲೀ, ಜೋಳವಾಗಲೀ ೮೦ ಪೈಸೆಗಳಿಗಾಗಲೀ ಅಥವಾ ಒಂದು ರೂಪಾಯಿಗಾಗಲೀ ಸಿಗುತ್ತಾ ಇಲ್ಲ. ಹಿಂದೆ ಒಂದು ಕಾಲದಲ್ಲಿ ಸರ್ಕಾರದವರೇ ಇವುಗಳ ವಹಿವಾಟನ್ನು ತೆಗೆದುಕೊಳ್ಳಲಿ ಎಂಬುದಾಗಿ ರೈತರೇ ಹೇಳುತ್ತಿದ್ದರು. ಈಗ ಎಲ್ಲಾ ಪದಾರ್ಥಗಳ ಬೆಲೆ ಜಾಸ್ತಿಯಾಗಿದೆ ಎನ್ನುವಾಗ ಕೂಲಿಯೂ ಕೂಡ ಜಾಸ್ತಿಯಾಗಿದೆ ಸಾಧಾರಣವಾಗಿ ಒಬ್ಬರಿಗೆ ಒಂದು ದಿವಸಕ್ಕೆ ೩ ರೂಪಾಯಿಗಳಿಗಿಂತ ಕಡಿಮೆ ಯಾವಾಗಲೂ ಬರವುದಿಲ್ಲ. ಈ ಪರಿಸ್ಥಿತಿ ಇರುವಾಗ ಕೂಲಿ ಮಾಡತಕ್ಕವರಿಗೇ ಬೆಲೆಗಳು ಹೆಚ್ಚಿದ ಹಾಗೆ ಅವರಿಗೆ ಸಂಪಾದನೆಯ ಶಕ್ತಿಯೂ ಹೆಚ್ಚಾಗಿದೆ. ಆದ್ದರಿಂದ ಇದನ್ನೆಲ್ಲಾ ನಾನು ಹೇಳುತ್ತಿದ್ದೇನೆ ಎಂದು ಪದಾರ್ಥಗಳ ಬೆಲೆಗಳು ಹೆಚ್ಚಾದದ್ದು ಸರಿ ಎಂದು ನಾನು ಹೇಳುವುದಿಲ್ಲ. ಕೂಲಿಗಾರರಿಗೂ ಬಹಳ ತೊಂದರೆಯಾಗಿದೆ. ಆದರೆ ಈ ಸರ್ಕಾರ ಬಂದ ಮೇಲೆ ಹೀಗೆ ಆಯಿತು ಎಂದು ಕೆಲವು ಮಾನ್ಯ ಸದಸ್ಯರು ಏನು ಮಾತನಾಡಿದರು ಅದು ಸರಿಯಾದ ಮಾತಲ್ಲ. ಅವರಿಗೆ ವಿಚಾರ ಸರಿಯಾಗಿ ತಿಳಿದಿಲ್ಲ. ಹೋದ ಸಾರಿ ಇದೇ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಸದಸ್ಯರು ಏನು ಹೇಳಿದ್ದರು ಅದನ್ನು ನಾನು ಕೇಳಿದ್ದೇನೆ. ಈಗಲೂ ಅವರು ಹೇಳಿದ್ದನ್ನು ಕೇಳಿದ್ದೇನೆ. ಅವರು ಹೊಸವಿಚಾರಗಳನ್ನು ತಂದು ಹೇಳುತ್ತಾರೆ, ಹಣದ ಉಬ್ಬರ, ಬೆಲೆಯ ಏರಿಕೆಯ ವಿಚಾರ ಇವುಗಳನ್ನು ಬಹಳ ಸ್ಟಡಿ ಮಾಡಿ ಸರ್ಕಾರಕ್ಕೆ ಸಲಹೆ ಕೊಡುತ್ತಾರೆ ಎಂದು ನೋಡಿದಾಗ ಮಾನ್ಯ ಸದಸ್ಯರು ಯಾವ

(ಶ್ರೀ ಡಿ. ದೇವರಾಜ ಅರಸ್)

ಸಲಹೆಯನ್ನೂ ಹೊಸದಾಗಿ ಹೇಳಿದಹಾಗೆ ಕಾಣುವುದಿಲ್ಲ. ಹಿಂದೆ ಏನು ಹೇಳಿದ್ದರೋ ಅದನ್ನೇ ಈಗಲೂ ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಹೆಚ್ಚಿಗೆ ಮಾಹಿತಿಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿ ಎಂದು ನನ್ನ ಸಲಹೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ಹೆಚ್ಚು ವಿಷಯಗಳನ್ನು ತಿಳಿದುಕೊಂಡು ಬಂದು ಏನಾದರು ಸಲಹೆ ಕೊಟ್ಟರೆ ಅದನ್ನು ನಾನು ಖಂಡಿತವಾಗಿಯೂ ಸ್ವಾಗತಿಸುತ್ತೇನೆ. ಮಾನ್ಯ ಸದಸ್ಯರು ಮಾತನಾಡಿದ ಧಾಟಿಯನ್ನು ನೋಡಿದರೆ ಅವರು ಯಾವ ವಿಷಯದಲ್ಲೂ ಹೆಚ್ಚು ತಿಳಿದು ಮಾತನಾಡುವುದಕ್ಕೆ ಪ್ರಯತ್ನ ಪಟ್ಟಹಾಗೆ ನನಗೆ ಕಾಣುತ್ತಾ ಇಲ್ಲ. ಹಣದುಬ್ಬರ ಏನಿದೆ ಅದು ಇಡೀ ಪ್ರಪಂಚದಲ್ಲೇ ಇದೆ. ಇದು ಪ್ರಪಂಚದಲ್ಲಿರತಕ್ಕ ವಿಚಾರ ಎಂದು ಹೇಳಿದಾಗ ಇವರು ಮಾತೆತ್ತಿದರೆ ಪ್ರಪಂಚದ ವಿಚಾರವನ್ನು ತರುತ್ತಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ನಾವೇನೂ ಪ್ರಪಂಚವನ್ನು ಬಿಟ್ಟು ಇನ್ನೊಂದು ಪ್ರಪಂಚದಲ್ಲಿ ಇಲ್ಲ. ಭೂಗೋಳದಲ್ಲಿ ಯಾವ ಪ್ರಪಂಚ ಇದೆ ಆ ಪ್ರಪಂಚದಲ್ಲಿ ನಾವು ಇದ್ದೇವೆ. ಆದ್ದರಿಂದ ಯಾವುದಾದರೂ ಒಂದು ದೇಶದಲ್ಲಿ ಏನಾದರೂ ಒಂದು ಬದಲಾವಣೆಯಾಗುತ್ತದೆಯೋ ಅದರ ಒಂದು ಪರಿಣಾಮ, ಅದರ ಒಂದು ಪ್ರಭಾವ ಇನ್ನೊಂದು ದೇಶದ ಮೇಲೆ ಆಗತಕ್ಕದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಇಂಥಾ ಕಾಲದಲ್ಲಿ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ಟ್ರೇಡ್ ಇವುಗಳಿಗೆ ಒಂದಕ್ಕೊಂದು ಲಿಂಕ್ ಇರುವುದರಿಂದ ಬೇರೆ ದೇಶದಲ್ಲಿ ಇವುಗಳು ಬದಲಾವಣೆಯಾಗತಕ್ಕಂಥಾದ್ದು ಕೂಡ ನಮ್ಮ ಭಾರತದ ಮೇಲೆ ಕೂಡ ಅನೇಕ ರೀತಿಯ ಪರಿಣಾಮವನ್ನುಂಟು ಮಾಡುತ್ತದೆ. ಹಣ, ಕೈಗಾರಿಕೆ ವಾಣಿಜ್ಯ ಎಲ್ಲದ್ದರ ಮೇಲೂ ಪ್ರಭಾವಉಂಟಾಗಿದೆ.

೧೯೭೨ನೇ ಇಸವಿಯಿಂದ ಈಚೆಗೆ ಕ್ಷಾಮಗಳು ಪ್ರವಾಹ ಪೀಡೆ ಇವುಗಳೆಲ್ಲವನ್ನೂ ನಾವು ಗಮನಿಸಬೇಕಾಗಿದೆ ಆದ್ದರಿಂದ ಆಗಿರತಕ್ಕ ಪರಿಣಾಮ ಏನು ಎಂಬುದನ್ನೂ ಯೋಚನೆ ಮಾಡಬೇಕಾಗಿದೆ. ನಾಲ್ಕನೆ ಪಂಚವಾರ್ಷಿಕ ಯೋಜನೆ ಮತ್ತು ೫ನೇ ಪಂಚವಾರ್ಷಿಕ ಯೋಜನೆಯ ವಿಚಾರ ಏನಿದೆ ಅದು ಗಮನಾರ್ಹವಾದ ವಿಚಾರ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯ ಮತ್ತು ಕೈಗಾರಿಕೆ ಈ ಎರಡು ಕ್ಷೇತ್ರಗಳಲ್ಲಿ ಯಾವ ರೀತಿ ಬೆಳವಣಿಗೆ ಆಗಿದೆ ಎಂದರೆ ೧೯೭೩-೭೪ನೇ ಇಸವಿಯಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷ ನಾವು ಏನೊಂದು ಗುರಿಯನ್ನು ಸಾಧಿಸಬೇಕೆಂದು ಇಟ್ಟುಕೊಂಡಿದ್ದೆವೋ ಅಷ್ಟು ಉತ್ಪಾದನೆ ವ್ಯವಸಾಯ ಕ್ಷೇತ್ರದಲ್ಲಿ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ನಾವು ನಮ್ಮ ಗುರಿಯನ್ನು ಮುಟ್ಟುವುದರಲ್ಲಿ ಟಾರ್ಗೆಟ್ ಎಷ್ಟು ಕಡಿಮೆಯಾಗಿದೆ ಎಂದರೆ ಎಣ್ಣೆ ಬೀಜಗಳು ೪೦ ಪರ್ಸೆಂಟ್ ಕಡಿಮೆಯಾಗಿದೆ. ಗ್ರೌಂಡ್‌ನಟ್ಸ್ ೭೫ ಪರ್ಸೆಂಟ್ ಕಡಿಮೆಯಾಗಿದೆ. ಜೂಟ್ ೪೦ ಒಟ್ಟು ಟಾರ್ಗೆಟ್ ೪೦ ಪರ್ಸೆಂಟ್ ಕಡಿಮೆಯಾಗಿದೆ. ಕಾಟನ್ ೫೨ ಪರ್ಸೆಂಟ್ ಕಡಿಮೆಯಾಗಿದೆ. ಆವರೇಜ್ ಗ್ರೋತ್ ರೇಟ್ ೮-೧೦ ಪರ್ಸೆಂಟ್ ಕಡಿಮೆಯಾಗಿದೆ. ಅದರ ಮೇಲೆ ಕೈಗಾರಿಕಾ ಕ್ಷೇತ್ರದಲ್ಲಿ ನಮ್ಮ ಪದಾರ್ಥಗಳ ಉತ್ಪಾದನೆ ಕಡಿಮೆಯಾಗಿದೆ. ವ್ಯವಸಾಯ ಕ್ಷೇತ್ರದಲ್ಲಿಯೂ ಕೂಡ ಇದು ಕಡಿಮೆಯಾಗಿದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷಕ್ಕೆ ಆಗಿರುವಂತಹ ಚಿತ್ರ ನಮ್ಮ ಮುಂದೆ ಇರಬೇಕಾದರೆ ಶ್ರೀಮಾನ್ ವೆಂಕಟಲಿಂಗಯ್ಯನವರು ಹೇಳುತ್ತಿದ್ದಾರೆ ನಮ್ಮ ಸರ್ಕಾರ ಬಂದ ಮೇಲೆ ಈ ರೀತಿ ಆಗಿದೆ ಎಂದು. ನಾನು ಮತ್ತೆ ಮತ್ತೆ ಅವರಿಗೆ ಹೇಳುತ್ತೇನೆ ಅವರು ಇದನ್ನೆಲ್ಲಾ ತಿಳಿದುಕೊಂಡು ಆ ರೀತಿ ಹೇಳುವುದನ್ನು ಬೆಳೆಸಿಕೊಳ್ಳುವುದು ಒಳ್ಳೆಯದು ಎಂದು. ಒಂದುವೇಳೆ ಕೋಣಂದೂರು ಲಿಂಗಪ್ಪನವರು ಈ ಬಗ್ಗೆ ಏನಾದರೂ ಹೇಳಿದ್ದರೆ ನಾನು ಅವರನ್ನು ಆಕ್ಷೇಪಣೆ ಮಾಡುವುದಿಲ್ಲ. ಏತಕ್ಕೆಂದರೆ ಅವರು ಈ ದೇಶದ ಸಮಸ್ಯೆಯ ಬಗ್ಗೆ ಯಾವುದಕ್ಕೂ ಜವಾಬ್ದಾರರಾಗಿಲ್ಲದೆ ಇರುವುದರಿಂದ. ಆದರೆ ಸಂಸ್ಥಾ ಕಾಂಗ್ರೆಸ್ಸಿನ ಶ್ರೀಮಾನ್ ವೆಂಕಟಲಿಂಗಯ್ಯನವರು ಹೇಳಿದರೆ ಹೇಗೆ ಒಪ್ಪುವುದಕ್ಕಾಗುತ್ತದೆ ? ಅವರ ಪಕ್ಷದವರು ಈಗ ಇಲ್ಲಿ ಒಬ್ಬರೂ ಇಲ್ಲ. ಅವರು ಒಬ್ಬರು ಮಾತ್ರ ಇಲ್ಲಿ ಕುಳಿತುಕೊಂಡಿದ್ದಾರೆ.

ಶ್ರೀ ಎಂ. ವೆಂಕಟಲಿಂಗಯ್ಯ :—ಈ ಸರ್ಕಾರ ಬಂದ ಮೇಲೆ ಪದಾರ್ಥಗಳ ಬೆಲೆ ಜಾಸ್ತಿಯಾಗಿರುವ ಹಾಗೆ ಹಿಂದೆಂದೂ ಈ ರೀತಿ ಬೆಲೆಗಳು ಏರಿರಲಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ವಿಷಯ ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದು. ಮಾನ್ಯ ಸದಸ್ಯರಾದ ಶ್ರೀಮಾನ್ ವೆಂಕಟಲಿಂಗಯ್ಯನವರ ಪಕ್ಷದವರು ಮಾಡಿದಂತಹ ಪಾಪದ ಫಲವನ್ನು ನಾವು ಈಗ ಅನುಭವಿಸುತ್ತಿದ್ದೇವೆಂದು ಹೇಳಿದರೆ ಅವರು ಅದಕ್ಕೆ ಏನು ಹೇಳುತ್ತಾರೆ ?

ಶ್ರೀ ಎಸ್. ಬಂಗಾರಪ್ಪ :—ಇದು ಹಳೆಯ ಕಥೆ.

ಶ್ರೀ ಡಿ. ದೇವರಾಜ ಅರಸ್ :—ಒಟ್ಟಿನಲ್ಲಿ ನಮ್ಮ ಕೈಗಾರಿಕಾ ಕ್ಷೇತ್ರ ಮತ್ತು ವ್ಯವಸಾಯ ಕ್ಷೇತ್ರದಲ್ಲಿ ನಾವು ಎಷ್ಟು ಪ್ರಮಾಣದಲ್ಲಿ ಉತ್ಪಾದನೆಯನ್ನು ಹೆಚ್ಚಿಸಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಗಿಲ್ಲ. ಉತ್ಪಾದನೆ ಕಡಿಮೆಯಾಗಿದೆ. ಈ ಬೆಲೆಯು ಏರಿಕೆಗೆ ಇದೂ ಒಂದು ಕಾರಣ. ಜನಸಂಖ್ಯೆ ಏರಿರುವುದು ಇನ್ನೊಂದು ಕಾರಣ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿರತಕ್ಕ ವಿಷಯಗಳನ್ನೂ ಸ್ವಲ್ಪ ಈ ಸಭೆಯ ಗಮನಕ್ಕೆ ತರತಕ್ಕಂಥಾದ್ದು ಸರಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ೧೯೭೩-೭೪ನೇ ಇಸವಿಯಲ್ಲಿ ಇಂಡಿಯಾದಲ್ಲಿ ಇನ್‌ಫ್ಲೇಷನ್ ರೇಟು ೩೬ ಪರ್ಸೆಂಟ್ ಆಗಿದೆಂದು ಅಂದಾಜು ಮಾಡಲಾಗಿದೆ. ಆದರೆ ಇವೊತ್ತು ಬೇರೆ ಕಡೆ ಇನ್‌ಫ್ಲೇಷನ್ ಯಾವ ರೀತಿ ಇದೆ ಎಂದರೆ ಯುನೈಟೆಡ್ ಕಿಂಗ್‌ಡಂನಲ್ಲಿ ೨೬ ಪರ್ಸೆಂಟ್, ಕೊಲಂಬಿಯಾ ಮತ್ತು ಜಪಾನ್ ೨೪ ಪರ್ಸೆಂಟ್, ಸೌತ್‌ಕೊರಿಯಾ ೨೦ ಪರ್ಸೆಂಟ್. ಪಾಕಿಸ್ಥಾನ ೧೫ ಪರ್ಸೆಂಟ್, ಆಪ್ಟ್ರೇಲಿಯಾ ೧೩ ಪರ್ಸೆಂಟ್. ಫ್ರಾನ್ಸ್ ೧೧ ಪರ್ಸೆಂಟ್. ಕೆನಡಾ ಮತ್ತು ಯು.ಎಸ್.ಎ. ೧೨ ಪರ್ಸೆಂಟ್, ಸ್ವಿಡ್ಜರ್ಲೆಂಡ್ ಆಸ್ಟ್ರಿಯಾ ೪೪ ಪರ್ಸೆಂಟ್. ಇಸ್ರೇಲ್ ೪೦ ಪರ್ಸೆಂಟ್. ಬಾಂಗ್ಲಾದೇಶ ೬೫ ಪರ್ಸೆಂಟ್.

ಈ ರೀತಿ ಬೇರೆಬೇರೆ ರಾಷ್ಟ್ರಗಳ ಲೆಕ್ಕವನ್ನು ತೆಗೆದುಕೊಂಡು ನೋಡಿದಾಗ, ಇನ್‌ಫ್ಲೇಷನರಿ ಟೆಂಡೆಂನ್ಸಿ ಎಂದು ಏನು ಹೇಳುತ್ತೇವೆ, ಅದು ಕೇವಲ ನಮ್ಮ ಇಂಡಿಯಾದೇಶಕ್ಕೆ ಮಾತ್ರ ಮೀಸಲಾದುದಲ್ಲ ಎಲ್ಲ ಕಡೆಯೂ ಇರುವುದು ಕಂಡುಬರುತ್ತಿದೆ,

ಶ್ರೀ ಸಿ ಬೈರೇಗೌಡ :—ತಾವು ಕೇವಲ ಅಮೇರಿಕಾ ಹಾಗೂ ಇನ್ನಿತರ ರಾಷ್ಟ್ರಗಳ ಉದಾಹರಣೆ ಕೊಟ್ಟಿರಿ ; ಅದೇ ರೀತಿ ಸಮಾಜವಾದಿ ರಾಷ್ಟ್ರಗಳಲ್ಲಿ ಏನು ಪರಿಸ್ಥಿತಿ ಇದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ :—ತಾವು ಸಿ. ಪಿ. ಎಂ. ನವರು ಮತ್ತು ಲೆಫ್ಟಿಸ್ಟ್ ಎಂಬುದು ನನಗೆ ಗೊತ್ತಿದೆ. ಈ ವಿಚಾರದಲ್ಲಿ ತಾವು ಇನ್ನೂ ಹೆಚ್ಚು ಅಭ್ಯಾಸ ಮಾಡಬೇಕು. ಆ ರೀತಿ ಅಭ್ಯಾಸ ಮಾಡಿದ ಮೇಲೆ ಬೇಕಾದರೆ ನಾನು ತಮ್ಮ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡುತ್ತೇವೆ

ಶ್ರೀ ಎಸ್ ಬಂಗಾರಪ್ಪ :—ಅವರು ಹೇಳುವ ರಾಷ್ಟ್ರಗಳಲ್ಲಿ ಪರಿಸ್ಥಿತಿ ಏನಿದೆ ಎಂಬುದನ್ನು ಹೇಳಿಬಿಡೀ

ಶ್ರೀ ಡಿ. ದೇವರಾಜ ಅರಸ್ :—ಆ ವಿವರಗಳು ನನ್ನ ಹತ್ತಿರವಿಲ್ಲ ; ಚೈನಾದೇಶದಲ್ಲಿ ಈ ಮೊದಲು ಪರಿಸ್ಥಿತಿ ಯಾವ ರೀತಿ ಇತ್ತು ಎಂಬುದು ನನಗೆ ಗೊತ್ತಿದೆ. ಅಲ್ಲಿ ಕ್ರಾಂತಿಯಾದ ಹೊಸದರಲ್ಲಿ ಮಾಹೋತ್ಸತುಂಗ ಅಧಿಕಾರಕ್ಕೆ ಬಂದರು. ಆ ಸಮಯದಲ್ಲಿ ಜನರಿಗೆ ತಿನ್ನಲು ಆಹಾರ ಇದರ ಕಾರಣ ಗುಬ್ಬಚ್ಚಿ, ಕಾಗೆ ಮತ್ತು ಗೂಬೆಗಳನ್ನು ಹಿಡಿದು ತಿನ್ನುವುದಕ್ಕೆ ಪ್ರಾರಂಭ ಮಾಡಿದರು.

ಶ್ರೀ ಸಿ. ಬೈರೇಗೌಡ :—ಗುಬ್ಬಚ್ಚಿ, ಕಾಗೆ ಮತ್ತು ಗೂಬೆಗಳನ್ನು ತಿಂದರೆ ಜನರು ಬದುಕುವುದಿಲ್ಲ; ಆದಕಾರಣ ಮಾನ್ಯ ಮಂತ್ರಿಗಳು ವಿಷಯವನ್ನು ಸ್ವಲ್ಪ ತಿಳಿದುಕೊಂಡು ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್ :—ಅವರು ತಿಂದಿದ್ದಾರೆ. ನಡೆದಿರತಕ್ಕಂಥ ವಾಸ್ತವಾಂಶವನ್ನೇ. ನಾನು ಹೇಳಿದ್ದು.

ಶ್ರೀ ಎಸ್. ಬಂಗಾರಪ್ಪ :—ನಮ್ಮ ದೇಶದಲ್ಲಿಯೂ ಸಹ ತಿನ್ನುತ್ತಾರೆ,

ಶ್ರೀ ಡಿ. ದೇವರಾಜ ಅರಸ್ :—ನಮ್ಮ ದೇಶದಲ್ಲಿ ಜನರು ಗುಬ್ಬಚ್ಚಿ, ಕಾಗೆ ಮತ್ತು ಗೂಬೆಗಳನ್ನು ತಿನ್ನುವುದಿಲ್ಲ. ಕೆಲವು ಜಾತಿಯ ಹಕ್ಕಿಗಳನ್ನು ಮಾತ್ರ ತಿನ್ನುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ :—ಅದರಲ್ಲಿ ತಪ್ಪೇನಿದೆ ; ಹಿಂದೆ ವಿಶ್ವಾಮಿತ್ರನು ಹಸಿವಾದಾಗ ನಾಯಿ ಮಾಂಸವನ್ನು ತಿಂದ.

ಶ್ರೀ ಡಿ. ದೇವರಾಜ ಅರಸ್ :—ಹಾಗಿದ್ದರೆ ನೀವು ನರಿ ಮಾಂಸವನ್ನು ತಿನ್ನಿ. ಅವರಿಗೆ ಅಷ್ಟೊಂದು ಕಷ್ಟ ಬಂದಿದ್ದರಿಂದ ಗುಬ್ಬಚ್ಚಿ, ಕಾಗೆ ಮತ್ತು ಗೂಬೆಗಳನ್ನು ಹಿಡಿದು ತಿಂದರು. ಇಂದು ಅಲ್ಲಿ ಗುಬ್ಬಚ್ಚಿಗಳೇ ಇಲ್ಲ. ಎಲ್ಲವನ್ನೂ ಪೂರ್ಣವಾಗಿ ತಿಂದಿದ್ದಾರೆ. ಆಹಾರದ ವಿಷಯದಲ್ಲಿ ಅವರೂ ಸಹ ಒಂದು ಹಂತದಲ್ಲಿ ಒಂದೊಂದು ರೀತಿಯ ಕಷ್ಟವನ್ನು ಅನುಭವಿಸಿದ್ದಾರೆ. ಅದನ್ನು ತಿಳಿದುಕೊಳ್ಳದೆ. ಇವರು ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳಿದರು : ಆದರೆ ಜಾರಿಗೆ ತರಲಿಲ್ಲ ಎಂದರೆ, ಅದನ್ನು ಒಂದು ದಿವಸದಲ್ಲಿ ತರುವುದಕ್ಕೆ ಸಾಧ್ಯವೇ ? ಹೊಲ ಗದ್ದೆಯನ್ನು ಉಳುಮೆ ಮಾಡಿದ ಅನುಭವ ಇಲ್ಲದಿರುವವರೂ ಸಹ ಇಂದು ಸಮಾಜವಾದದ ಬಗ್ಗೆ ಮಾತನಾಡುತ್ತಾರೆ ; ಯಾರು ಅಧಿಕಾರಕ್ಕೆ ಬಂದರೂ ನಾಳೆ ಅಥವಾ ನಾಡಿದ್ದರಲ್ಲಿ ಏನೂ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಎಸ್ ಬಂಗಾರಪ್ಪ :—ನಮಗೆ ಏನು ತಿನ್ನಿಸುತ್ತೀರಾ ಎಂಬುದನ್ನು ಹೇಳಿ ?

ಶ್ರೀ ಡಿ. ದೇವರಾಜ ಅರಸ್ :—ತಾವು ಜವಾಬ್ದಾರಿಯುತವಾಗಿ ಈ ನಿರ್ಣಯ ತಂದಿದ್ದೀರಿ ಎಂದು ನಾನು ತಿಳಿದಿದ್ದೇನೆ. ಆದಕಾರಣ ನಾನು ಜವಾಬ್ದಾರಿಯುತವಾಗಿ ನಾನು ಮಾತನಾಡುತ್ತಿದ್ದೇನೆ. ತಾವು ಸಹ ಜವಾಬ್ದಾರಿ ಅರಿತುಕೊಂಡು ಅದನ್ನು ಕೇಳಬೇಕೆಂದು ನನ್ನ ಸಲಹೆ. ಇರತಕ್ಕಂಥ ವಿಷಯಗಳನ್ನು ಮೊದಲು ತಿಳಿದುಕೊಳ್ಳೋಣ, ತಾವು ನಕ್ಕರೆ, ಲಘುವಾಗಿ ಮಾತನಾಡಿದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ :—ತಾವು ಕಾಗೆ ಗುಬ್ಬಚ್ಚಿ ಕಥೆ ಹೇಳಿದರೆ ಹೇಗೆ ?

ಶ್ರೀ ಡಿ. ದೇವರಾಜ ಅರಸ್ :—ನಾನು ಹೇಳಿದ್ದು ಕಥೆಯಲ್ಲ, ನಡೆದಿರುವುದನ್ನು ಹೇಳಿದೆ. ಕೆಲವರು ಮಾತನಾಡುವಾಗ ನೂರಾರು ಕೋಟಿ ರೂಪಾಯಿಗಳಷ್ಟು ಕಾಗದದ ಹಣ ಚಾಲಾವಣೆಯಲ್ಲಿದೆ ಎಂದು ಹೇಳಿದರು. ಈಗ ಚಲಾವಣೆಯಲ್ಲಿರುವುದು ಕಾಗದದ ಹಣವೇ ಅದರಲ್ಲಿ ಆಶ್ಚರ್ಯವೇನು ಬಂತು ? ಡಿಫಿಸಿಟ್ ಫೈನಾನ್ಸ್ ಆದರೂ ಸರಿಯೇ ವಿದ್ಯುಚ್ಛಕ್ತಿ ಯೋಜನೆಗಳನ್ನು ಕೈಗೊಳ್ಳಲು ಹಣವನ್ನು ಒದಗಿಸಬೇಕು ಎಂದು ನಾನು ಈ ಹಿಂದೆ ಹೇಳಿದಾಗ ಕೆಲವರು ನನ್ನನ್ನು ಹಾಸ್ಯ ಮಾಡಿದರು. ಇಂದು ನಮ್ಮ ದೇಶದಲ್ಲಿ ಏನು ಪರಿಸ್ಥಿತಿ ಇದೆ ಎಂಬುದನ್ನು ತಾವುಗಳು ದಯಮಾಡಿ ಕೇಳಬೇಕು. ಈಗ ನಮ್ಮ ದೇಶ ಭಾರತದಲ್ಲಿ ಡಿಫಿಸಿಟ್ ಇರತಕ್ಕಂಥ ವಿದ್ಯುಚ್ಛಕ್ತಿ ಎಷ್ಟು ಎಂದರೆ, ಒಂದು ದಿವಸಕ್ಕೆ ೨೩ ಮಿಲಿಯನ್ ಯೂನಿಟ್ಸ್. ಅಂದರೆ ೨೩ ಮಿಲಿಯನ್ ಯೂನಿಟ್ಸ್ ವಿದ್ಯುಚ್ಛಕ್ತಿ ಕಡಿಮೆ ಉತ್ಪತ್ತಿಯಾಗುತ್ತಿದೆ ಎಂದು ಅರ್ಥವಾಯಿತ್ತು: ನಾನು ಅವರೇಜ್ ಹೇಳುತ್ತಿರುವುದು. ಈ ರೀತಿ ಕಡಿಮೆ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿರುವುದರಿಂದ. ಅದರ ಒಂದು ಪರಿಣಾಮ ವ್ಯವಸಾಯ ಕ್ಷೇತ್ರದ ಮೇಲೆ ಮತ್ತು ಕೈಗಾರಿಕಾ ಕ್ಷೇತ್ರದ ಮೇಲೆ ಆಗುತ್ತಿದೆ. ಈ ರೀತಿ ಕಡಿಮೆ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿರುವುದರಿಂದ, ಕೈಗಾರಿಕಾ ಕ್ಷೇತ್ರದಲ್ಲಿ ಎಷ್ಟು ಪ್ರೊಡಕ್ಷನ್ ಆಗಬೇಕಾಗಿತ್ತೋ, ಅದಕ್ಕಿಂತ ೨೪ ಪರ್ಸೆಂಟ್ ಕಡಿಮೆ ಪ್ರೊಡಕ್ಷನ್ ಆಗುತ್ತಿದೆ, ರಾ ಮೆಟೀರಿಯಲ್ಸ್ ಸಾಕಷ್ಟು ಸಿಕ್ಕದಿರುವ ಕಾರಣ ೨೩.೧ ಪರ್ಸೆಂಟಿನಷ್ಟು ಪ್ರೊಡಕ್ಷನ್ ಕಡಿಮೆಯಾಗಿದೆ. ಮತ್ತು ಕಾರ್ಮಿಕರ ಚಳುವಳಿಯ ಕಾರಣದಿಂದ 11 ಪರ್ಸೆಂಟಿನಷ್ಟು ಪ್ರೊಡಕ್ಷನ್ ಕಡಿಮೆಯಾಗಿದೆ. ಇದೆಲ್ಲವನ್ನೂ ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಪದಾರ್ಥಗಳನ್ನು ನಾವು ಉತ್ಪಾದನೆ ಮಾಡುತ್ತೇವೆ. ಆದರೆ ಅವುಗಳಿಗೆ ಸರಿಯಾದ ಮಾರ್ಕೆಟ್ ಇರವುದಿಲ್ಲ. ಇಂಥಾದ್ದು ಒಂದೂವರೆ ಪರ್ಸೆಂಟ್ ಮಾತ್ರ. ಮತ್ತೆ ಕೆಲವು ಪದಾರ್ಥಗಳನ್ನು ಉತ್ಪಾದನೆ ಮಾಡಲು ಖರ್ಚು ಜಾಸ್ತಿ ಬೇಕಾಗುತ್ತದೆ, ಆದ ಅದರ ಮಾರ್ಕೆಟ್ ಬೆಲೆ ಮಾತ್ರ ಕಡಿಮೆ ಇರುತ್ತದೆ. ಅಂದರೆ ಶೇಕಡಾ ೫. ರಷ್ಟು ಪ್ರೈಸಸ್ ಕಡಿಮೆಯಿದೆ. ಒಟ್ಟಿನಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿಯಾಗಿರುವುದು, ಕಾರ್ಮಿಕರಿಗೆ ಜಾಸ್ತಿ ಸಂಬಳ ಕೊಡಬೇಕಾಗಿರುವುದು, ರಾ–ಮೆಟೀರಿಯಲ್‌ಗೆ ಹೆಚ್ಚು ಬೆಲೆ ಕೊಡಬೇಕಾಗಿರುವುದು, ಇವೆಲ್ಲದರ ಪರಿಣಾಮವಾಗಿ ೩೪.೫ ಪರ್ಸೆಂಟಿನಷ್ಟು ಪ್ರೊಡಕ್ಷನ್ ಕಡಿಮೆಯಾಗಿದೆ. ಇದರ ಜೊತೆಗೆ ಹೊಸದಾಗಿ ಇಂಡಸ್ಟ್ರಿಗಳು ಬೆಳೆಯದಿರುವುದಕ್ಕೆ ಕಾರಣ ಸಾಕಷ್ಟು ರಾ–ಮೆಟೀರಿಯಲ್ಸ್ ದೊರೆಯದಿರುವುದು. ಕೇವಲ ವಿದ್ಯುಚ್ಛಕ್ತಿ ಕೊರತೆ ಒಂದರಿಂದಲೇ ೨೪ ಪರ್ಸೆಂಟ್‌ನಷ್ಟು ಪ್ರೊಡಕ್ಷನ್ ಕಡಿಮೆಯಾಗಿದೆ. ಆದನ್ನೆಲ್ಲಾ ಗಮನಿಸಿದಾಗ ನಾವು ನಮ್ಮ ದೇಶದಲ್ಲಿ ಯಾವುದೇ ರೀತಿಯಿಂದಲಾದರೂ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕಾಗಿದೆ ಎಂಬುದನ್ನು ಬಹುಶಃ ತಾವೆಲ್ಲರೂ ಒಪ್ಪುತ್ತೀರಿ, ಇದು ಬಹಳ ಪ್ರಾಮುಖ್ಯವಾಗಿದೆ. ಇದನ್ನು ಮಾಡದಿದ್ದರೆ ನಮ್ಮ ಕೈಗಾರಿಕೆಗಳು ಬೆಳೆಯುವುದಿಲ್ಲ. ನಮ್ಮ ದೇಶದಲ್ಲಿರುವ ೧೫೦ ಜನ ಎಕನಾಮಿಸ್ಟ್ಸ್ ಒಂದು ಸಲಹೆ ಕೊಟ್ಟಿದ್ದಾರೆ–ಸೆವಿ ಬಾಂಬ್ಲಿಥಬಗ್ಗೆ ಅವರುಕೊಟ್ಟಿರುವ ಸಲಹೆಗಳು ಆದರೂ ಏನು ಎಂದರೆ ಫಿಸಿಕಲ್ ಮೆಂಜರ್ಸ್ ಅಂಡ್ ಮಾನಿಟರಿ ಕಂಟ್ರೋಲ್ ಮಾಡಬೇಕು ವೇಜ್‌ಫ್ರೀಜ್ ಅಂದರೆ ಒಂದುಭಾಗದ ಹಣವನ್ನು ಕೊಡದೆ ಇಟ್ಟುಕೊಳ್ಳುವುದು ಕ್ರೆಡಿಟ್ ಸ್ಕ್ವೀಜ್ ಮಾಡುವುದು ; ಅವರು ಕೊಟ್ಟಿರತಕ್ಕಂಥ ಈ ಸಲಹೆಗಳು ಸರಿಯಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಇಷ್ಟರಿಂದಲೇ ಹಣದುಬ್ಬರವನ್ನು ತಡೆಗಟ್ಟುವುದಕ್ಕಾಗುವುದಿಲ್ಲ. It is one of the main solutions to the problem but the basic solution to the whole problem is more production. ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯದಿದ್ದರೆ, ಹೆಚ್ಚು ಹೆಚ್ಚು ಸಾಮಾನುಗಳನ್ನು ಉತ್ಪಾದನೆ ಮಾಡದಿದ್ದರೆ, ನೀವು ಯಾವ ಎಕನಾಮಿಸ್ಟನ್ನು ಕರೆದುಕೊಂಡು ಬಂದರೂ ಸಹ ದೇಶದ ಈಗಿನ ಪರಿಸ್ಥಿತಿಯನ್ನು ಸರಿ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ನಮ್ಮ ಮುಂದಿರುವ ಪೆಡಂಭೂತವಾದಂಥ ಪ್ರಶ್ನೆಎಂದರೆ. ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚು ಉತ್ಪಾದನೆ ಮಾಡಬೇಕಾಗಿರುವುದು ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚು ಉತ್ಪಾದನೆ ಮಾಡಬೇಕಾಗಿರುವುದು ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉತ್ಪಾದನೆ ಜಾಸ್ತಿಯಾಗ ಬೇಕಾದರೆ

ಮೂಲತ : ನಮಗೆ ಬೇಕಾಗಿರುವುದು ಏನೆಂದರೆ, ವಿದ್ಯುಚ್ಛಕ್ತಿ ಮತ್ತು ನೀರಾವರಿ ಸೌಕರ್ಯ. ಇರಿಗೇಷನ್ ತೆಗೆದುಕೊಂಡರೆ, ಇಡೀ ಭಾರತ ದೇಶಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ. ಈಗ ಹಾಲಿ ಇರತಕ್ಕಂಥ ಮೇಜರ್ ಮತ್ತು ಮೀಡಿಯಂ ಪ್ರಾಜೆಕ್ಟ್‌ಗಳೆಲ್ಲವನ್ನೂ ತೆಗೆದು ಕೊಂಡರೆ, ನಮ್ಮಲ್ಲಿ ಇರತಕ್ಕಂಥ ಇರಿಗೇಷನ್ ಪೊಟೆನ್ಷಿಯಲ್ ಎಷ್ಟೆಂದರೆ ೯೬ ಲಕ್ಷ ಹೆಕ್ಟಾರ್ಸ್ ಮಾತ್ರ,

ನಾನು ಈ ಮಾತನ್ನು ಹೊಸದಾಗಿ ಹೇಳುತ್ತಾ ಇಲ್ಲ. ಈಗ ನಮಗೆ ಇಷ್ಟೊಂದು ಪೊಟೆನ್ಷಿಯಲ್ ಕ್ರಿಯೇಟ್ ಆಗಿದ್ದರೂ ಕೂಡ ಈಗ ಎಷ್ಟು ಪ್ರಾಜೆಕ್ಟ್ಸನ್ನು ಕಟ್ಟಲಾಗಿದೆ ಅದು ಕರ್ನಾಟಕದಲ್ಲಿಯೇ ಆಗಲಿ, ಮಧ್ಯಪ್ರದೇಶದಲ್ಲಿಯೇ ಆಗಲಿ, ಬಿಹಾರದಲ್ಲಿಯೇ ಆಗಲಿ, ಆಂಧ್ರ ಪ್ರದೇಶದಲ್ಲಿಯೇ ಆಗಲಿ ಎಲ್ಲ ಕಡೆಯ ಲೆಕ್ಕವನ್ನೂ ತೆಗೆದು ಕೊಂಡರೆ ೯೦ ಲಕ್ಷ ಹೆಕ್ಟಾರ್ಸ್‌ನಲ್ಲಿ ನೀರಾವರಿ ಮಾಡಲಿಕ್ಕೆ ಸಾಧ್ಯ ಮಾಡಿದ್ದರೂ ಕೂಡ ೧೯೭೨ನೇ ಇಸವಿ ಅಂದಾಜಿನ ಲೆಕ್ಕದ ಪ್ರಕಾರ ಇನ್ನೂ ೬೦ ಲಕ್ಷ ಹೆಕ್ಟಾರ್ಸ್ ನೀರಾವರಿ ಆಗದೇ ಹಾಗೆಯೇ ಉಳಿದಿವೆ. ಇದಕ್ಕೆ ಅನೇಕ ಕಾರಣಗಳೂ ಇವೆ. ಕೆಲವಡೆ ನೀರಾವರಿ ಕೆಲಸ ಆಗಿದ್ದರೂ ಕೂಡ ಅದರಲ್ಲಿ ನೀರನ್ನು ಬಿಡದೇನೇ ಕೆಲವು ವ್ಯವಸಾಯ ಆಗದೇ ಉಳಿವೆ. ಇನ್ನು ಕೆಲವೆಡೆ ವ್ಯವಸಾಯ ಮಾಡದೇ ಇರತಕ್ಕಂಥ ಕ್ಷೇತ್ರಗಳೂ ಅಷ್ಟಿವೆ. Nearly 50 percent of the irrigation potential ereated in the country is left un-utilised in 1972. In 1974 some 10–15 per cent might have been utilised. But out of 96 lakhs hectrs nearly 30-40 hecters are still to be utiliaed.

1–30 p. m.

ಶ್ರಿ. ಕೋಣಂದೂರು ಲಿಂಗಪ್ಪ :—ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ಪ್ರಾಜೆಕ್ಟ್ ಕೆಲಸ ಮಾಡಿದ್ದರೂ ಕೂಡ ನೀರು ಬಿಡದೇನೆಲ್ಲ ಆ ವ್ಯವಸಾಯದ ಭೂಮಿ ಅನುಪಯೋಗವಾಗುತ್ತಾ ಇದೆ ಎಂದು ಹೇಳಿದಿರಿ. ಹಾಗಾದರೆ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಇದು ಯಾವ ಗುರಿ ಮುಟ್ಟಬೇಕೋ ಅದು ಮುಟ್ಟಲಿಲ್ಲ ಎನ್ನುವುದು ಅರ್ಥವಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್ :—ನಾನು ಹೇಳಿದ್ದನ್ನು ಪೂರ್ತಾ ಅರ್ಥ ಮಾಡಿಕೊಳ್ಳಿ, ನಮ್ಮಲ್ಲಿ ಘಟಪ್ರಭಾ ಇದೆ, ಮಲ್ಲಪ್ರಭಾ ಇದೆ ಮತ್ತು ನಮ್ಮಲ್ಲಿ ವ್ಯವಸಾಯ ಮಾಡುವ ಜನರು ಇದ್ದಾರೆ ಮತ್ತು ವ್ಯವಸಾಯಕ್ಕೆ ಲಾಯಕ್ಕಾಗುವ ಜಮೀನು ಇದೆ. ಆದರೆ ಆ ಪ್ರಾಜೆಕ್ಟ್‌ನಿಂದ ಎಷ್ಟು ಎಕರೆಗೆ ನೀರು ಮುಟ್ಟಬೇಕೊ ಅಷ್ಟು ಮುಟ್ಟಲಿಕ್ಕೆ ಆಗುತ್ತಾ ಇಲ್ಲ ಹಾಗಿಯೇ ನಾಗಾರ್ಜುನ ಸಾಗರದಲ್ಲಿ ಎಷ್ಟು ಎಕರೆಗೆ ನೀರು ಮುಟ್ಟಬೇಕೋ ಅಷ್ಟು ಮುಟ್ಟುತ್ತಾ ಇಲ್ಲ. ಇದಕ್ಕೆ ಕಾರಣ ಏನೆಂದರೆ ನಾವೇನೋ ಪ್ರಾಜೆಕ್ಟ್ಸನ್ನು ಶುರು ಮಾಡಿದೆವು, ಆದರೆ ಆ ಪ್ರಾಜೆಕ್ಟ್‌ನಲ್ಲಿ ಏನು ನಾಲೆಗಳನ್ನು ಮಾಡಬೇಕೋ ಅದನ್ನು ಮಾಡಿಲ್ಲ, ಕಾರಣ ಅದಕ್ಕೆ ಹೆಚ್ಚು ಹಣ ಬೇಕಾಗುತ್ತದೆ. ಯಾವುದೇ ಪ್ರಾಜೆಕ್ಟ್ಸ ತೆಗೆದುಕೊಂಡರೂ ಕೂಡ ಒಂದೊಂದು ಪ್ರಾಜೆಕ್ಟ್ಸಗೆ ೧೦ ಕೋಟಿ ರೂಪಾಯಿ ಎಂದು ಅಂದಾಜು ಮಾಡಿದರೆ ಅದರಲ್ಲಿ ಕಾಲುವೆ ತೆಗೆದು ನೀರನ್ನು ಕೊಡುವುದಕ್ಕೆ ೪೦–೫೦ ಕೋಟಿ ರೂಪಾಯಿ ಖರ್ಚಾಗುತ್ತದೆ. ಒಂದಕ್ಕೆ ೪–೫ ರಷ್ಟು ಖರ್ಚು ಮಾಡಿದರೆ ಕಾಲುವೆಗಳನ್ನು ಮಾಡಬಹುದು. ಆ ಕಾಲುವೆಗಳನ್ನು ನಿರ್ಮಾಣ ಮಾಡುವುದಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನು ಒದಗಿಸದೇ ಹೋದರೆ ಆ ನೀರು ಹಾಗೆಯೇ ಆ ಪ್ರಾಜೆಕ್ಟ್‌ನಲ್ಲಿ ಉಳಿದಿರುತ್ತದೆ. ಆ ನೀರು ವ್ಯವಸಾಯಕ್ಕೆ ಬಿಡದೇನೇ ಅನುಪಯೋಗವಾಗುತ್ತದೆ. ಅದನ್ನು ಉಪಯೋಗಿಸಬೇಕಾದರೆ ಇಷ್ಟೊಂದು ಹಣವನ್ನು ಹೇಗಾದರೂ ಮಾಡಿಕೊಡಿ ಎಂದು ಬೇಳಿದರೆ ತಪ್ಪೇ ? ಈಗ ನನ್ನ ಉದ್ದೇಶ ತಮಗೆ ಅರ್ಥವಾಗುತ್ತದೆ. ಈ ರೀತಿಯಾಗಿ ದೇಶದಲ್ಲಿರುವ ಪ್ರಾಜೆಕ್ಟ್ಸ ನೀರನ್ನು ಉಪಯೋಗ ಮಾಡುವುದಕ್ಕೆ ಡಿಫಿಸಿಟ್ ಫೈನಾನ್ಸಿಂಗ್ ಮಾಡಿಯಾದರೂ ಖರ್ಚು ಮಾಡಬೇಕು. ನಾವು ಈ ಡಿಫಿಸಿಟ್ ಫೈನಾನ್ಸ್‌ಗೆ ಹೆದರಿಕೊಂಡು ಕೂತರೆ ಈ ಹಣದುಬ್ಬರವನ್ನು ತಡೆಗಟ್ಟುವುದಕ್ಕಾಗುವುದಿಲ್ಲ ಮತ್ತು ಆಹಾರ ಪದಾರ್ಥಗಳ ಬೆಲೆಗಳ ಏರಿಕೆಯನ್ನೂ ಕೂಡ ತಡೆಗಟ್ಟುವುದಕ್ಕಾಗುವುದಿಲ್ಲ ಆದುದರಿಂದ ಈ ಕೆಲಸವನ್ನು ಮಾಡಬೇಕಾದ್ದು ಕೇಂದ್ರದವರು ಎಂದು ಹೇಳುತ್ತೇನೆ. ಈ ಹಣದುಬ್ಬರವನ್ನು ತಡೆಗಟ್ಟುವುದು ಇದು ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ ಎಲ್ಲಾ ರಾಷ್ಟ್ರಗಳಿಗೂ ಸೀಮಿತವಾಗಿದೆ. ಆದುದರಿಂದ ನಾನು ಹೇಳುವುದು ಈ ಕಾಳೀನದಿ ಪ್ರಾಜೆಕ್ಟ್ ಕಟ್ಟಿದರೆ ಇದರಿಂದ ಬರೇ ಕರ್ನಾಟಕಕ್ಕೇ ಪ್ರಯೋಜನವಾಗುವುದಲ್ಲದೆ ಮಹಾರಾಷ್ಟ್ರಕ್ಕೂ ಕೂಡ ಪ್ರಯೋಜನವಾಗುತ್ತದೆ, ಅವರೂ ಕೂಡ ವಿದ್ಯುಚ್ಛಕ್ತಿ ಬೇಕು ಎಂದು ಕೇಳುತ್ತಿದ್ದಾರೆ. ನಾವು ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಬೇರೆಯವರಿಗೂ ಕೊಟ್ಟರೆ ಅದರಿಂದಲೂ ಸ್ವಲ್ಪ ಹಣ ಬರುತ್ತದೆ. ಹಿಂದೇ ಇದೇ ರೀತಿಯಾಗಿ ಬೇರೆ ರಾಜ್ಯಗಳಿಗೆ ಕೊಟ್ಟಿದ್ದೇವೆ. ಆದುದರಿಂದ ದೇಶದಲ್ಲಿ ನಾವು ಮಾಡಬೇಕಾದ ಕೆಲಸವನ್ನು ಬಿಟ್ಟು ನಾವು ಎಷ್ಟು ಭಾಷಣವನ್ನು ಮಾಡಿ

(ಶ್ರೀ ಡಿ. ದೇವರಾಜ ಅರಸ)

ಕೊಂಡು ಹೋದರೆ ಏನೂ ಪ್ರಯೋಜನವಿಲ್ಲ. ಈ ಹಣದುಬ್ಬರವನ್ನೂ ಮತ್ತು ಆಹಾರಪದಾರ್ಥಗಳ, ಬೇರೆ ಬೇರೆ ಪದಾರ್ಥಗಳ ಬೆಲೆಗಳನ್ನು ತಡೆಗಟ್ಟ ಬೇಕಾದರೆ ದೇಶದಲ್ಲಿ ಉತ್ಪಾದನೆ ಮಾಡಬೇಕೆ ವಿನಾ ಬೇರೆ ಮಾರ್ಗವೇ ಇಲ್ಲ. ಈರೀತಿ ಉತ್ಪಾದನೆ ಮಾಡಬೇಕಾದರೆ ದೇಶದಲ್ಲಿ ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕು. ಈಗ ಇರುವ ನೀರನ್ನಾದರೂ ವ್ಯವಸಾಯ ಕ್ಷೇತ್ರವಲ್ಲಿ ಉಪಯೋಗವಾಗುವಂತೆ ಮಾಡಬೇಕು ಹೊಸದಾಗಿ ಪ್ರಾಜೆಕ್ಟ್ ಕಟ್ಟುವುದು ಬೇಡ, ಇರತಕ್ಕ ನೀರನ್ನಾದರೂ ಉಪಯೋಗ ಮಾಡೋಣ ಅದಕ್ಕೆ ಹಣ ಇಲ್ಲ ಎಂದು ಕೂತುಕೊಂಡರೆ ಅದು ಬುದ್ಧಿವಂತಿಕೆಯೇ ? ಇದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಇದು ನನ್ನ ವಾದ.

ಶ್ರೀ ಎಸ್. ಬಂಗಾರಪ್ಪ : — ಈಗ ೧೦ ಕೋಟಿ ರೂಪಾಯಿನ ಒಂದು ಪ್ರಾಜೆಕ್ಟ್ ಕಟ್ಟದರೆ ಅದರ ಕಾಲುವೆಗಳನ್ನೆಲ್ಲಾ ತೆಗೆಯಬೇಕಾದರೆ ಅದರ ೪ ರಷ್ಟು ೫ ರಷ್ಟು ದುಡ್ಡು ಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ನಾನು ಆ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ನನ್ನ ಪ್ರಶ್ನೆ ಏನೆಂದರೆ ಈಗ ಡಿಫಿಸಿಟ್ ಫೈನಾನ್ಸಿಂಗ್ ಇದೆಯಲ್ಲಾ ಇದನ್ನು ಹೇಗೆ ತುಂಬಬೇಕು ಆದರ ಬಗ್ಗೆ ದಯಮಾಡಿ ಸಂಪೂರ್ಣವಾದ ವಿವರಣೆ ಸರ್ಕಾರದ ವತಿಯಿಂದ ಕೊಟ್ಟರೆ ಸಾಕು.

ಶ್ರೀ ಡಿ. ದೇವರಾಜ ಅರಸ್ :—ಆದುದರಿಂದಲೇ ನಾನು ಹೇಳುವುದು ಏನೆಂದರೆ ನಾವೂಕೂಡ ಇದಕ್ಕೆ ಸ್ವಲ ಪ್ರಯತ್ನ ಮಾಡಬೇಕು ಎಂದು. ಅದಕ್ಕಾಗಿ ಬೆಟರ್‌ಮೆಂಟ್ ಹಾಕಿದ್ದೇವೆ ಇನ್ನು ವಾಟರ್ ರೇಟನ್ನು ಹೆಚ್ಚಿಸಬೇಕೇ ಎನುವುದನ್ನು ನಾವು ಯೋಚನೆ ಮಾಡುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಇಡೀ ದೇಶದ ಜನತೆಯ ಪ್ರತಿದಿನದ ಪರ್ ಕ್ಯಾಪಿಟಾ ಇನ್‌ಕಂ ೪೮ ಪೈಸೇ ಎಂದು ಲೆಕ್ಕ ಹಾಕಿದ್ದೇವೆ, ಅದಕ್ಕೆ ನಾನು ಹೇಳುವುದು ನಮ್ಮ ದೇಶದಲ್ಲಿ ಒಂದು ಸಾವಿರ ರೂಪಾಯಿ ಮೇಲ್ಪಟ್ಟ ಅಧಿಕಾರಿಗಳು ಏನು ಇದ್ದಾರೆ ಅವರಿಗೆ ಒಂದು ಸಾವಿರ ರೂಪಾಯಿ ಮೇಲ್ಪಟ್ಟು ಸಂಬಳ ಇಲ್ಲ ಎಂದು ಮಾಡಿದರೆ ಆದರಿಂದ ಸುಮಾರು ೩೦ ಕೋಟಿ ರೂಪಾಯಿ ಉಳಿಯುತ್ತದೆ, ಇದನ್ನು ಏತಕ್ಕೆ ಮಾಡಬಾರದು ?

ಶ್ರೀ ಡಿ. ದೇವರಾಜ ಅರಸ್.—ಭಾರತ ದೇಶದಲ್ಲೆ ಇದು ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ಲೆಕ್ಕಮಾಡಿ ಹೇಳಬೇಕಾದರೆ ಕೇಂದ್ರದವರು ಮಾಡಬೇಕು. ನನಗೆ ಗೊತ್ತಿಗುವುದಿಲ್ಲ. ನಮ್ಮ ರಾಜ್ಯ ಸರ್ಕಾರದ್ದು ಲೆಕ್ಕ ಹಾಕಿದರೆ ೧೦-೬ ಲಕ್ಷ ರೂಪಾಯಿ ಆಗಬಹುದು. ಜಾಸ್ತಿಯಾಗುವುದಿಲ್ಲ. ಭಾರತ ದೇಶದಲ್ಲೀ ಒಂದು ಸಾವಿರ ರೂಪಾಯಿ ಮೇಲ್ಪಟ್ಟು ಇರುವವರಿಗೆ ಎಷ್ಟು ಸಂಬಳ ಖರ್ಚಾಗುತ್ತದೆ ಅನ್ನುವ ಲೆಕ್ಕ ಬೇಕಾದರೆ ಅದನ್ನೂ ಕೂಡ ಲೆಕ್ಕ ಹಾಕಿ ಕೊಡಿಸುವುದಕ್ಕೆ ಪ್ರಯತ್ನ ಮಾಡೋಣ. ಆದರೆ ನಮ್ಮ ರಾಜ್ಯ ಸರ್ಕಾರದ್ದು ಲೆಕ್ಕಾಚಾರ ಬೇಕಾದರೆ ಅಸೆಂಬ್ಲಿ ನಡೆಯುವ ವೇಳೆಯಲ್ಲಿ ಯಾವುದಾದರೂ ಒಂದು ದಿನ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕಾದರೆ ಇದರಲ್ಲಿ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಮತ್ತು ಪ್ಲಾನ್ ಎಕ್ಸ್‌ಪೆಂಡಿಚರ್ ಅಂತ ಎರಡು ಭಾಗ ಇದೆ. ಈ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲನೇ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಪೂರ್‌ದ್ಯಾನ್ ೬೦ ಪರ್ಸೆಂಟ್ ಈ ನೀರಾವರಿಗೆ ಮತ್ತು ವಿದ್ಯುಚ್ಛಕ್ತಿಗೆ ಖರ್ಚಾಗಿದೆ ಎಂದು ನನಗೆ ಕಾಣುತ್ತದೆ. ಮತ್ತು ನಾನ್ ಪ್ಲಾನ್‌ನಲ್ಲೂ ಕೂಡ ಕೆಲವು ಇಲಾಖೆಗಳಲ್ಲಿ ಮುಖ್ಯವಾಗಿ ಖರ್ಚು ಮಾಡಬೇಕಾಗಿದ್ದರೂ ಕೂಡ ಆದರಲ್ಲೂ ಸಹ ಸ್ವಲ್ಪ ವೆಚ್ಚವನ್ನು ಕಡಿಮೆ ಮಾಡಿದ್ದೇವೆ, ಉದಾಹರಣೆಗೆ ವಿದ್ಯಾ ಇಲಾಖೆಗೆ ಇಂತಿಷ್ಟು ಖರ್ಚು ಮಾಡಬಹುದುದೆಂದು ಈ ಸಭೆ ಒಪ್ಪಿಗೆ ಕೊಟ್ಟಿದ್ದರೂ ಕೂಡ ಅದರಲ್ಲಿ ೮ ಕೋಟಿ ರೂಪಾಯಿ ಅಷ್ಟು ಕಡಿಮೆ ಮಾಡಿದ್ದೇವೆ. ಏತಕ್ಕೆಂದರೆ ಇದರಲ್ಲಿ ಆದಷ್ಟು ಮಿನಿಮೈಸ್ ಮಾಡಿದರೆ ಅದರಲ್ಲಿ ಉಳಿಯುವ ಹಣವನ್ನು ಕಾಳಿನದಿಗೆ ಖರ್ಚು ಮಾಡಬಹುದು ಎಂದು ಇನ್ನು ಯಾವ್ಯಾವುದರಲ್ಲಿ ಮಿನಿಮೈಸ್ ಮಾಡಬಹುದೋ ಅದರಲ್ಲೂ ಮಾಡಿ ಈ ಪ್ರಾಜೆಕ್ಟ್‌ಗೆ ಹಣವನ್ನು ತುಂಬ ಬೇಕಾಗುತ್ತದೆ. we are not going to allow your deficit budget. ಎಂದು ಹೇಳಿದ್ದೇವೆ. ಆದರೂ ಕೂಡ ಕೇಂದ್ರದವರು ಇನ್ನೂ ಸ್ವಲ್ಪ ಹೆಚ್ಚು ಹಣವನ್ನು ತುಂಬಬೇಕು ಎಂದು ಹೇಳುತ್ತಾರೆ. ಅದಕ್ಕೆ ನಾನು ಹೇಳಿದ್ದೇನೆ ನಮ್ಮ ಕೈಯಲ್ಲಿ ಎಷ್ಟು ಹಣ ಅದಕ್ಕೆ ತುಂಬುವುದಕ್ಕೆ ಸಾಧ್ಯ ಇದೆ ಅಷ್ಟು ತುಂಬುತ್ತೇನೆ ಆದರೆ ಕಾಳೀನದಿಗೆ ಎಷ್ಟು ಹಣ ಬೇಕಾಗುತ್ತದೋ ಅಷ್ಟೆಲ್ಲಾ ಒದಗಿಸುವುದಕ್ಕೆ ಸಾಧ್ಯ ಇಲ್ಲ ಎಂದು. ಈ ರೀತಿ ಪರಿಸ್ಥಿತಿ ಇರುವಾಗ ಏನು ಮಾಡಬೇಕು ? ಹೇಳಿ. ನಮ್ಮ ರಾಜ್ಯದಲ್ಲಿ ಕಾಳೀನದಿ ಒಂದೇ ಅಲ್ಲ, ಇನ್ನೂ ಬೇಕಾದಷ್ಟು ಜಲಾಶಯಗಳು ಆಗಬೇಕಾಗಿಗೆ

ನಮ್ಮಿಂದ ಬೇರೆ ರಾಜ್ಯಗಳೂ ಕೂಡ ಪ್ರಯೋಜನ ಮಾಡಿಕೊಳ್ಳಲಿ ಎಂದು ಈ ರೀತಿ ಹೇಳಿದೆ. ಅದಕ್ಕೆ ಪ್ರತಿಯಾಗಿ ನಮ್ಮ ರಾಜ್ಯಕ್ಕೆ ೪೨೦ ಕೋಟಿ ರೂಪಾಯಿಗಳು ಕೊಡಿ ಎಂದು ಕೇಳಿದ್ದಾರೆ ಎಂದು ಜನರು ತಿಳಿದುಕೊಂಡಿದ್ದರೆ ಅಥವಾ ಆ ರೀತಿ ವರದಿ ಆಗಿದ್ದರೆ ಅದು ಸರಿಯಲ್ಲ. ನಾನು ಹೇಳಿರುವುದು ಈ ಪ್ರಾಜೆಕ್ಟ್‌ಗೆ ಹೆಚ್ಚು ಹಣವನ್ನು ಒದಗಿಸಿದರೆ ಈ ಜಲಾಶಯದಿಂದ ಪ್ರಯೋಜನ ಬರೇ ಕರ್ನಾಟಕಕ್ಕೇ ಅಲ್ಲ ಇಡೀ ಭಾರತ ದೇಶದಕ್ಕೆ ಎಷ್ಟು ವಿದ್ಯುಚ್ಛಕ್ತಿ ಬೇಕಾಗುತ್ತದೋ ಅಷ್ಟು ಒದಗುತ್ತದೆ ಎಂದು. ಇಂತಹ ಒಂದು ಪ್ರಾಜೆಕ್ಟ್‌ಗೆ ತಾವು ದುಡ್ಡು ಕೊಡುವುದಾದರೆ ಭಾರತ ದೇಶದಲ್ಲಿ ಇನ್ನು ಎರಡು ವರ್ಷದಲ್ಲಿ ೧೦೬ ಮಿಲಿಯನ್ ಟನ್ ಆಹಾರ ನಮ್ಮಲ್ಲಿ ಉತ್ಪಾದನೆಯಾಗುತ್ತದೆ ಎನ್ನುವ ಒಂದು ಅಂದಾಜು ಇಟ್ಟುಕೊಂಡಿದ್ದೇವೆ. ಇದು ೧೦೦ ರಿಂದ ೧೨೦ಕ್ಕೆ ಹೋಗಬೇಕು. ಆರು ಮಿಲಿಯನ್ ಟನ್ ೧೮ ತಿಂಗಳಲ್ಲಿ ಹೊರಗಡೆಯಿಂದ ತಂದಿದ್ದೇವೆ. ಒಂದು ಎಕರೆಗೆ ಸರ್ವೇ ಸಾಧಾರಣವಾಗಿ ಒಂದು ಟನ್ ಆಹಾರ ಬೆಳೆಯುತ್ತದೆ ಇಲ್ಲ ಮುಕ್ಕಾಲು ಟನ್ ಎಂದು ಇಟ್ಟುಕೊಳ್ಳೋಣ. ೧೦೦ ಟನ್ ಆಹಾರ ಬೆಳೆಯಬೇಕಾದರೆ ಸುಮಾರು ೧೨೫ ಎಕರೆ ಭೂಮಿ ಆಯಿತು. ನಮಗೆ ೨೦ ಲಕ್ಷ ಟನ್ ಆಹಾರ ಬೇಕು. ೨೫—೩೫ ಲಕ್ಷ ಎಕರೆ ಜಮೀನಿದ್ದರೆ ಈ ಆಹಾರ ಬರುತ್ತದೆ. ನಮ್ಮಲ್ಲೇ ಬೆಳೆದು ಬೇರೆ ಕಡೆಯಿಂದ ತರಿಸುವುದನ್ನು ಇವತ್ತಿಗೆ ನಿಲ್ಲಿಸುವುದಕ್ಕೆ ಸಾಧ್ಯವೇ ? ತರುತ್ತಲೇ ಇರಬೇಕಾಗುತ್ತದೆ. ಫಾರಿನ್ ಎಕ್ಸಚೇಂಜ್ ಎಷ್ಟು ಬೇಕಾಗುತ್ತದೆ ? ಅದಕ್ಕೆ ಹಣ ಎಷ್ಟು ಖರ್ಚು ಮಾಡಬೇಕಾಗುತ್ತದೆಂದು ನಾನು ಕೇಳುತ್ತೇನೆ. ಈ ದುಡ್ಡನ್ನು ಶೇಖರಣೆ ಮಾಡಲು ಪ್ರಯತ್ನಮಾಡಿ ಅದಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನು ಮೂರು ವರ್ಷದಲ್ಲಿ ತಯಾರುಮಾಡಿ ಜನಗಳಿಗೆ ಉಪಯೋಗ ಮಾಡುವುದಕ್ಕೆ ಕೊಡುವುದಕ್ಕೆ ಸಾಧ್ಯವಿದೆ. ಇದು ೧೯೭೫ನೇ ಇಸವಿಗೆ ಒಂದು ಹಂತಕ್ಕೆ ಬರಬಹುದು. ಸೂಪಾ ಡ್ಯಾಂನಲ್ಲಿ ಜನರೇಟರ್ ಮತ್ತು ಪೆನ್‌ಸ್ಟಾಕ್ ಪೈಪ್‌ರೆಡಿ ಮಾಡಿಕೊಂಡು ಒಂದೇ ಸಾರಿ ಮಾಡದೆ ಹೋದರೆ ತೊಂದರೆಯಾಗುತ್ತದೆ ಎಂದು ಈ ಕಾರಣಕ್ಕಾಗಿ ಡೆಫಿಸಿಟ್ ಫೈನಾನ್ಸ್ ಮಾಡಿದರೂ, ಇದಕ್ಕೆ ಹಣ ಒದಗಿಸಿ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನೂರು ಕೋಟಿ ರೂಪಾಯಿ ಅಥವಾ ಇನ್ನೂರು ಕೋಟಿ ರೂಪಾಯಿ ಬೇಕೆಂದು ಜನರಲ್ ಆಗಿ ಹೇಳಿದ್ದೀರಿ ಎಂಬುದು ಸ್ಪಷ್ಟವಾಗಿದೆ. ಚಾಪ ಹಾಕಿ ಎಂದು ಹೇಳಿದ್ದೀರಿ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ ಅದರ ಬಗ್ಗೆ ನಾನು ಕೇಳುತ್ತಾ ಇರುವುದು.

ಶ್ರೀ ಡಿ. ದೇವರಾಜ್ ಅರಸ್.—ಚಾಪ ಹಾಕುವುದು ಎಂದರೆ ಕೌಂಟರ್‌ಫಿಟ್ ಕಾಯಿಲ್ ಮಾಡಿ ಎಂದು ಹೇಳುವುದಿಲ್ಲ ಈಗ ಇರುವ ರೀತಿ ಹೇಳುವುದಾದರೆ ಇಂಡಿಯನ್ ಕರೆನ್ಸಿಯನ್ನು ಯುದ್ಧವುಂತಾದ ಎಮರ್ಜನ್ಸಿ ಸಮಯದಲ್ಲಿ ಎಕ್ಸ್‌ಟ್ರಾ ಕರೆನ್ಸಿಯನ್ನು ಪ್ರಿಂಟ್‌ಮಾಡುವ ರೀತಿ ಇದನ್ನು ಕೂಡ ವಾರ್‌ಫುಟಿಂಗ್ ಎಂದು ತಿಳಿದುಕೊಂಡು ಮಾಡುವುದು ಎಂದು. ನಾನು ತಿಳಿದುಕೊಂಡಿರುವುದು ತಪ್ಪಾಗಿದ್ದರೆ ತಾವೇನಾದರೂ ಸರಿಯಾಗಿ ತಿಳಿದುಕೊಂಡಿದ್ದು ಹೇಳುವುದಾದರೆ ಅದನ್ನು ತಿದ್ದಿಕೊಳ್ಳುತ್ತೇನೆ. ರಿಸರ್ವ್ ಅಂದರೆ ಗೋಲ್ಡ್ ರಿಸರ್ವ್ ಯಾರೇ ಬಂದರೂ ಕೂಡ ಇದನ್ನೆಲ್ಲಾ ನಾಳೆ, ನಾಡಿದ್ದರಲ್ಲಿ ಮಾಡುವುದಕ್ಕಾಗುವುದಿಲ್ಲ ಇರತಕ್ಕ ಸನಿವೇಶ ಆ ರೀತಿ ಇದೆ. ಆದ್ದರಿಂದ ಜರೂರಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ವಾರ್‌ಫುಟಿಂಗ್ ಮೇಲೆ ತೆಗೆದುಕೊಳ್ಳಲಿ ಎಂದು ಹೇಳುತ್ತೀರಾ ?

SRI D. DEVARAJ URS.—ಗೋಲ್ಡ್ ರಿಸರ್ವ್ Even now it is not there. They have backed it with some other securities. Supposing, tomorrow there is war. How are we going to deal with it ? You also know what we did in previous wars. Now we talk of this in the context of emergency. Today the biggest enemy is rise in prices. I consider this as worse than a war. There is real danger ; inflation is high ; prices are rising and all sections of the people are suffering. What are we to do ? Therefore I am not suggesting anything out of the way or an extraordinary thing. I had the mind to speak because I was so such concerned with the pro-ject and I gave expression to it.

You also know that in the A.I.C.C. of ours there was a resolution on the present economic situatien. The very first sentence is that we

(SRI D. DEVARAJ URS)

have to fight this inflation as if we are facing a war, or some such thing. So, it is not as if I have said myself. You consider his as a war situation. It may be that the methodology or the way you want to tackle this problem may be different. You may have a different approach. The present situation is serious and we have to face it as if we face a war.

SRI S. BANGARAPPA.—May I know whether the State Government will be in a position to write to the Central explaining all these matters.

SRI D. DEVARAJ URS.—That has gone there. You will also see that in Fourth Plan, whatever the Planning Commission prescribed that we have to collect so much tax--we have collected. Again the efforts we have already made to balance the budget is also praise worthy. The Central Finance Minister was happy and paid complements when we told him the effort made to bring down the deficit. I do not hesitate to do further efforts if they can be done. Even though I make effort, my point is it is not sufficient to meet the many demands required for proceeding with the Kali Project according to schedule. I have said it and it is an open talk now.

ಶ್ರೀ ಎಸ್. ಬಂಗಾರಪ್ಪ.—ಎ.ಐ ಸಿ.ಸಿ.ಯಲ್ಲಿಯೂ ಕೂಡ ಇದನ್ನು ವಾರ್ ಫುಟಿಂಗ್ ಎಂದು ಪರಿಗಣಿಸಿ ನಮ್ಮ ದೇಶದಲ್ಲೂ ಕೂಡ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಪೇಪರ್ ಮನಿ ಒದಗಿಸ ಬೇಕೆನ್ನುವ ವಾದವನ್ನು ಮಾಡುತ್ತೀರಾ ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಇನ್ನೊಂದು ಕಡೆಯಿಂದ ಸಾಲ ತಂದು ಕೊಡಿ ಎಂದು ಹೇಳುತ್ತೇನೆ. ಮಂತ್ರಿ ಶ್ರೀಮಾನ್ ಬೈರೇಗೌಡರು ೨ ವರ್ಷಗಳಲ್ಲಿ ನಡೆದಂಥ ವಿಷಯ ನನಗೆ ಇದು ಗೊತ್ತಿದೆ,ನನಗೆ ಇದು ಗೊತ್ತಿದೆ ಎಂದು ಬಹಳ ನಿಂದನೆಗಳನ್ನು ಮಾಡಿದ್ದಾರೆ. ಈ ಸರ್ಕಾರದವರು ಬಹಳ ಮೋಸ ಮಾಡಿದ್ದಾರೆ ಎಂದು ಹೇಳಿದ್ದಾರೆ, ಕೇಸರಿ ಬೇಳೆ ವಿಷಯ ಪ್ರಸ್ತಾಪಮಾಡಿದ್ದಾರೆ. ಅವರು ಏನಾದರೂ ಅಪಾದನೆ ಮಾಡಬೇಕು ಎಂದರೆ, ಅವರು ಎಂದು ಎಲ್ಲ, ಯಾರೆ ಅಪಾದನೆ ಮಾಡಬೇಕು ಎಂದು ಇದ್ದರೆ ಮಾನ್ಯ ಅಧ್ಯಕ್ಷರಿಗೆ ತಿಳಿಸಬೇಕು ಎಂದು ನಿಯಮದ ಪ್ರಕಾರ ಇದೆ. ನಿರ್ದಿಷ್ಟವಾದ ಅಪಾದನೆ ಇದ್ದರೆ ಪ್ರತಿಯೊಬ್ಬ ಸದಸ್ಯನಿಗೂ ಅಪಾದನೆ ಮಾಡವ ಹಕ್ಕು ಇದೆ. ಈ ಸದನದಲ್ಲಿ ಬೇರೆ ಕಡೆ ಮಾತನಾಡುವಂತೆ ಇಲ್ಲಿ ಮಾತ ನಾಡುವುದಕ್ಕೆ ಬರುವುದಿಲ್ಲ. ಕಾನೂನಿನ ಚೌಕಟಿನಲ್ಲಿ ಕೆಲಸಮಾಡಬೇಕು. ಯಾರಾದರೂ ನಿರ್ದಿಷ್ಟವಾಗಿ ಅಪಾದನೆ ಮಾಡುವುದಿದ್ದರೆ ಅಧ್ಯಕ್ಷರಿಗೆ ತಿಳಿಸಿ ಅಪಾದನೆ ಮಾಡಬೇಕು, ನಿಯಮಗಳ ಕಡೆಗೆ ಹೆಚ್ಚು ನಿಗಾ ಕೊಡಬೇಕೆಂದು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ತಾವು ಎರಡು ವರ್ಷಗಳಿಂದ ಪದೇ ಪದೇ ಈ ಪ್ರಶ್ನೆಯನ್ನು ತರುತ್ತಿದ್ದೀರಿ. ಅದಕ್ಕೆ ಉತ್ತರ ಕೊಡುತ್ತಾ ಇದ್ದೇನೆ. ಅದನ್ನೇ ಹಿಡಿದುಕೊಂಡು ಪುನಃ ಮುಂದೆ ಇಡುತ್ತೇನೆ. ನೀವು ಹೇಳಿದ್ದು ಆಗಿದೆ. ಇನ್ನು ನಾನು ಈಗ ಹೇಳುವುದನ್ನು ಕೇಳಿಬಿಡಿ.

Some Merchants from Karnataka State and few from Madhya Pradesh had imported during the month of March 1973 above five to six thousand tonnes of Kesari dhal, also called tavare dhal, from Madhya Pradesh with the intention of selling it in Karnataka State. According to the provisions of the Food Adulteration Act of 1954 which has been brought into force by the State Government by a noti-

fication on 15-5-1963 the import of Kesari dhal into the State of Karnataka is prohibited. The entire stock was ceased by the police under the said Act and the State CID took up the cases for investigation on 23-7-1973. Samples of the ceased goods were sent to the public analyst of the Corporation of the City of Bangalore and a report was received from him that the dhal ceased is kesari dhal. The merchants of Madhya Pradesh who had dispatched it approached the railway authorities to rebook the same to Madhya Pradesh and also represented that this dhal is prohibited in the Karnataka State. The railway authorities refused to permit then to rebook the same without getting clearence from the State CID. On this they filed write petition under No. 1013 to 1025 of 1973 in the High Court of Karnataka. On 2-5-1973 the High Court ordered that the petitioners' request for rebooking the commodity to stations outside the State shall be considered by the railway authorities on merit. In the meanwhile the merchants of Karnataka and Madhya Pradesh represented to the Government that Kesari dhal, if found unsuitable for human consumption, they may be permitted to sell it as cattle feed within the State. This matter was examined by the Director of Animal Husbandry and other concerned authorities and they categorically opened that this is not fit to be used for cattle feed it is injurious to the health of the cattle. The other request of the merchants, *viz.*, to rebook the consignment to the place of despatch, *i.e.* Madhya Pradesh, was considered. An officer of the A & F Department was deputed to Madhya Pradesh to verify the verocity of the statement made by the merchants and also to ascertain whether this kind of kesari dhal is allowed to be sold and marketed in that State as also to find out whether the Government of Madhya Pradesh will issue permits to the merchants to take back the commodity. Simultaneously the Madhya Pradesh Government was also addressed in the matter. After careful consideration of the report of the officer deputed for the purpose and the reply of the Government of Madhya Pradesh stating that they have no objection to receive back the dhal to Madhya Pradesh and the circumstances in which it was imported in the Karnataka State, the Government came to the dicision that the merchants must be permitted to take back the dhal to Madhya Pradesh and the prosecution need not be proceeded with,

This is the position.

ಇದರಲ್ಲಿ ಏನಾಯಿತು ಎಂದರೆ ೧೯೫೪ನೇ ಇಸವಿಯ ಆಕ್ಟ್ ನಮ್ಮಲ್ಲಿ ೧೯೬೩ ರಲ್ಲಿ ಜಾರಿಗೆ ಬಂತು. ಎಲ್ಲಾ ಕಡೆ ಕೇಸರಿದಾಲ್ ಪ್ರಾಹಿಬಿಟ್ ಮಾಡಲಿಲ್ಲ. ಮಧ್ಯ ಪ್ರದೇಶದಲ್ಲಿ ಕೇಸರಿದಾಲ್ ಉತ್ಪತ್ತಿಯಾಗುತ್ತದೆ. ಅಲ್ಲಿ ಉತ್ಪಾದನೆ ಪ್ರಾಹಿಬಿಟ್ ಮಾಡಲಿಲ್ಲಿ ಅಲ್ಲೆ ಅದನ್ನು ಉಪಯೋಗ ಮಾಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಪ್ರಾಹಿಬಿಟ್ ಮಾಡಿದೆ. ನಮ್ಮಲ್ಲೆ ೧೯೬೩ ರಲ್ಲಿ ಕೇಸರಿದಾಲ್ ಬಗ್ಗೆ ಪ್ರಾಹಿಬಿಷನ್ ಬಂದಿದ್ದರೂ, ೧೯೬೩ರಲ್ಲಿ ಅದರ ಕನ್‌ಸೈನ್‌ಮೆಂಟ್ ಹಿಡಿದಿದ್ದಾರೆ. ಇಲ್ಲಿಯವರೆಗೂ ಯಾರು ಹಿಡಿದಿಲ್ಲ. ಇದು ಏತಕ್ಕೋ ನನಗೆ ಗೊತ್ತಿಲ್ಲ. ಕಾನೂನು ಮರೆತು ಬಿಟ್ಟರೋ ಏನೋ, ಮರ್ಚೆಂಟ್ಸ್ ಬಗ್ಗೆ ಸರ್ಕಾರ ನಿಗಾ ಇಡಲಿಲ್ಲ. ಆ ಮಾತು ಬೇರೆ. ೧೯೬೩ನೇ ಇಸವಿಯಿಂದ ಒಂದು ಕೇಸೂ ಹಿಡಿದಿಲ್ಲ, ಇದಕ್ಕೆ ಭೈರೇಗೌಡರು ಗಮನ ಕೊಡಬೇಕು. ಫಸ್ಟ್ ಟೈಮ್ ಈ ಕೇಸ್ ಸರ್ಕಾರದ ಗಮನಕ್ಕೆ ಬಂದಾಗ ಕೇಸರಿ

(ಶ್ರೀ ಡಿ. ದೇವರಾಜ ಅರಸ್)

ದಾಲನ್ನು ನಾಶ ಮಾಡುವ ಕಾರ್ಯಕ್ಕೆ ಹೋದರೆ ಹೇಗೆ ? ಮಧ್ಯಪ್ರದೇಶದಲ್ಲಿ ಅದನ್ನು ಬ್ಯಾನ್ ಮಾಡಿಲ್ಲ. ಅದು ಅಲ್ಲಿ ಉಪಯೋಗಕ್ಕೆ ಬರುತ್ತದೆ. ಆದುದರಿಂದ ಅಲ್ಲಿಗೆ ಕಳುಹಿಸಲು ಪರ್ಮಿಟ್ ಮಾಡಿದ್ದೇವೆ. ತಂದ ತಪ್ಪಿಗೆ ಕಾನ್‌ಫಿಸ್ಕೇಟ್ ಮಾಡಿ ಅಷ್ಟನ್ನೂ ನಾಶ ಮಾಡಬಹುದಾಗಿತ್ತು. ನಾಶ ಮಾಡುವ ಬದಲು ಅದನ್ನು ಅವರ ದೇಶಕ್ಕೆ ವಾಪಸ್ಸು ತೆಗೆದುಕೊಂಡು ಹೋಗಲು ಬಿಟ್ಟಿದ್ದೇವೆ. ಅದಕ್ಕೆ ಕೈ, ಕಾಲು, ಬಣ್ಣ ಕೊಟ್ಟು ಗೋಬೆ ಮಾಡಿ ತಾವು ಈ ರೀತಿ ಹೇಳುವುದು ಸರಿಯಲ್ಲ. ತಮ್ಮ ತಿಳುವಳಿಕೆಗೆ ಬಂದಿಲ್ಲದೆ ಇರಬಹುದು. ಆ ರೀತಿ ಸರ್ಕಾರ ಮಾಡಿದೆ ಎಂದು ತಾವು ತಿಳಿದಿದ್ದರೆ ಅದು ಸರಿಯಲ್ಲ. ಹೈಕೋರ್ಟಿಗೆ ಹೋಗಿದ್ದರಿಂದ ಅವರ ಆಜ್ಞೆಯನ್ನು ಅನುಸರಿಸಿ ಹಿಂದಕ್ಕೆ ಕಳಿಸಿದೆಯೇ ಹೊರತು ಅದನ್ನು ಇಲ್ಲಿ ಉಪಯೋಗ ಮಾಡುವುದಕ್ಕೆ ಬಿಟ್ಟಿಲ್ಲ, ಮೋಸ, ಅಜಾತುರ್ಯ ನಡೆದಿಲ್ಲ. ಸರ್ಕಾರ ವಿಧಿ ಪ್ರಕಾರ, ಕಾನೂನು ಪ್ರಕಾರ ನಡೆದಿದೆ.

ಶ್ರೀ ಸಿ. ಭೈರೇಗೌಡ.—ವಾಪಸ್ಸು ತೆಗೆದುಕೊಂಡು ಹೋಗಿದ್ದಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಅವರು ವಾಪಸ್ಸು ತೆಗೆದುಕೊಂಡು ಹೋಗಿ ಆಗಲೇ ಎಷ್ಟೋ ದಿವಸವಾಯಿತು.

SRI KAGODU THIMMAPPA.—As admitted by your statement it is quite clear that the dhal was unfit for human consumption as well as for animal consumption.

ಶ್ರೀ ಡಿ. ದೇವರಾಜ ಅರಸ್.—ಕರ್ನಾಟಕದಲ್ಲಿ.

ಶ್ರೀ ಕೋಣಂದೂರು ಲಿಂಗಪ್ಪ.—ಕರ್ನಾಟಕದಲ್ಲಿ ಇರುವವರು ಮನುಷ್ಯರು ಬೇರೆ ರಾಜ್ಯದಲ್ಲಿ ಇರುವವರು ಮನುಷ್ಯರು ಅಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ರಾಜ್ಯದ ಶಾಸನದ ಪ್ರಕಾರ ಮತ್ತು ವೈಜ್ಞಾನಿಕವಾಗಿ ಪರಿಶೀಲನೆ ಮಾಡಿದ ಪ್ರಕಾರ, ಅದನ್ನು ಆಹಾರ ಪದಾರ್ಥವಾಗಿ ಉಪಯೋಗ ಮಾಡುವುದಕ್ಕೆ ಅನರ್ಹವೆಂದು ನಮ್ಮ ರಾಜ್ಯದಲ್ಲಿ ತೀರ್ಮಾನ ಬಂದಮೇಲೆ ನಮ್ಮ ರಾಜ್ಯದಲ್ಲಿ ಆ ವಸ್ತುವನ್ನು ಮಾರಾಟ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಅರ್ಥವಾಯಿತು. ರಾಜ್ಯದ ಹೈಕೋರ್ಟಿನವರು ಏನು ಹೇಳಿದ್ದಾರೆ ಎಂದರೆ you have got every discrition to take the decision on merit ಎಂದು ಹೇಳಿದ್ದಾರೆ. ಕಾನೂನಿಗೆ ವಿರುದ್ಧವಾಗಿ ವಸ್ತು ಸಿಕ್ಕಿದ ಮೇಲೆ ಅದನ್ನು ನಾಶ ಮಾಡುವುದಕ್ಕೆ ನಿಮಗೆ ಪರಮಾವಧಿ ಅಧಿಕಾರ ಇದೆ. ಅದರಂತೆ ಸರ್ಕಾರ ಮಾಡಬೇಕಾಗಿತ್ತು. ಇದರಿಂದ ತೊಂದರೆಯಾಗಿ ಜನರು ಸಾಯುತ್ತಿದ್ದಾರೆ. ಇಲ್ಲಿ ಜನರಿಗೆ ಆಗಿರತಕ್ಕ ಅನಾರೋಗ್ಯ ಗೊತ್ತಾದ ಮೇಲೆ ಅದನ್ನು ನಾಶ ಮಾಡಬೇಕಾಗಿತ್ತು ಮಧ್ಯಪ್ರದೇಶದ ಜನರು ಪ್ರಾಣಿಗಳೇ ? ಅವರಿಗೆ ಇದರಿಂದ ಅನಾರೋಗ್ಯವಾಗುವುದಿಲ್ಲವೇ ? ಆದುದರಿಂದ ನಮ್ಮ ಶಾಸನದ ಪ್ರಕಾರ ಅದು ಪ್ರಾಹಿಬಿಟ್ ಆಗಿದ್ದರೆ ಅದನ್ನು ನಾಶ ಮಾಡುವುದಕ್ಕೆ ನಮಗೆ ಅಧಿಕಾರ ಇದೆಯೋ, ಇಲ್ಲಯೋ ? ಪ್ರಾವಿಷನ್ ಇಲ್ಲದೇ ಹೋಗಿದ್ದರೆ ಡಿಸ್ಕ್ರಿಷನ್ ಯೂಸ್ ಮಾಡುವುದು ಸೂಕ್ತ.

ಶ್ರೀ ಡಿ. ದೇವರಾಜ ಅರಸ್.—ನಾನು ಸ್ಪಷ್ಟವಾಗಿ ಆಗಲೇ ಹೇಳಿದರೂ ಸಹ, ಅವರು ಪುನಃ ವಾದ ಮಾಡುವುದು ನನಗೆ ಅರ್ಥವಾಗುವುದಿಲ್ಲ. ಅವರು ಲಾಯರ್ ಆಗಿದ್ದಾರೆ, ಮ್ಯಾಂಡೇಟರಿಯಾಗಿ ಹೀಗೇ ಮಾಡಬೇಕು ಎಂದು ಹೈಕೋರ್ಟಿನವರು ಹೇಳಿದ್ದಾರೆಯೇ ? You have the discretion ಎಂದು ಹೇಳಿದ್ದಾರೆ. ಡಿಸ್ಕ್ರಿಷನ್ ಇಲ್ಲದೇ ಹೋಗಿದ್ದರೆ ಅವರು ಹಾಗೆ ಹೇಳುವ ಹಾಗಿಲ್ಲ.

SRI KAGODU THIMMAPPA.—On merit.

SRI D DEVERAJ URS.—We have never allowed the kesari dhal to be used here. ಕನ್‌ಸೈನ್‌ಮೆಂಟನ್ನು ರೈಲುಗಾಡಿ ಬಿಟ್ಟು ಈಚೆಗೆ ಬರುವುದಕ್ಕೆ ಬಿಡಲಿಲ್ಲ. ಅದು ಯಾವ ಗೋಡೌನಿಗೂ ಬರಲಿಲ್ಲ, ಯಾವ ಅಂಗಡಿಗೂ ಬರಲಿಲ್ಲ. ೬೦೦೦ ಟನ್ ಕೇಸರಿದಾಲನ್ನು ರೈಲ್ವೆಯವರಿಂದ ಪಡೆಯುವುದಕ್ಕೆ ಬಿಡಲಿಲ್ಲ. ಮಧ್ಯಪ್ರದೇಶದಲ್ಲಿ ಇರುವವರೂ ಹ್ಯೂಮನ್ ಬೀಯಿಂಗ್ಸ್, ನಾವೂ ಹ್ಯೂಮನ್ ಬೀಯಿಂಗ್ಸ್ ಎಂಬುದು ನಿಜ. ನಮಗೂ ಎರಡು ಕಣ್ಣು ಇದೆ, ನಮಗೂ ಜವಾಬ

ಇದೆ. ಅವತಿಗೂ ಇದೆ. ಅವರ ಜಠರ ಮತ್ತು ಅಲ್ಲಿಯ ಸನ್ನಿವೇಶ ಬೇರೆ ಇರಬಹುದು ಮಧ್ಯಪ್ರದೇಶದಲ್ಲಿ ಬೆಳೆಯತಕ್ಕದ್ದು ಹ್ಯೂಮನ್ ಕನ್‌ಸಮ್‌ಷನ್ನಿಗೆ ಅನ್‌ಫಿಟ್ ಆಗಿದ್ದರೆ ಅದನ್ನು ಬೆಳೆಸುವುದಕ್ಕೆ ಅವಕಾಶ ಕೊಡುತ್ತಾ ಇರಲಿಲ್ಲ. ಅದನ್ನು ಅಲ್ಲಿ ಪ್ರಾಹಿಬಿಟ್ ಮಾಡಲಿಲ್ಲ ಎಂದು ಹೇಳಿದರೆ, ಪುನಃ ತಾವು ಹೇಳಿದ್ದನ್ನೇ ಹೇಳುತ್ತಿದ್ದೀರಿ. The Government of Madhya Pradesh categorically stated that we should send it back. ನಮ್ಮ ಡಿಸ್ಕ್ರಿಪ್ಷನ್ ಉಪಯೋಗಿಸಿ ಅದನ್ನು ಹಿಂದಕ್ಕೆ ಕಳುಹಿಸಿದ್ದೇವೆ.

2-00 P.M.

SRI KAGODU THIMMAPPA.— The article was found was in Karnataka.

SRI D. DEVARAJ URS.— It was brought from there, and so we allowed it to go back.

ಶ್ರೀ ಸಿ. ಬೈರೇಗೌಡ.— ನಮ್ಮ ರಾಜ್ಯದಲ್ಲಿ ಪ್ರಾಹಿಬಿಟ್ ಮಾಡಿದ್ದೇವೆ. ಅದು ಮಧ್ಯ ಪ್ರದೇಶ ದಿಂದ ಬಂತೋ ಅಥವಾ ಎಲ್ಲಿಂದ ಬಂತೋ ಎಂಬುದು ಪ್ರಶ್ನೆ ಅಲ್ಲ. ಅಥವಾ ಅಲ್ಲಿಗೇ ವಾಪಸ್ಸು ಕಳುಹಿಸಿದಿರೋ ಅದು ಪ್ರಶ್ನೆ ಅಲ್ಲ ಈ ರಾಜ್ಯದಲ್ಲಿ ಕಾನೂನು ಜಾರಿಯಲ್ಲಿದೆ. ಅಂಥ ವಸ್ತು ದೊರೆತ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ಅದನ್ನು ಸುಟ್ಟು ಬಿಡಬೇಕಾಗಿತ್ತು. ಪ್ರೊಹಿಬಿಟೆಡ್ ಆರ್ಟಿಕಲ್ ಇಟ್ಟುಕೊಂಡಿರುವುದರಿಂದ ಅಂಥವರನ್ನು ಪ್ರಾಸಿಕ್ಯೂಟ್ ಮಾಡಬೇಕಾಗಿತ್ತು, ಅದು ಬಿಟ್ಟು ಮಧ್ಯ ಪ್ರದೇಶಕ್ಕೆ ವಾಪಸ್ಸು ಕಳುಹಿಸಿದಿರಿ.

ಶ್ರೀ ಡಿ ದೇವರಾಜ ಅರಸ್.— ನಮ್ಮ ಸರ್ಕಾರಕ್ಕೆ ಇರತಕ್ಕ ಅಧಿಕಾರವನ್ನು ನಾವು ವಿಚಕ್ಷಣೆಯಿಂದ ಚಲಾಯಿಸಿದ್ದೇವೆ. ನಿಮಗೆ ಸಮಾಧಾನ ಇಲ್ಲದಿದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ? We have done it in our discretion.

SRI S. BANGARAPPA.—Discretionary power should have been used by the concerned officer to destroy.

SRI D. DEVARAJ URS.— As long as we have not allowed it to be consumed here it is all right.

ಶ್ರೀ ಕೋಣಂದೂರು ಲಿಂಗಪ್ಪ.— ಸ್ಮಗಲ್ ಗೂಡ್ಸ್ ಬರುತ್ತದೆ. ಅದನ್ನು ಕಳುಹಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.— ೧೮ ವರ್ಷದಿಂದ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜಿ. ಪುಟ್ಟಸ್ವಾಮಯ್ಯ.—ಕರ್ನಾಟಕದಲ್ಲಿ ಪರಿಸ್ಥಿತಿ ಏನಾಗಿದೆ. ಮಾಡಿರತಕ್ಕ ಅಂದಾಜು ಬಡ್ಜೆಟ್‌ನಲ್ಲಿ ಅಳವಡಿಸಿಸತಕ್ಕ ಕಾಮಗಾರಿಗಳ ಖರ್ಚು ವೆಚ್ಚ ದುಬಾರಿಯಾಗಿ ಪೈಪ್‌ಗಳ ಬೆಲೆ ಹೋದ ಸಲಕ್ಕೂ ಈ ಸಲಕ್ಕೂ ದ್ವಿಗುಣ ಆಗಿರುವುದರಿಂದ ಲಿಫ್ಟ್ ಇರಿಗೇಷನ್ ಪ್ರಾಜೆಕ್ಟ್ ತೆಗೆದುಕೊಳುತ್ತಾ ಇಲ್ಲ. ಒಂದು ಲಿಫ್ಟ್ ಇರಿಗೇಷನ್ ಯೋಜನೆ ಮಂಜೂರು ಮಾಡಬೇಕಾದರೆ ಅದಕ್ಕೆ ಬೇಕಾದ ಖರ್ಚಿನ ಸೀಲಿಂಗ್‌ನ್ನು ಒಂದು ಎಕರೆಗೆ ೧೦೦೦ದಿಂದ ೧೨೦೦ ರೂಪಾಯಿಗೆ ನಿಗದಿಮಾಡಿದ್ದಾರೆ. ಈಗ ಇರುವ ದುಬಾರಿ ರೇಟನ್ನು ಗಮನದಲ್ಲಿಟ್ಟುಕೊಂಡು ಸೀಲಿಂಗ್‌ಗಿಂತ ಹೆಚ್ಚು ರೇಟಿಗೆ ಮಂಜೂರು ಮಾಡಿದರೆ ಮಾತ್ರ ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಮತ್ತು ಅದರಿಂದ ನಮ್ಮ ರಾಜ್ಯದಲ್ಲಿ ಉತ್ಪಾದನೆ ಹೆಚ್ಚುತ್ತದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ಶ್ರೀ. ಡಿ.ದೇವರಾಜ ಅರಸ್—ತಮ್ಮ ಸಲಹೆಯನ್ನು ಒಪ್ಪುತ್ತೇನೆ. ರೇಟನ್ನು ರಿವೈಸ್ ಮಾಡುವುದಕ್ಕೆ ನೋಡುತೇನೆ.

†ಶ್ರೀ ಕೆ. ಎಚ್. ಪಾಟೀಲ್. (ಆಹಾರ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಿಣಿಯರೆ, ಇವತ್ತಿನ ದಿವಸ ಎರಡೂ ಕಡೆಯ ಪಕ್ಷದ ಸದಸ್ಯರು ಸುಮಾರು ೧೦ ಜನ ಬಹಳ ಕೂಲಂಕಸವಾಗಿ ಈ ಸಮಸ್ಯೆಯ ಬಗ್ಗೆ ಹೇಳಿದ್ದಾರೆ, ಕೆಲವು ಸದಸ್ಯರು ಇದೇ ಸಂದರ್ಭವನ್ನು ಉಪಯೋಗ ಮಾಡಿ

(ಶ್ರೀ ಕೆ. ಎಚ್. ಪಾಟೀಲ್)

ಕೊಂಡು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಉದ್ದೇಶದಿಂದ ಕೆಲವು ಅಡಬಾರದ ಮಾತುಗಳನ್ನು ಸಹ ಆಡಿದ್ದಾರೆ. ಅವರು ಏನೇ ಮಾತನಾಡಿದರೂ ಅವರ ಮನಸ್ಸಿನೊಳಗಿನ ಉದ್ವೇಗವನ್ನು ಮಾತ್ರ ನಾನು ಅರಿತಿದ್ದೇನೆ. ಧಾರಣೆಗಳು ಹೆಚ್ಚಾಗುತ್ತಿವೆ. ಧಾರಣೆಗಳು ಹೆಚ್ಚು ಆದಂತೆಲ್ಲಾ ಸಾಮಾನ್ಯ ಜನತೆಗೆ ತೊಂದರೆ ಹೆಚ್ಚಾಗಲಿಕ್ಕೆ ಹತ್ತಿದೆ. ಎನ್ನುವುದು ಬಹುಸಂಖ್ಯಾತ ಸದಸ್ಯರ ಕಳವಳ ಅದರಲ್ಲೇ ಸರ್ಕಾರ ಮತ್ತು ನಾನೂ ಸಹ ಭಾಗಿಗಳಾಗಿದ್ದೇವೆ, ನಾನು ರಾಷ್ಟ್ರ ಮಟ್ಟದ ಸಮಸ್ಯೆಗಳ ವಿಚಾರ ಮಾಡುವುದಕ್ಕೆ ಬಯಸು ವುದಿಲ್ಲ. ಅಗಲೇ ಮುಖ್ಯ ಮಂತ್ರಿಗಳು ರಾಷ್ಟ್ರದ ಮತ್ತು ಜಗತ್ತಿನ ವಿಷಯವಾಗಿ ಮಾತಾಡಿರುವುದರಿಂದ ನಾನು ಕರ್ನಾಟಕ ರಾಜ್ಯದ ಸ್ಥಿತಿಗತಿಗಳ ಬಗ್ಗೆ ಮಾತ್ರ ಕೆಲವು ವಿಷಯಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಪ್ರಾಮುಖ್ಯವಾಗಿ ಹಾಲಿ ಸಂದರ್ಭ ಎಂದರೆ ಧಾರಣೆಗಳು ಬಹಳ ಹೆಚ್ಚಾಗುತ್ತಾ ಇವೆ. ಇಷ್ಟೆಲ್ಲಾ ಬೆಲೆಗಳು ಏರುತ್ತಿದ್ದರೂ ಸಹ ಸರ್ಕಾರ ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತಿದೆ ಬೆಲೆ ಏರಿಕೆ ತಡೆಯುಲಿಕ್ಕೆ ಸರ್ಕಾರ ಅಸಮರ್ಥವಾಗಿದೆ. ಅದರಿಂದ ಕಾಳಸಂತೇಕೋರರು ಹೆಚ್ಚು ಲಾಭ ಗಳಿಸಲು ಹೋಗುತ್ತಿದ್ದಾರೆ. ಸರ್ಕಾರಿ ಅಧಿಕಾರಿಗಲೀ ಸರ್ಕಾರವೇ ಆಗಲಿ ಅವರ ಬಗ್ಗೆ ಕ್ರಮ ಕೈಗೊಳ್ಳಲಿಕ್ಕೆ ಅಸಮರ್ಥವಾಗಿದೆ. ಸರ್ಕಾರ ಕರೆಪ್ಟ್ ಅಗಿದೆ ಎನ್ನುವ ಮಾತುಗಳನ್ನು ಹೇಳಿದ್ದಾರೆ, ಅದರೆ ಈ ಎಲ್ಲ ಮಾತುಗಳಿಗೂ ಉತ್ತರ ಕೊಡುವಂತಹ ಅವಶ್ಯಕತೆ ಇದೆ. ಎಂದು ಅನಿಸುವುದಿಲ್ಲ. ವಿಶೇಷವಾದ ಸಮಸ್ಯೆಗಳಿದ್ದರೆ ನಿಶ್ಚಿತವಾದ ಅಭಿಪ್ರಾಯಗಳಿದ್ದರೆ ಮಾನ್ಯ ಸದಸ್ಯರಲ್ಲಿ ಅಂತಹ ಪ್ಯಾಕ್ಟ್ಸ್ ಇದ್ದರೆ ಅವನ್ನೂ ನನಗೆ ಕೊಡಿರಿ ಎಂದು ಕೇಳಿದಾಗ ಯಾವ ಕಾರಣ ದಿಂದಲೋ ಏನೋ ಒಂದೂ ಅಭಿಪ್ರಾಯವನ್ನೂ ಕೊಡಲಿಕ್ಕೆ ಇಚ್ಛೆ ಪಡಲಿಲ್ಲ. ಆದುದರಿಂದ ಅಂಥ ವಿಷಯಗಳಿಗೆ ಎಡೆ ಕೊಡಲಾರದೆ ಒಂದು ಮಾತಿನಿಂದ ಹೇಳುವುದಾದರೆ ಯಾವುದೇ ಸರ್ಕಾರವೇ ಆಗಲಿ, ಇಂಥ ವಿಷಯಗಳ ಬಗ್ಗೆ ರಾಜಕೀಯ ದೃಷ್ಟಿಯನ್ನು ಬಿಟ್ಟು ಮಾನವೀಯತೆಯ ದೃಷ್ಟಿಯಿಂದ ವಿಚಾರ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಂಡರೆ ತಪ್ಪುಗಳೇನಿಲ್ಲ. ಸರ್ಕಾರದಲ್ಲೇ ಕೆಲವರು ಅಧಿಕಾರಿಗಳು ಲಂಚಕೋರರೂ ಇರಬಹುದು, ಅಂತಹ ಲಂಚಕೋರರನ್ನು ಪ್ರೋತ್ಸಾಹ ಮಾಡಲಿಕ್ಕೆ ಸಮಾಜ, ಮಂಡಲಿಗಳೂ ಕೂಡ ಇರಬಹುದು ಮತ್ತು ಸ್ವಂತ ಲಾಭವನ್ನು ಮುಂದಿಟ್ಟುಕೊಂಡು ಕಾರ್ಯ ಮಾಡುವಂತಹ ಅನೇಕ ಲಾಭ ಬಡುಕ ವಾ ಪುರಸ್ಥರು ಇದ್ದರೆ ಅವರ ಕೈವಾಡಗಳೂ ಸಹ ಇರಬಹುದು. ಯಾವ ವ್ಯಕ್ತಿಗಳು ಆರೀತಿ ಇದಾಕ್ಷಣಕ್ಕೆ ಇಡೀ ಅಧಿಕಾರಿ ವರ್ಗವನ್ನಾಗಲಿ ಅಥವಾ ಸರ್ಕಾರ ವನ್ನಾಗಲಿ ಬಯ್ಯುವುದಕ್ಕೆ ಇದು ಸಂದರ್ಭವಲ್ಲವೆಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಇವತ್ತಿನ ದಿವಸ ಧಾರಣೆಗಳ ಏರಿಳಿತಗಳನ್ನು ನೋಡಬಹುದು. ಮುಖ್ಯ ಮಂತ್ರಿಗಳು ಜಗತ್ತಿನ ವಿಷಯವಾಗಿ ಹೇಳುತ್ತಾ ಅನೇಕ ಸನ್ನಿವೇಶಗಳನ್ನೂ ಪರಿಸ್ಥಿತಿಗೆ ಸಂಬಂಧಪಟ್ಟ ವಿಷಯಗಳನ್ನೂ ಹೇಳಿದ್ದಾರೆ. ನಾನು ಆ ವಿಷಯ ವಾಗಿ ಮಾತನಾಡುವುದಿಲ್ಲ ನಮ್ಮ ಕರ್ನಾಟಕದಲ್ಲಿ ಅಕ್ಕಪಕ್ಕದ ರಾಜ್ಯಗಳಿಂತ ಧಾರಣೆಗಳು ಹೆಚ್ಚಿವೆಯೋ ? ಹಾಗೆ ಹೆಚ್ಚಿದ್ದರೆ ಅದಕ್ಕೆ ಕಾರಣಗಳು ಏನು ಎಂಬುದನ್ನು ಮಾನ್ಯ ಸದಸ್ಯರುಗಳು ಕೂಲಂಕಷವಾಗಿ ಗಮನಿಸಬೇಕು ಇವತ್ತಿನ ದಿವಸ ಏನಾಗಿದೆ ಎಂಬ ವಿಷಯವನ್ನು ತೆಗೆದುಕೊಂಡರೆ ಅಕ್ಕಿಯಾಗಲೀ ಜೋಳ ವಾಗಲೀ ರಾಗಿ ಅಗಲಿ ಈಗ ೨-೩ ವರ್ಷಗಳಿಂದ ಉತ್ಪಾದನಾ ಪರಿಸ್ಥಿತಿ ಸ್ವಲ್ಪ ಸುಧಾರಿಸುತ್ತಾ ಬಂದಿದ್ದರೂ ಅದಕ್ಕಿಂತ ಮೊದಲು ಡಿಫಿಷಿಟ್ ಆದಂಥ ರಾಜ್ಯವಾಗಿತ್ತು ನಮ್ಮ ಕೇಂದ್ರ ಸರ್ಕಾರದವರು ಬಹುಭಾಗ ಕೊಡುತ್ತಿರುವರ ಮೇಲೆ ನಮ್ಮ ಹಂಚಿಕೆ ಅವಲಂಭಿಸಿದೆ. ಈಗ ಪೂರ್ತಿಯಾಗಿ ಸ್ವಾವಲಂಭಿ ಅಗಿದ್ದೇವೆ, ಎಂದು ಹೇಳುವುದಕ್ಕೆ ನಾನು ಇಚ್ಛೆ ಪಡುವುದಿಲ್ಲ. ಸ್ವಾವಲಂಬಿ ಆಗುವ ಮಾರ್ಗದಲ್ಲಿ ಕರ್ನಾಟಕ, ಮುಂದು ವರಿಯುತ್ತಿದೆ, ತಮಿಳುನಾಡು ಆಂಧ್ರ ರಾಜ್ಯಗಳಂತೆ ಕರ್ನಾಟಕ ಸರ್‌ಪ್ಲಸ್ ಏರಿಯೂ ಅಲ್ಲ. ಇಲ್ಲಿ ಬಹು ಸಂಖ್ಯಾತ ಜನ ಅಕ್ಕಿಯನ್ನೆ ಅವಲಂಭಿಸಿದ್ದಾರೆ. ಹಿಂದೆ ಗೋಧಿ ಬೆಲೆ ಏರುತ್ತಾ ಇರಲಿಲ್ಲ ಏತಕೆಂದರೆ ಅಂದು ಗೋಧಿಯನ್ನು ತಿನ್ನುವ ಜನ ಕಡಿಮೆ ಇದ್ದರು. ಇವತ್ತಿನ ದಿವಸ ಹೆಚ್ಚುತ್ತಿದ್ದಾರೆ ಅಂಗಡಿಗಳಲ್ಲಿ ಗೋಧಿ ಯನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಿದಾರೆ. ನಾವು ಪಂಜಾಬು ಹರಿಯಾಣ, ಕಡೆಯಿಂದ ಗೋಧಿ ತಬೇಕು. ಅಲ್ಲಿಯೂ ಸಹ ಗೋಧಿ ಕೊರತೆ ಇದೆ, ಇದರಿಂದಾಗಿ ಗೋಧಿಯನ್ನು ಕಳಿಸಲಿಕ್ಕಾಗಲಿ, ಗೋಧಿ ಯನ್ನು ಕೊಡಲಿಕ್ಕಾಗಲಿ ಹಿಂದುಮುಂದು ನೋಡುವ ಪ್ರಸಂಗಬಂದಿದೆ. ಇದರ ಪರಿಣಾಮವಾಗಿ ಕೆಲವು ರೀತಿಯಲ್ಲೇ ನಮ್ಮ ರಾಜ್ಯಕ್ಕೆ ತೊಂದರೆಬಂದಿದೆ. ಇದು ವಾಸ್ತವಿಕ ಅಂಶವಾದ್ದರಿಂದ ಇದನ್ನು ಹೇಗೆ ಸರ್ಕಾರದಿಂದ ಪರಿಹರಿಸಿಕೊಳ್ಳಬೇಕೆಂಬನ್ನು ವಿಚಾರ ಮಾಡಬೇಕಾಗಿದೆ. ಇಷ್ಟಾದರೂ ಸಹ ನಮ್ಮ ರಾಜ್ಯ ದಲ್ಲಿನ ಧಾರಣೆಗಳನ್ನು ಉಳಿದ ರಾಜ್ಯಗಳ ಧಾರಣೆಗಳೊಂದಿಗೆ ಕಂಪೇರ್ ಮಾಡಿ ನೋಡಿಕೊಳ್ಳಬೇಕೆಂದು ವಿನಯ ಪೂರ್ವಕವಾಗಿ ಪ್ರಾರ್ಥಿಸುತ್ತೇನೆ, ಬೆಳಗಾಂನಷ್ಟೆ ಹೆಚ್ಚು ಬೆಲೆ ಇರುವುದರಿಂದ ಅಲ್ಲಿಯ ಅಂಕಿ ಅಂಶ ಗಳನ್ನೂ ನಾನು ತೆಗೆದು ಕೊಂಡಿದ್ದೇನೆ. ಶಿವಮೊಗ್ಗದಲ್ಲಿ ಇದ್ದ ಅಂಕಿ ಅಂಶಗಳನ್ನು ತೆಗೆದುಕೊಳ್ಳಲಿಲ್ಲ. ನಮ್ಮಲ್ಲಿ ಜೂನ್‌ನಲ್ಲಿ ಒಂದು ಕೆ.ಜಿ. ಅಕ್ಕಿ ೧.೬೦ ಪೈಸೆಯಿಂದ ೨.೫೦ ಪೈಸೆಯ ತನಕ ಇತ್ತು. ತಮಿಳು ನಾಡಿನಲ್ಲಿ ಅದೇ ಅಕ್ಕಿಗೆ ತಮಿಳ್ನಾಡಿನಲ್ಲಿ ಜೂನ್ ತಿಂಗಳಿನಲ್ಲಿ ೧.೫೦ ಯಿಂದ ೨.೫೦ ಪೈಸೆಯವರೆಗೆ ಇದ್ದರೆ

ಆಗಸ್ಟ್‌ನಲ್ಲಿ ೨.೬೬ ಪೈಸೆಯಿಂದ ೨.೮೦ ಪೈಸೆಯವರಿಗೆ ಇದೆ. ಆಂಧ್ರದಲ್ಲಿ ೨.೩೦ ಪೈಸೆ ಜೂನ್‌ನಲ್ಲಿ ಇದ್ದರೆ ಆಗಸ್ಟ್‌ನಲ್ಲಿ ೨.೪೦ ಪೈಸೆ ಇದೆ. ಮಹಾರಾಷ್ಟ್ರದಲ್ಲಿ ೬.೭ ರೂಪಾಯಿಗಳಷ್ಟು ಹೆಚ್ಚಾಗಿದೆ. ಅಕ್ಕಪಕ್ಕದ ೨.೩ ಸ್ಟೇಟ್‌ಗಳನ್ನು ತೆಗೆದುಕೊಂಡರೆ ಕರ್ನಾಟಕ ರಾಜ್ಯದ ಜನತೆಗೆ ಇವತ್ತಿನ ದಿವಸ ಸೌಕರ್ಯವಾಗಿದೆಯೋ ಅಥವಾ ತೊಂದರೆ ಆಗಿದೆಯೋ ಎಂಬುದು ಗೊತ್ತಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ಅಕ್ಕಪಕ್ಕದ ರಾಜ್ಯದಲ್ಲಿ ಹೆಚ್ಚಿಗೆ ಇದೆ ಇಲ್ಲಿ ಕಡಿಮೆ ಇದೆ. ಎಂದು ಹೇಳುವುದು ಅಷ್ಟು ಸಮಂಜಸವಲ್ಲ. ಬಂಗ್ಲಾದೇಶದಲ್ಲಿ ಯುದ್ಧ ಆಯಿತು ಪಾಕಿಸ್ಥಾನದಲ್ಲಿ ಕ್ಷಾಮ ಆಯಿತು. ಇವಕಿಂತ ಇಲ್ಲಿ ಸುಭಿಕ್ಷವಾಗಿದೆ ಎಂದು ಹೇಳುವುದು ಆರ್ಗ್ಯುಮೆಂಟ್ ಅಲ್ಲ. ಒಂದು ಪೈಸೆಯೇ ಆಗಲಿ ಹೆಚ್ಚಾಗಲಿಕ್ಕೆ ಕಾರಣ ಏನು ? ಅದು ಏತಕ್ಕೆ ಆಯಿತು ? ಹೆಚ್ಚಾದುದು ರೈತನಿಗೆ ಹೋಯಿತೋ, ವರ್ತಕನಿಗೆ ಹೋಯಿತೋ ಅಥವಾ ಸರ್ಕಾರಕ್ಕೆ ಬಂತೋ ? ಯಾರಿಗೆ ಹೋಯಿತು ?

ಶ್ರೀ ಕೆ. ಹೆಚ್. ಪಾಟೀಲ್.—ಅನೇಕ ವರ್ಷಗಳಿಂದಲೂ ನಾವು ಸಮಾಜವಾದ ಹೆಸರಿನಲ್ಲಿ ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತಲೆ ಬರುತ್ತಿದ್ದೇವೆ, ರೈತರು ಬೆಳೆದ ದವಸಕ್ಕೆ ಸರಿಯಾದ ಬೆಲೆ ದೊರೆಕಿಸಿಕೊಡಬೇಕೆಂದು ಎಲ್ಲರೂ ಹೇಳುತ್ತಿದ್ದರು, ಮತ್ತು ಇವನ್ನು ಮಾಡದೇ ಇದ್ದರೆ ರೈತರ ಆರ್ಥಿಕ ಸ್ಥಿತಿ ಚೆನ್ನಾಗಿರುವುದಿಲ್ಲ ಎಂದು ಹೇಳುತ್ತಲೇ ಬರುತ್ತಿದ್ದರು. ಇದಕ್ಕಾಗಿ ಅಗ್ರಿಕಲ್ಚರ್ ಕಮಿಷನ್ ಎಂದು ಮಾಡಲಾಯಿತು. ಅವರು ಯಾವ ಯಾವ ಧಾನ್ಯಗಳನ್ನು ತೆಗೆದುಕೊಳ್ಳಬೇಕೆಂದು ನಿಗದಿ ಮಾಡಿ ಇದರ ಬೆಲೆಯನ್ನು ನಿರ್ಧಾರ ಮಾಡಿದರು ಇದರಂತೆ ಅಕ್ಕಿ ಬೇಳೆ ಇತ್ಯಾದಿ ಕೆಲವು ದವಸಗಳ ಬೆಲೆಗಳು ಸ್ವಲ್ಪ ಹೆಚ್ಚಾಗಲು ಕಾರಣವಾಯಿತು. ರೈತರಿಗೆ ಒಂದು ನಾಲ್ಕು ರೂಪಾಯಿಗಳು ಹೆಚ್ಚು ಸಿಗಲಿ ಎಂದು ಮಾಡಿದರೆ ಇದರ ಬಗ್ಗೆ ಮಾನ್ಯ ಸದಸ್ಯರು ವಿಪರೀತವಾಗಿ ಇಲ್ಲಿ ಟೀಕೆ ಮಾಡುತ್ತಿದ್ದಾರೆ, ನಮ್ಮ ದೇಶದಲ್ಲಿ ಶೇಕಡಾ ಎಪ್ಪತ್ತರಷ್ಟು ಜನರು ರೈತರೇ ಆಗಿರುವುದರಿಂದ ಅವರ ಆರ್ಥಿಕ ಸ್ಥಿತಿ ಸುಧಾರಿಸಲು ಸ್ವಲ್ಪ ಹುಟ್ಟಿನ ದವಸಗಳ ಬೆಲೆಯನ್ನು ಏರಿಸಬೇಕಾಗಿಬಂತು.

ಶ್ರೀ ಕೋಣಂದೂರು ಲಿಂಗಪ್ಪ.— ರೈತರಿಗೆ ನೇರವಾಗಿ ಸಿಕ್ಕುವ ವ್ಯವಸ್ಥೆ ಮಾಡಿದರೆ ಸರಿ. ಆದರೆ ಇಲ್ಲಿ ರೈತರಿಗೆ ಸಿಗುತ್ತಿಲ್ಲ. ಇದರ ಲಾಭವಿಲ್ಲಾ. ಮಧ್ಯವರ್ತಿಯಲ್ಲಿರುವ ವರ್ತಕರುಗಳಿಗೆ ಸಿಗುತ್ತದೆ. ಇದಕ್ಕಾಗಿ ನಾವು ಸರಕಾರವನ್ನು ಸಮಾಜವಾದಿ ಸರಕಾರವಲ್ಲ ವರ್ತಕವಾದ ಸರಕಾರ ಎಂದು ಹೇಳುತ್ತಿರುವುದು. ನಮಗೆ ಬೇಕಾಗಿರುವುದು ವರ್ತಕವಾದೀ ಸರಕಾರವಲ್ಲ.

ಶ್ರೀ ಕೆ. ಹೆಚ್. ಪಾಟೀಲ್.— ನಾವೇನೂ ವರ್ತಕರಿಗೆ ಸಹಾಯ ಮಾಡುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನೀವುಗಳೆಲ್ಲಾ ಅದೇ ವರ್ತಕರನ್ನು ಇಟ್ಟುಕೊಂಡು ಚಳುವಳಿ ಮಾಡುತ್ತಿದ್ದೀರಿ ನೀವು ಬಿಹಾರಕ್ಕೆ ಹೋಗಿ ಬನ್ನಿ ಅಲ್ಲ ಏನಾಗಿದೆ ನಿಮಗೆ ಗೊತ್ತಾಗುತ್ತದೆ ಶ್ರೀಮಾನ್ ಲಿಂಗಪ್ಪನವರು ವರ್ತಕರುಗಳನ್ನು ಕೂಡಿಕೊಂಡೇ ಚಳುವಳಿ ಮಾಡುತ್ತಿರುವುದು

ಶ್ರೀ ಕೆ. ಹೆಚ್. ಪಾಟೀಲ್ — ೧೯೭೩-೭೪ರಲ್ಲಿ ಎಷ್ಟು ವರ್ತಕರುಗಳ ಮೇಲೆ ಕೇಸು ಹಾಕಿದ್ದೇವೆ ಎಂದರೆ ೯೧೧೪ ಕೇಸುಗಳನ್ನು ಹಿಡಿದು ತನಿಖೆಗೆ ಒಳಪಡಿಸಲಾಗಿದೆ, ಇದಾದ ಮೇಲೆ ಈ ವರ್ಷದ ಜೂನ್ ನಿಂದ ಇಲ್ಲಿಯವರೆಗೆ ೨೯೬೩ ಕೇಸುಗಳನ್ನು ಹಿಡಿಯಲಾಗಿದೆ. ಇದರಲ್ಲಿ ಪೋಲೀಸು ಅಧಿಕಾರಿಗಳು ಇದ್ದಾರೆ. ಮತ್ತು ನಮ್ಮ ಇಲಾಖೆಯ ಅಧಿಕಾರಿಗಳೂ ಸೇರಿ ಹಿಡಿದಿದ್ದಾರೆ. ಸುಮಾರು ಹನ್ನೊಂದು ಸಾವಿರ ಜನ ಇರುವ ಅಧಿಕಾರಿಗಳೆಲ್ಲಾ ಲಂಚ ಕೊಡಲಿಲ್ಲ. ಎಂದು ಇವರೇನಾದರೂ ಕೇಸುಗಳನ್ನು ಹಿಡಿದರೇ? ಎಲ್ಲರೂ ಲಂಚ ತೆಗೆದುಕೊಳ್ಳುವವರೇ ಎಂದು ಇಲ್ಲಿ ಭಾಷಣ ಮಾಡಿದರೆ ಅದು ಅಷ್ಟು ಸರಿಯಲ್ಲ ಇವರಲ್ಲಿ ಬ್ಲಾಕು ಮಾರ್ಕೆಟೀಯರುಗಳನ್ನು ಹೆಚ್ಚು ಹೆಚ್ಚಾಗಿ ಹಿಡಿದಿದ್ದಾರೆ. ಆದರೆ ಎಲ್ಲೋ ಒಂದು ಕಡೆ ಸೀಮೆಎಣ್ಣೆಯನ್ನು ಹೆಚ್ಚಿನದರದಲ್ಲಿ ಒಂದು ಲೀಟರಿಗೆ ಮೂರು ಇಲ್ಲವೆ ಮೂರುವರೆ ರೂಪಾಯಿಗಳಂತೆ ಮಾರಿದರು ಎಂದು ಹೇಳಿದ್ದಾರೆ ಆದರೆ ಇದುವರೆಗೆ ಯಾವ ಒಬ್ಬ ಸದಸ್ಯರಾಗಲಿ ನನ್ನಲ್ಲಿ ಇಂತಹ ವರ್ತಕರ ಹೆಸರು ಎಂದು ನಿರ್ದಿಷ್ಟವಾಗಿ ತಿಳಿಸಲಿಲ್ಲ ಹೀಗಾದರೆ ನಾವೇನು ಹೇಳುವುದು ?

ಶ್ರೀ ಕೋಣಂದೂರು ಲಿಂಗಪ್ಪ. — ನಾನು ಎಲ್ಲರ ಹೆಸರುಗಳನ್ನು ಕೊಡುತ್ತೇನೆ. ತಾವು ನನ್ನ ಜೊತೆ ನನ್ನ ಕ್ಷೇತ್ರಕ್ಕೆ ಬನ್ನಿ ಯಾರು ಹೆಚ್ಚು ಬೆಲೆಯಲ್ಲಿ ಸೀಮೆಎಣ್ಣೆ ಮಾರುತ್ತಿದ್ದಾರೆ ಅವರನ್ನು ತೋರಿಸಿಕೊಡುತ್ತೇನೆ. ಬೇಕಾದರೆ ಈಗಲೇ ಇಲ್ಲಿ ಹೆಸರನ್ನು ಕೊಡಬಲ್ಲೇ ?

ಶ್ರೀ ಕೆ. ಹೆಚ್. ಪಾಟೀಲ್—ವಿವರಗಳನ್ನು ಕೊಟ್ಟು ಹೆಸರು ಕೊಡಲಿ ಆಗ ವಿಚಾರ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯಮಂತ್ರಿಗಳಾದ ಶ್ರೀ ಪಾಟೀಲರವರು ಇದುವರೆಗೆ ಯಾರೂ ಇಲ್ಲಿ ಒಬ್ಬ ವರ್ತಕರ ಹೆಸರನ್ನು ಕೊಡಲಿಲ್ಲ. ಎಂದರು. ಈ ರೀತಿ ಎಲ್ಲ ದೂರುಗಳನ್ನು ನಮ್ಮ ತಲೆ ಮೇಲೆ ಗೂಬೆ ಕೂಡಿಸಲು ಹೋಗುವುದು ಸರಿಯಲ್ಲ ನಾವುಗಳು ನೋಡಿರುವುದನ್ನು ತಿಳಿಸಿದ್ದೇವೆ. ನಿಮ್ಮ ಸರಕಾರದ ಅಧಿಕಾರಿಗಳು ಇರುವುದಾದರೆ ಏಕೆ ? ಅವರು ಇದರ ಬಗ್ಗೆ ಪತ್ತೆ ಮಾಡಲು ಸಾಧ್ಯವಿಲ್ಲವೆ ? ಇವರೆಲ್ಲಾ ನಿದ್ರೆ ಮಾಡುತ್ತಿದ್ದಾರೇನು ?

ಶ್ರೀ . ದೇವರಾಜ ಅರಸ್.— ಅವರೂ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ಕೈಯಲ್ಲೂ ಅಷ್ಟು ಪತ್ತೆಮಾಡಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ .—ಊರಿನ ತುಂಬಾ ಇಂತಹ ದೂರುಗಳಿವೆ.

ಶ್ರೀ ಡಿ. ದೇವರಾಜ ಅರಸ್.— ಹಾಗಾದರೆ ನಮ್ಮ ಲೆಜಿಸ್ಲೇಟರ್‌ಗಳು ಎಲ್ಲರೂ ಕೆಟ್ಟವರೇ ಎಂದರೆ ಹೇಳಿದ ಹಾಗಾಗುತ್ತದೆ. ಊರಿನ ತುಂಬಾ ಇಂತಹ ದೂರುಗಳಿವೆ ಎಂದರೆ ಇದರಲ್ಲಿ ತಮ್ಮ ಜವಾಬ್ದಾರಿಯೂ ಇದೆ ಎಂದಾಯಿತು ಇದಕ್ಕಾಗಿ ಇದರ ಹೊರೆಯನ್ನು ನಿಮ್ಮ ಮೇಲೂ ಹೊರಿಸಬೇಕಾಗುತ್ತದೆ. ಈಚೆಗೆ ನಮ್ಮ ಮಾನ್ಯ ಮಂತ್ರಿಗಳು ಬೆಂಗಳೂರಿನಲ್ಲಿ ಒಂದು ಸೊಸೈಟಿ ನೋಡಲು ಹೋಗಿದ್ದರು. ಅಲ್ಲಿರುವ ಕೆಲವು ಲೆಕ್ಕಪತ್ರಗಳು ಸರಿಯಾಗಿರಲಿಲ್ಲ. ಎಂದು ಇದನ್ನು ತನಿಖೆ ಮಾಡಿಸಿದರು ಮತ್ತು ಈ ಸೊಸೈಟಿಗೆ ವಹಿಸಿದ್ದ ಎಲ್ಲ ಜವಾಬಂದಾರಿಗಳನ್ನೂ ವಾಪಸ್ಸು ಪಡೆದು ಬೇರೆಯವರಿಗೆ ಕೊಡಬೇಕು ಎಂದು ಕ್ರಮ ತೆಗೆದುಕೊಂಡಿದ್ದಾರೆ. ಹೀಗೆ ಅಲ್ಲಲ್ಲಿ ಕಂಡು ಬಂದ ಲೋಪಗಳನ್ನು ಕಂಡು ಹಿಡಿಯುತ್ತಿದೇವೆ. ಈಚೆಗೆ ಚಿಕ್ಕಬಳ್ಳಾಪುರದಲ್ಲಿ ನಡೆದದ್ದೇನು? ಅಲ್ಲಿನ ಜನರು ಲೂಟಿ ಮಾಡಲು ಹೋದರು ಅಂತಹವರ ಮೇಲೆ ಕ್ರಮ ತೆಗೆದುಕೊಂಡಾಗ ಅಲ್ಲಿ ಗುಂಡು ಹಾರಿಸಿದರು ಎಂದು ಹೇಳಿದರು. ಸುಮ್ಮನೆ ಯಾರ ಮೇಲೂ ಗುಂಡನ್ನು ಹಾರಿಸುವುದಿಲ್ಲ. ಆದರೆ ಜನರು ಹಿಂಸೆ ಮಾಡಿ ಗೂಂಡಾಗಿರಿ ಮಾಡಿ ಲೂಟಿ ಮಾಡಲು ಹೋದರೆ ಆಗ ಸರಕಾರ ಸುಮ್ಮನೆ ಇದನ್ನು ನೋಡಿಕೊಂಡು ಇರಲಾಗುವುದಿಲ್ಲ. ಅಂಗಡಿಗಳು ಲೂಟಿಯಾಗುತ್ತಿದ್ದರೆ ಅವರಿಗೆ ತಕ್ಕ ಬಂದೋಬಸ್ತು ಮಾಡಬೇಡವೇ ? ಇವರನ್ನು ಹೀಗೆ ಬಿಟ್ಟು ಬಿಡಬೇಕೆಂದು ಹೇಳುವುದು. ಸರಿಯಲ್ಲ. ಇದರಲ್ಲಿ ಒಬ್ಬರು ವರ್ತಕರು ಕಲಬೆರಕೆ ಮಾಡಿದರು. ಎಂದು ಅವರ ಮೇಲೆ ಕೇಸನ್ನೂ ಹಾಕಲಾಗಿದೆ. ಇದರ ಮೇಲೆ ದೂರು ಬಂದಾಗ ಇದನ್ನು ವಿಚಾರ ಮಾಡಿ ಇದರಲ್ಲಿ ಯಾವುದು ಸರಿ ಯಾವುದು ತಪ್ಪು ಎನ್ನುವುದನ್ನು ನೋಡಿಕೊಂಡು ವಿಚಾರ ಮಾಡಬೇಕಾಗಿದೆ. ಎಲ್ಲ ಅಧಿಕಾರಿಗಳೂ ಲಂಚ ತಿನ್ನುವುದು ಎಂದು ಹೇಳಲಾಗುವುದಿಲ್ಲ, ಲೂಟಿ ಮಾಡುವುದರಿಂದ ಇಂತಹ ಸಮಸ್ಯೆಗಳು ಬಗೆಹರಿಯುವುದಿಲ್ಲ. ಹಿಂಸಾಚಾರಗಳನ್ನು ಮಾಡುವುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ಸುಮ್ಮನೆ ಎಲ್ಲರ ಮೇಲೂ ದೂರು ಹೇಳುವುದು ಸರಿಯಲ್ಲ. ನಿಮ್ಮಲ್ಲಿ ವಿವರಗಳಿದ್ದರೆ ಅದನ್ನು ಬರೆದು ನಮಗೆ ಕೊಡಿ ವಿಚಾರ ಮಾಡೋಣ.

ಶ್ರೀ ಕೆ. ಹೆಚ್. ಪಾಟೀಲ್.— ಎರಡು ವರ್ಷಗಳಿಂದ ಎಷ್ಟು ಜನ ವ್ಯಾಪಾರಸ್ಥರ ಮೇಲೆ ಕೇಸುಗಳನ್ನು ಹಾಕಿ ಕ್ರಮ ತೆಗೆದುಕೊಂಡಿದ್ದೇನೆ. ಎನ್ನುವ ಅಂಕಿ ಅಂಶಗಳನ್ನು ಇಲ್ಲಿ ಹೇಳುತ್ತೇನೆ. ೧೯೭೩ನೇ ಇಸವಿಯಲ್ಲಿ ೯೧೧೪ ಕೇಸುಗಳನ್ನು ಹಿಡಿದೆವು ಇದರ ಮೊತ್ತ ಸುಮಾರು ೧, ೮೨, ೫೨, ೨೩೦ ಮತ್ತು ೧೯೭೪ರ ಜನವರಿಯಿಂದ ಇತ್ತೀಚೆಗೆ ೨೯೩೬ ಕೇಸುಗಳು ಇತ್ತು. ಇದರ ಬೆಲೆ ಸುಮಾರು ಮೂರು ಕೋಟಿಯವರೆಗೆ ಇತ್ತು ಎಂದರೆ ೩, ೨೦, ೫೮, ೭೬೪ ರೂಪಾಯಿಗಳಷ್ಟು ದವಸಗಳ ಬೆಲೆ ಇತ್ತು.

ಸರ್ಕಾರದವರು ವಶಪಡಿಸಿಕೊಂಡ ಧಾನ್ಯವನ್ನು ಫರ್‌ಫೀಟ್ ಮಾಡಿಕೊಳ್ಳಬೇಕೆಂದು ಹೇಳಿದರು. ಹಾಗೇನಾದರೂ ಮಾಡಿದ್ದರೆ ವ್ಯಾಪಾರಸ್ಥರ ವಂಶವೇ ನಿರ್ಮೂಲನ ಮಾಡಿದ ಹಾಗೆ ಆಗುತ್ತಿತು. ದೇಶದ ದೃಷ್ಟಿಯಿಂದ ಮತ್ತು ಯೋಗ್ಯವಾದ ಬೆಲೆಯನ್ನು ಕೊಟ್ಟು ಅವರನ್ನು ಮನುಷ್ಯರನ್ನಾಗಿ ಬಾಳಿಸೋಣ ಅವರನ್ನು ಹತ್ತಿಕ್ಕುವುದು ಬೇಡವೆನ್ನುವ ಮಾನವೀಯ ದೃಷ್ಟಿ ಎರಡನ್ನೂ ಇಟ್ಟುಕೊಂಡು ಈ ಮಾರ್ಗವನ್ನು ಅನುಸರಿಸಿದ್ದೇವೆಂದು ಹೇಳುತ್ತೇನೆ.

ಅಕ್ರಮ ವ್ಯವಹಾರ ಮಾಡುವವರ ಹೆಸರುಗಳನ್ನು ಕೊಡಲು ಅಂಜುತ್ತಿದ್ದೇವೆಂದು ಹೇಳಿದರು. ಭಾರತ ದೇಶದಲ್ಲಿ ಈ ರೀತಿ ಅಕ್ರಮ ವ್ಯವಹಾರದಲ್ಲಿ ತೊಡಗಿರುವವರ ಹೆಸರನ್ನು ಕೊಟ್ಟವರು ಎಂದರೆ ಕರ್ನಾಟಕ ಸರ್ಕಾರವೇ ಪತ್ರಿಕೆಯವರು ಆ ಹೆಸರುಗಳನ್ನು ಅಚ್ಚು ಹಾಕದೆ ಇದ್ದರೆ ನಾನು ಏನು ಮಾಡುವುದಕ್ಕಾಗುತ್ತದೆ ಪತ್ರಿಕೆಯವರಿಗೂ ಈ ಹೆಸರುಗಳ ಪಟ್ಟಿಯನ್ನು ಕೊಡಲಾಗಿದೆ. ಅವರು ಪ್ರತಿದಿನ ೫೦ ಮಂದಿಯ ಹೆಸರನ್ನು ಹಾಕುತ್ತ ಹೋದರೆ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನಾಗಿ ಪತ್ರಿಕೆಯಲ್ಲಿ ಹಾಕಿ ಎಂದು ಅವರನ್ನು ಕೇಳುವುದಕ್ಕೆ ಹೋಗುವುದಿಲ್ಲ.

ಈ ವರ್ಷ ತಮಗೆ ಗೊತ್ತಿರುವ ಹಾಗೆ ರಾಜ್ಯದಲ್ಲಿ ಕಳವಳಮಯದಿಂದ ಸ್ಥಿತಿ ಇತ್ತು. ಹೋದ ವರ್ಷ ಡ್ರಾಟ್ ಕಂಡಿಷನ್ ಇದ್ದು ಜನರಲ್ಲಿ ಕೊಳ್ಳುವ ಶಕ್ತಿ ಕಡಮೆಯಾಗಿತ್ತು. ಸರ್ಕಾರ ಆಗ ಎಲ್ಲ ಸಮಸ್ಯೆಗಳನ್ನು

ತಲೆಯೊಳಗೆ ತೆಗೆದುಕೊಂಡು ಅದಕ್ಕೆ ತಕ್ಕ ಕಾರ್ಯಗಳನ್ನು ರೂಪಿಸಬೇಕಾಯಿತು. ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಕಡಿಮೆ ಗೋಧಿಯನ್ನು ಕೊಟ್ಟಾಗ ನಾವು ಒತ್ತಾಯ ಮಾಡಿ ಹೆಚ್ಚು ಗೋಧಿಯನ್ನು ಕೊಡಬೇಕೆಂದು ಕೇಳಿದೆವು. ಅದರ ಜೊತೆಗೆ ಪಂಜಾಬ್ ಮತ್ತು ಹರಿಯಾಣದಿಂದ ಗೋಧಿಯನ್ನು ಸಂಗ್ರಹಣೆ ಮಾಡಲು ನಮ್ಮ ಅಧಿಕಾರಿಗಳನ್ನು ಕಳುಹಿಸಿದೆವು ಅಲ್ಲದೆ ನಾನೂ ಸ್ವತಃ ಹೋಗಿದ್ದಲ್ಲದೆ ವ್ಯಾಪಾರಸ್ತರೂ ತಾವೇ ಹೋಗಿ ಗೋಧಿಯನ್ನು ತರಲು ಪರ್ಮಿಟ್‌ಗಳನ್ನು ಕೊಟ್ಟಿದೆ. ಆದರೂ ಕೂಡ ಕಳ್ಳಸಂತೆಕೋರರು ನಮ್ಮ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವವರೆಗೆ ಬೆಲೆಗಳನ್ನು ಏರಿಳಿತವನ್ನು ಅನಾವಶ್ಯಕವಾಗಿ ಮಾಡತಕ್ಕ ಸಂದರ್ಭವಿದೆ. ಪದಾರ್ಥ ಕಡಿಮೆ ಇದ್ದಾಗ ಹೆಚ್ಚು ಧಾರಣೆ ಮಾಡುತ್ತಾರೆ ಸೀಮೆಎಣ್ಣೆ ಬಗ್ಗೆ ಅನೇಕ ಸದಸ್ಯರು ಟೀಕೆ ಮಾಡಿದ್ದಾರೆ. ಹೋದ ತಿಂಗಳು ೯೧,೦೦೦ ಟನ್ ರಾಜ್ಯಕ್ಕೆ ಕೊಟ್ಟಿದ್ದರು. ಈ ತಿಂಗಳು ೧೧,೦೦೦ ಟನ್ ನಮಗೆ ಕೊಟ್ಟಿದ್ದಾರೆ. ಅದನ್ನು ಮಿತವಾದ ಪ್ರಮಾಣದಲ್ಲಿ ಹಂಚುವುದಕ್ಕೆ ಯಾವ ಕೊರತೆಯೂ ಇಲ್ಲ. ನಮ್ಮಲ್ಲಿರುವ ಜನಸಂಖ್ಯೆ, ರೇಷನ್ ಕಾರ್ಡುಗಳ ಸಂಖ್ಯೆ ಇವುಗಳ ಲೆಕ್ಕ ಹಿಡಿದು, ಬೆಂಗಳೂರಿನಲ್ಲಿರುವ ಯಾವತ್ತು ಮನೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೂ ನಮ್ಮಲ್ಲಿ ಸೀಮೆಎಣ್ಣೆಯ ಕೊರತೆ ಬರಲಾರದು. ಆದರೆ ಕೊರತೆ ಏಕೆ ಆಗುತ್ತೆಂದರೆ ಎಲ್ಲರೂ ಮುಚ್ಚಿಬಿಡುತ್ತಾರೆ. ಆ ರೀತಿ ಆಗದಂತೆ ನೋಡಿಕೊಂಡು ಗೇರಪ್ ಮಾಡಬೇಕಾದರೆ ಕಾಲಬೇಕು. ಇಂಥ ಸಂದರ್ಭ ಬಂದಾಗ ಇದ್ದ ಮಾಲನ್ನು ಮುಚ್ಚಿಟ್ಟು ಧಾರಣೆ ಹೆಚ್ಚು ಮಾಡುವ ಸಂಭವವಿದೆ. ನಾನು ೧೦-೧೨ ಅಂಗಡಿಗಳಲ್ಲಿ ಸರಿಯಾಗಿ ಹಂಚಿಕೆ ಮಾಡದಿರುವುದನ್ನು ನೋಡಿದ್ದೇನೆ. ಕೆಲವು ಕಡೆ ತೂಕದಲ್ಲಿ ಕಡಿಮೆ ಕೊಡುವುದನ್ನು ನೋಡಿ ಕ್ರಮ ತೆಗೆದುಕೊಂಡಿದ್ದೇನೆ. ಕೆಲವು ಸಹಕಾರಿ ಸಂಘಗಳಿಗೆ ಹೋಗಿ ನೋಡಿದಾಗ ಸರ್ಕಾರ ಕೊಡುವ ಪ್ರಮಾಣದಲ್ಲಿ ಧಾನ್ಯಗಳನ್ನು ಕಾರ್ಡುದಾರರಿಗೆ ಹಂಚದೆ, ಸರ್ಕಾರ ಕೊಡಲಿಲ್ಲ. ನಾವೇನು ಮಾಡೋಣವೆಂದು ಜನರಿಗೆ ಹೇಳುವುದನ್ನು ನೋಡಿದ್ದೇನೆ. ಇಂಥ ವಿಚಾರಗಳಲ್ಲಿ ಅಧಿಕಾರಿಗಳೂ ಇದ್ದಾರೆ, ಅಧಿಕಾರೇತರರೂ, ವ್ಯಾಪಾರಸ್ಥರೂ ಇದ್ದಾರೆ. ನನ್ನ ಕೆಲಸದಲ್ಲಿ ನನ್ನ ಪಕ್ಷ ಪಕ್ಷ ಬೇರೆ ಅಂತ ಇಲ್ಲ. ನಾನು ಯಾವ ಪಕ್ಷವನ್ನು ನೋಡುತ್ತೇನೆ. ಎಂದರೆ ಕಳ್ಳರ ಪಕ್ಷ ಹಾಗೂ ಕಳ್ಳರನ್ನು ಹಿಡಿಯುವ ಪಕ್ಷ ಇವೆರಡನ್ನು ಮಾತ್ರ ನೋಡುತ್ತೇನೆ

ಶ್ರೀ ಬಂಗಾರಪ್ಪನವರು ಹೇಳಿದ ಹಾಗೆ ಸರ್ಕಾರ ಎಲ್ಲವನ್ನೂ ನೋಡಬೇಕು ನಿಜ. ಮಂತ್ರಿಯಾಗಿ ಬಂದು ಪಗಾರ ತಿನ್ನುತ್ತೇನೆ. ಆದ್ದರಿಂದ ನನ್ನ ಕೆಲಸವನ್ನು ನಾನು ಮಾಡಬೇಕು. ಆದಕ್ಕೆ ಮಾನ್ಯ ಸದಸ್ಯರಿಂದ ಸಹಾಯ ಬೇಡುವುದಿಲ್ಲ ತಾವೆಲ್ಲ ಜನತೆಯ ಪ್ರತಿನಿಧಿಗಳು ಮುಂದೆ ಮಂತ್ರಿಗಳಾಗುವವರಿದ್ದೀರಿ. ದೇಶದಲ್ಲಿ ನಡೆಯುತಕ್ಕ ಅನಾಹುತವನ್ನು ತಪ್ಪಿಸಬೇಕಾದರೆ ಅದಕ್ಕೆ ನಾವು ನೀವು ಕೂಡಿ ಕೆಲಸ ಮಾಡಬೇಕು. ಲಂಚಕೋರತನವನ್ನು ಒಂದೇ ದಿವಸದಲ್ಲಿ ತೆಗೆಯುವುದಕ್ಕೆ ಸಾಧ್ಯವಿಲ್ಲ. ಹಾಗೆ ಮಾಡಬೇಕಾದರೇ ಜಾದೂ ಮಾಡಬೇಕಷ್ಟೆ. ನಿಮ್ಮ ಸರ್ಕಾರ ಬಂದರೆ ಮಾಡುತ್ತೇವೆಂದರೆ ಅದು ನಿಮ್ಮಿಂದಲೂ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ. — ಅಂಥವರಿಗೆ ಬೇಡಿ ಹಾಕಿ ಮೆರವಣಿಗೆ ಮಾಡಿರಿ.

ಶ್ರೀ ಕೆ. ಎಚ್ ಪಾಟೀಲ್. — ಇದರೊಳಗೆ ಮಾನ್ಯ ಸದಸ್ಯರ ಸಹಕಾರ ಬೇಕು. ಎಷ್ಟೋ ಜನ ಸದಸ್ಯರು ಮಂತ್ರಿಗಳ ಹತ್ತಿರ ಬಂದು ಇಂಥವರನು ಬಿಡಿ ಇಂಥವರನ್ನು ಹಿಡಿಯಿರಿ ಎಂದು ಹೇಳುತ್ತಾರೆ. ಇಂಥ ಅಧಿಕಾರಿಯನ್ನು ವರ್ಗ ಮಾಡಬೇಡಿ ಎಂದು ಹೇಳುತ್ತಾರೆ ಲಂಚಕೋರತನ ಇರುವಾಗ ಅಧಿಕಾರಿಗಳನ್ನು ವರ್ಗ ಮಾಡಿದರೆ ಅಂಥವರನ್ನು ವರ್ಗಮಾಡಬೇಡಿ ಎಂದು ಮಂತ್ರಿಗಳಲ್ಲಿ ಬಂದು ಹೇಳಿದರೆ ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಎಸ್. ಬಂಗಾರಪ್ಪ — ಮಂತ್ರಿಗಿರಿ ಹೋದರೂ ಚಿಂತೆ ಇಲ್ಲ ಎಂದು ಬೇಡಿ ಹಾಕಿಸಿ ಪೆರೇಡ್ ಮಾಡಿಸಿರಿ ಪತ್ರಿಕೆಗಳಲ್ಲಿ ಅವರ ಫೋಟೊ ಹಾಕಿಸಿರಿ.

ಶ್ರೀ ಕೆ. ಎಚ್. ಪಾಟೀಲ್. — ಮಂತ್ರಿಗಳು ಸಹ ಕಾನೂನಿಗೆ ಒಳಪಡಲೇ ಬೇಕಾಗುತ್ತದೆ. ಇಂಡಿಯನ್ ಪೀನಲ್ ಕೋಡ್ ಕ್ರಿಮಿನಲ್ ಪ್ರೊಸೀಜರ್ ಕೋಡ್ ಇವೆ. ಮಂತ್ರಿಯಾಗಿದ್ದರೂ ಮತ್ತೊಬ್ಬರಿಗೆ ಬೇಡಿ ಹಾಕಿಸಿ ಮೆರವಣಿಗೆ ಮಾಡಲಿಕ್ಕೆ ಹೋದರೆ ಅದು ಗುನೆಯಾಗುತ್ತದೆ. ಮಾನ್ಯ ಸದಸ್ಯರು ಒಳ್ಳೆಯ ವಕೀಲರಿದ್ದಾರೆ, ಅವರಿಗೆ ಹೇಳಬೇಕಾಗಿಲ್ಲ ಇದೇ ಸದನದಲ್ಲಿ ಎಲ್ಲ ಅಧಿಕಾರವನ್ನೂ ನನಗೆ ಕೊಡುವುದಾದರೆ ಕಾಳಸಂತೆಕೋರರಿಲ್ಲದೆ ಮಾಡಬಹುದು. ಒಮ್ಮೊಮ್ಮೆ ನಮ್ಮ ಅಧಿಕಾರಿಗಳು ಪ್ರಾಮಾಣಿಕವಾಗಿ ಹಿಡಿದಂಥ ಕೇಸುಗಳು ನಿಜಾಂಶವಿರತಕ್ಕ ಕಟ್ಟಳೆಗಳು ಮ್ಯಾಜಿಸ್ಟ್ರೇಟರ್ ಮುಂದೆ ಹೋದಾಗ ಸರಿಯಾದ ರುಜುವಾತು ಸಿಕ್ಕಲಿಲ್ಲವೆಂದು ಕ್ವಾಷ್ ಆಗತಕ್ಕ ಸಂದರ್ಭಗಳಿವೆ ಇಂಥದ್ದು ನಡೆದಾಗ ನಾನು ಜುಡಿಷಿಯರಿಯನ್ನು ಟೀಕೆ ಮಾಡುವುದು ಸಾಧ್ಯವಿದೆಯೇ? ಉಗ್ರ ಕ್ರಮಂಗಳನ್ನು ತೆಗೆದುಕೊಳ್ಳಬೇಕಾದರೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಇಂಡಿಯನ್ ಪೀನಲ್ ಕೋಡ್ ಇಂಥ ಕಾನೂನುಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕಾಗುತ್ತದೆ ಅದಕ್ಕೆ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಪಾರ್ಲಿಮೆಂಟಿಗೆ ಹೋಗಬೇಕಾಗುತ್ತದೆ,

(ಶ್ರೀ ಕೆ. ಹೆಚ್. ಪಾಟೀಲ್)

ಮಾನ್ಯ ಸದಸ್ಯರು ಅನೇಕ ಸ್ವಾಗತಾರ್ಹವಾದ ಟೀಕೆಗಳನ್ನು ಮಾಡಿರುತ್ತಾರೆ ಅವೆಲ್ಲವನ್ನೂ ಗಮನ ದಲ್ಲಿಟ್ಟು ಕೊಳ್ಳುತ್ತೇನೆ. ಅವರು ಒಂದು ವೇಳೆ ಅವಾಚ್ಯ ಶಬ್ದಗಳಿಂದ ಟೀಕಿಸಿದ್ದರೂ ಸಹ ಅದರ ಹಿನ್ನಲೆ ಯಲ್ಲಿ ಸದಸ್ಯರ ಅಭಿಪ್ರಾಯವೇನಿದೆ ಅದರಂತೆ ನಡೆಯಲು ಪ್ರಯತ್ನ ಮಾಡುತ್ತೇನೆ. ಅದರ ಜೊತೆಗೆ ತಾವೆಲ್ಲ ಮಾನ್ಯ ಸದಸ್ಯರು ದೇಶದ ಜನತೆಗೆ ಜವಾಬ್ದಾರರಾಗಿರುವವರು ಆಹಾರ ಧಾನ್ಯವಿದ್ದರೂ ರಾಜ್ಯ ದಲ್ಲಿ ಆಹಾರದ ಅಭಾವವಿದೆ ಎಂದು ಹೇಳುವುದಕ್ಕೆ ಪ್ರಯತ್ನ ಮಾಡಬಾರದು. ಭಾರತದ ಎಲ್ಲ ರಾಜ್ಯಗಳಿ-ಗಿಂತಲೂ ಕರ್ನಾಟಕ ರಾಜ್ಯ ಆಹಾರದ ವಿಷಯದಲ್ಲಿ ತನ್ನದೇ ಆದ ಸ್ಥಾನಮಾನವನ್ನು ಕಾಪಾಡಿಕೊಂಡು ಬಂದಿದೆ ಮಾನ್ಯ ಸದಸ್ಯರು ಹೇಳುವ ವಿಚಾರಗಳಿಂದ ಅದಕ್ಕೆ ಮತ್ತಷ್ಟು ಹಾನಿಯಾಗುತ್ತದೆ. ಅದರಿಂದ ನಮ್ಮ ರಾಜ್ಯಕ್ಕೆ ಸಿಕ್ಕಬೇಕಾದ ಲಾಭ ಸಿಕ್ಕುವುದಿಲ್ಲ. ಕೇಂದ್ರದಿಂದ ಬರತಕ್ಕ ಸಹಾಯ ಬರುವುದಿಲ್ಲ. ನಾವು ಯಾವ ರೀತಿಯಾ ಕಾರ್ಯಕ್ರಮವನ್ನು ತೆಗೆದುಕೊಂಡರೂ ಜನತೆಯ ಕಲ್ಯಾಣದತ್ತ ಗಮನಕೊಡಬೇಕೆಂದು ಹೇಳುತ್ತೇನೆ.

ಮಾನ್ಯ ಸದಸ್ಯರಾದ ಬಂಗಾರಪ್ಪ ಕೋಣಂದೂರು ಲಿಂಗಪ್ಪ ಇವರೆಲ್ಲ ಹಳ್ಳಿಗಾಡಿನ ಜನರ ಬಗ್ಗೆ ಏನು ಮಾಡಿದ್ದೇವೆಂದು ಕೇಳಿದರು. ಅವರು ಹೇಳಿದುದನ್ನು ಕೇಳಿ ನನ್ನ ಮನಸ್ಸಿಗೂ ವ್ಯಥೆ ಅನಿಸುತ್ತದೆ. ಹಳ್ಳಿ ಯಿಂದ ಧಾನ್ಯವನ್ನು ತಂದು ಬೆಂಗಳೂರಿನ ಜನತೆಗೆ ಸರಬರಾಜು ಮಾಡುತ್ತೇವೆ. ಬೆಂಗಳೂರು ರಾಜ್ಯದ ರಾಜಧಾನಿ. ಇಲ್ಲಿ ಉಪವಾಸ ಚಳುವಳಿಗಳಾಗುತ್ತವೆ. ಇದು ಯಾತ್ರಿಗೂ ರಾಜಕೀಯ ದೃಷ್ಟಿಯಿಂದ ನಡೆದು ಕೊಂಡು ಬಂದಿದೆ. ಆದರೆ ಇದನ್ನು ಒಮ್ಮೆಗೆ ಬದಲಾವಣೆ ಮಾಡಿದರೆ ಸರಿಯಾಗುವುದಿಲ್ಲವೆಂದು ತಮಗೂ ಗೊತ್ತಿದೆ.

ಶ್ರೀ ಕೆ. ಪ್ರಭಾಕರ್.—ಅವರು ವಲ್ನರಬಲ್ ಸೆಕ್ಷನ್ ವಿಚಾರ ಹೇಳಿದರು ಆದರೆ ವಲ್ನರಬಲ್ ಸೆಕ್ಷನ್ ಎಂದರೆ ಯಾರು ? ಯಾರಿಗೆ ಹೊಲವಿಲ್ಲವೊ ಅವರೇ ? ಹಾಗಾದರೆ ಮನೆಮಾರುಳಿದ್ದು ಹೊಲವಿಲ್ಲದೆ ಇರುವವರೆಲ್ಲ ವಲ್ನರಬಲ್ ಸೆಕ್ಷನ್‌ನಲ್ಲಿ ಬರುತ್ತಾರೆಯೇ ? ಈ ಬಗ್ಗೆ ಮಾನ್ಯ ಸದಸ್ಯರು ಒಂದು ನೋಟ್ ಕೊಡುವುದಾಗಿ ಹೇಳಿದ್ದಾರೆ ಅದು ಬಂದ ನಂತರ ಮುಂದಿನ ವರ್ಷ ಲೆವಿ ಸಂಬಂಧವಾಗಿ ಆಹಾರ ಧಾನ್ಯಗಳ ಧಾರಣೆ ವಿಷಯವಾಗಿ ನಿರ್ಧಾರ ತೆಗೆದುಕೊಳ್ಳುವಾಗ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

2-30 P.M.

ಇನ್ನು ಆಹಾರ ಹಂಚಿಕೆಯ ವಿಷಯದ ಬಗ್ಗೆ ಕೆಲವು ಸದಸ್ಯರು ಬಹಳ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಸಲಹೆಗಳನ್ನು ಅವರು ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಉಪಕೃತ. ಆಹಾರ ಹಂಚಿಕೆಯ ವಿಷಯದಲ್ಲಿ ಹೋಲ್‌ಸೇಲ್ ರೀಟೇಲ್ ಡೀಲರ್ಸ್ ಎಂದು ಮೊದಲಿನಿಂದಲೂ ಬಂದಿದೆ ಅದು ನನಗಿನ್ನೂ ಏನು ಎಂದು ಅರ್ಥವಾಗಿಲ್ಲ. ಅದರ ಬಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದೇನೆ ವಿಚಾರ ವಿನಿಮಯ ಮಾಡಿ ತೀವ್ರವಾಗಿ ಕನ್‌ಸ್ಯೂಮರ್ಸ್ ಇಂಟ್ರೆಸ್ಟಿನಿಂದ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಕನ್‌ಸ್ಯೂಮರ್ಸ್‌ಗೆ ಶಕ್ಯವಾದಷ್ಟು ಕಡಿಮೆ ಬೆಲೆಗೆ ಸಿಗುವಂತೆ ಮಾಡಿ ರೈತರು ಹಾಗೂ ಕನ್‌ಸ್ಯೂಮರ್ಸ್ ಉತ್ತಮವಾಗಿ ಬಾಳುವಂತೆ ಮಾಡಬೇಕೆಂಬುದೇ ನಮ್ಮ ಸರ್ಕಾರದ ಧೋರಣೆಯಾಗಿದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಯಾವುದಾದರೂ ಟೀಕೆಗಳ ಬಗ್ಗೆ ನಾನು ಇಲ್ಲಿ ಉತ್ತರ ಹೇಳುವುದನ್ನು ಬಿಟ್ಟಿದ್ದರೆ ಆ ಟೀಕೆ ಗಳನ್ನು ಸಹ ಗಮನದಲ್ಲಿಟ್ಟುಕೊಂಡು ಅವರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ ಯಾವುವೇ ಅಭಿಪ್ರಾಯವನ್ನು ವ್ಯಕ್ತಮಾಡದೆ ಲಂಚಕೋರರು-ಲೂಟಿ ಜನರು ಎನ್ನುವಂಥ ಮಾತುಗಳನ್ನು ಅವರು ಹೇಳಿದ್ದಾರೆ. ಆ ಮಾತುಗಳನ್ನು ತಾವೇ ತಿದ್ದಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನ ಮುಗಿಸುತ್ತೇನೆ.

MADAM SPEAKER.—The Discussion is concluded. the house now stands adjourned to meet again on Friday the 16th at 1 p m.

The house adjourned at Thirtyone Minutes past Two of the Clock to meet again at one of the Clock On Friday the 16th August 1974.